# ಹೂತ್ತಿದ ಹುಣಸಿ

## (ದ.ರಾ. ಬೇಂದ್ರೆ ಕಾವ್ಯವಿಮರ್ಶೆ)

ಡಾ॥ ಜಿ. ಕೃಷ್ಣಪ್ಪ



ಶ್ರೀರಂಗ ಪ್ರಕಾಶನ, ಮೈಸೂರು

# ಹೂತಽದ ಹುಣಿಸಿ

## (ದ.ರಾ. ಬೇಂದ್ರೆ ಕಾವ್ಯವಿಮರ್ಶೆ)

ಡಾ|| ಜಿ. ಕೃಷ್ಣಪ್ಪ

ಶ್ರೀರಂಗ ಪ್ರಕಾಶನ, ಮೈಸೂರು

Hootaada Hunasi: A Criticism on D.R. Bendre's poetry in kannada by Dr. G. Krishnappa No.6, Bhavani Appartments, 4th cross, Kalyana Nagar, Dharavad - 580 007. Published by Sriranga Prakashana, B-22, CFTRI Quarters, Mysore.

first edition - 2000; pages : xvi + ೧೨೦ price Rs. 50/-



ಮೊದಲನೆಯ ಮುದ್ರಣ : ನವಂಬರ್ ೨೦೦೦

ಪುಟಗಳು : xvi + ೧೨೦

ಮುಖಪುಟದ ಚಿತ್ರ : ಎಸ್.ಬಿ.ಎಂ. ಮಂಜು

ಹಿಂಬದಿ ಪುಟದ ಚಿತ್ರ : ಅರ್ಕೇಶ್

ಬೆಲೆ : ರೂ.೫೦.೦೦ (ಐವತ್ತು ರೂಪಾಯಿಗಳು ಮಾತ್ರ)

ಪ್ರತಿಗಳಿಗೆ : ಶ್ರೀರಂಗ ಪ್ರಕಾಶನ
ನಂ. ಬಿ. ೨೨,
ಸಿಎಫ್‌ಟಿಆರ್‌ಐ ಕಾಲೋನಿ
ಮೈಸೂರು ೫೭೦ ೦೧೩

ಮುದ್ರಕರು
ಗುಡ್‌ಟಚ್ ಆಫ್‌ಸೆಟ್ ಪ್ರಿಂಟರ್ಸ್
ಪ್ರೀಮಿಯರ್ ಸ್ಟುಡಿಯೋ ಸಂಕೀರ್ಣ
ಜಯಲಕ್ಷ್ಮೀಪುರಂ,
ಮೈಸೂರು ೫೭೦ ೦೧೨.

# ಅರ್ಪಣ

ನನ್ನ ಬೇಂದ್ರೆ ಕಾವ್ಯಾಧ್ಯಯನಕ್ಕೆ ತುಂಬು
ಪ್ರೋತ್ಸಾಹ  ನೀಡುತ್ತಿರುವ
ವರಕವಿ ದ.ರಾ. ಬೇಂದ್ರೆಯವರ ಮಕ್ಕಳಾದ

**ಶ್ರೀ ಪಾಂಡುರಂಗ ಬೇಂದ್ರೆ**

**ಡಾ॥ ವಾಮನ ಬೇಂದ್ರೆ**

ಮತ್ತು

**ಸೌ॥ ಮಂಗಳ**

ಅವರಿಗೆ ಅತ್ಯಂತ ಗೌರವದಿಂದ

# ಅರಿಕೆ

ನಾನೊಬ್ಬ ವರಕವಿ ದ.ರಾ. ಬೇಂದ್ರೆಯವರ ಕಾವ್ಯಾಭ್ಯಾಸಿ. ಅವರ ಕಾವ್ಯದ ಗುಂಗಿಗೆ ಒಳಗಾಗಿ ಅವರ ಕಾವ್ಯವನ್ನು ನಾಡಿನ ಮಕ್ಕಳಿಗೆ ಸಾರುತ್ತ; ಆನಂದಲಹರಿಯಲ್ಲಿ ಕುಣಿಯುತ್ತ, ಅದರ ಅಂತರಾಳವನ್ನು ತಿಳಿಯಲು ಪ್ರಯತ್ನಿಸಿದವನು. ರೈತ ಕುಟುಂಬದ ಹಿನ್ನೆಲೆಯಲ್ಲಿ ಬಡತನದ ಬಾಳಿನಲ್ಲಿ ಬೆಳಕನ್ನು ಕಾಣುತ್ತ ಸಾಗಿದಂತೆ ಈ ನೆಲದ ಬಡವರ, ದೀನದಲಿತರ ನೋವಿನ ದನಿಯ ಬೇಂದ್ರೆ ಕಾವ್ಯ ಒಂದು ಆತ್ಮೀಯ ನುಡಿಯಂತೆ ನನ್ನನ್ನು ಆವರಿಸಿತು. ಬೇಂದ್ರೆ ಕಾವ್ಯ ಓದುಗನನ್ನೂ ಕೇಳುಗನನ್ನೂ ಒಟ್ಟಿಗೆ ತನ್ನತ್ತ ಸೆಳೆದುಕೊಂಡು 'ಜೀವದ ಮಾತು ಆಡಿದ್ಹಾಂಗ । ಎದ್ಯಾಗ ನಟ್ಟಿತ್ತ' ಎಂಬುದನ್ನು ಅನುಭವವಾಗಿಸುವ ಚುಂಬಕಶಕ್ತಿ. ಅವರ ಕಾವ್ಯದ ಒಳಹೊಕ್ಕು ಪ್ರತಿಪದದ ಹಿಂದಿನ ಕಾವ್ಯಾರ್ಥವನ್ನು ತಿಳಿದಾಗ ಬೇಂದ್ರೆ ಜನಪದರ ನುಡಿಯ ಕಸುವನ್ನು ತಿಳಿದು ಅದನ್ನು ಕಾವ್ಯ ಭಾಷೆಯಾಗಿಸಿದ್ದು ಸ್ಪಷ್ಟ.

ಸರ್ಕಾರಿ ಕೆಲಸದಲ್ಲಿ ಊರೂರು ಸುತ್ತುತ್ತ ಸಾಗಿದಂತೆ ತನು ಕನ್ನಡ ಮನ ಕನ್ನಡವೆಂದು ಕನ್ನಡಕ್ಕೆ ಅರ್ಪಿಸಿಕೊಂಡ ಶಾಲಾ ಶಿಕ್ಷಕರು, ಕಾಲೇಜಿನ ಉಪನ್ಯಾಸಕರು, ಪ್ರಾಧ್ಯಾಪಕರುಗಳು ಪರಿಚಿತವಾಗಿ ನಾನು ಕನ್ನಡವನ್ನು ಸರಿಯಾಗಿ ತಿಳಿಯಲು; ಬೇಂದ್ರೆ ಕಾವ್ಯವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಯಿತು. ಡಾ॥ಕೆ.ಅನಂತರಾಮು, ಡಾ॥ವಾಮನಬೇಂದ್ರೆ, ಪ್ರೊ॥ಎಚ್.ಎಸ್.ಹರಿಶಂಕರ, ಡಾ॥ಸಿ.ಪಿ.ಕೆ., ಪ್ರೊ॥ಸುಜನಾ, ಪ್ರೊ॥ಶಿವರಾಮುಕಾಡನಕುಪ್ಪೆ, ಶ್ರೀ ಕ್ಯಾತನಹಳ್ಳಿ ರಾಮಣ್ಣ, ಡಾ॥ ಶಂಕರ ಮೊಕಾಶಿ ಪುಣೇಕರ, ಮಾತ್ರ್ಯ ಶ್ರೀ ಗಿರಿಜಾ ಶಂಕರ ಮೊಕಾಶಿ ಪುಣೇಕರ ಡಾ॥ ಕೆ.ಎಸ್. ಶರ್ಮಾ ಮತ್ತು ಪ್ರೊ॥ ಮಲೆಯೂರು ಗುರುಸ್ವಾಮಿ ಅವರ ಮಾರ್ಗದರ್ಶನದಿಂದ ನನ್ನ ಅಧ್ಯಯನ ಪುಷ್ಟಿ ಪಡೆಯಿತು. ಪ್ರೊ॥ ಸುಧಾಕರ ಅವರು ಬೇಂದ್ರೆ ಕಾವ್ಯದ ಜನಪದ ನುಡಿಗಳ ಸರಿಯಾದ ಅರ್ಥ ತಿಳಿದು ವಿಮರ್ಶಿಸಲು ನೀಡಿದ ಮಾರ್ಗದರ್ಶನ ನನಗೆ ಹೊಸ ದೃಷ್ಟಿ ನೀಡಿತು.

ನನ್ನ ತಿಳಿವಿನ ಮಿತಿಯಲ್ಲಿ ನಾನು ಬೇಂದ್ರೆ ಕಾವ್ಯವನ್ನು ಅರ್ಥಮಾಡಿಕೊಂಡು ರಚಿಸಿರುವ ವಿಮರ್ಶೆ 'ಹೂತsದ ಹುಣಸಿ' ಯು ಸಹೃದಯರಿಗೆ ಬೇಂದ್ರೆ ಕಾವ್ಯದ ಹುಳಿ, ಒಗರು ನೀಡಿ ಬಾಯೊಸರುವಿಕೆಗೆ ಕಾರಣವಾದರೆ ನಾನು ಧನ್ಯ. 'ಹೂತsದ' ಪದ 'ಹೂಬಿಟ್ಟ' ಎಂಬುದರ ಸುಂದರ ರೂಪ. ಎಳೆದು ಮಾತನಾಡುವ ಧಾರವಾಡದ ನುಡಿಯ ಸೊಬಗನ್ನು ಆಲಿಸಿ ಆನಂದಿಸಬೇಕಾಗಿದೆ. ಅದು ಅಲ್ಲಿಯ ಲಯ, ನಾದ, ಆತ್ಮೀಯ ಭಾವವನ್ನು ಒಳಗೊಂಡಿದೆ. ಆ ನೆಲದ ಜನರ ನುಡಿಯನ್ನು ಬೇಂದ್ರೆಯವರು ಕಾವ್ಯವಾಗಿಸಿರುವುದನ್ನು ಕೇಳಿ, ಓದಿ ಸವಿಯಬೇಕಾಗಿದೆ.

ಈ ವಿಮರ್ಶಾಕೃತಿಯಲ್ಲಿ ೧೯೩೭ರಲ್ಲಿ ಪ್ರಕಟವಾದ 'ಸಖೀಗೀತ' ಸಂಕಲನದ 'ಹೂತsದ ಹುಣಸಿ' ಕವನದಿಂದ ಬೇಂದ್ರೆಯವರ ಮರಣೋತ್ತರ ಕವನ ಸಂಕಲನ 'ಕಾವ್ಯವೈಖರಿ' ವರೆಗಿನ ಕೆಲವು ಕವನಗಳನ್ನು ಆಯ್ದು ವಿಮರ್ಶಿಸಿದ್ದೇನೆ. ಈ ಕೃತಿಯಲ್ಲಿ ಕಾವ್ಯಾಭ್ಯಾಸಿಗಳಿಗೆ ಅನುಕೂಲವಾಗಲೆಂದು ಸಂಪೂರ್ಣ ಕವನಗಳನ್ನು ಮುದ್ರಿಸಲು ನನಗಾಗಿಯೇ ಡಾ॥ ವಾಮನ ಬೇಂದ್ರೆಯವರು ಅನುಮತಿ ಕೊಟ್ಟಿದ್ದಾರೆ. ಈ ಕವನಗಳನ್ನು ಯಾರೇ, ಎಲ್ಲಿಯೇ ಬಳಸುವುದಾದಲ್ಲಿ, ಡಾ॥ ವಾಮನ ಬೇಂದ್ರೆಯವರೊಂದಿಗೆ ಪ್ರತ್ಯೇಕವಾಗಿ ವ್ಯವಹರಿಸಿ ಅನುಮತಿ ಪಡೆಯಬೇಕಾಗುತ್ತದೆ. ಅಧಿಕೃತವಾದ ಅನುಮತಿಯಿಲ್ಲದೆ ಬೇಂದ್ರೆಯವರ ಕವನ ಅಥವಾ ಸಾಹಿತ್ಯಭಾಗವನ್ನು ಮುದ್ರಿಸುವುದು ಮೂಲ ಲೇಖಕರಿಗೆ ಅನ್ಯಾಯ ಮಾಡಿದಂತಾಗುತ್ತದೆ ಎಂಬುದು ನನ್ನ ಸ್ಪಷ್ಟ ಅಭಿಪ್ರಾಯವಾಗಿದೆ.

'ಶತಮಾನದ ಕವಿತೆ ಜೋಗಿ' ಕೃತಿಯಲ್ಲಿ ನನ್ನ ಜೋಗಿ ಕಾವ್ಯ ವಿಮರ್ಶೆ 'ಸಾಧನೆಯ ಸಿದ್ಧಿ' ಪ್ರಕಟಿಸಿದ ನಿರ್ದೇಶಕರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ ಅವರಿಗೆ; 'ಶ್ರೀ ವಿವೇಕಾನಂದ ಶಿಖರ ಪ್ರಗಾಥ' ಕಾವ್ಯ ವಿಮರ್ಶೆಯನ್ನು 'ನವಚಿಂತನ' ತ್ರೈಮಾಸಿಕದಲ್ಲಿ ಪ್ರಕಟಿಸಿದ ಧಾರವಾಡದ ರಾಮಕೃಷ್ಣ ವಿವೇಕಾನಂದ ಆಶ್ರಮದ ಶ್ರೀ ಸ್ವಾಮಿ ವಿಜಯಾನಂದ ಸರಸ್ವತಿ

ಅವರಿಗೆ; 'ನಾಕುತಂತಿ' ಕಾವ್ಯ ವಿಮರ್ಶೆ ಪುಸ್ತಿಕೆಯನ್ನು ಪ್ರಕಟಿಸಿದ ಪ್ರೊ||ಚಿ.ಶ್ರೀನಿವಾಸರಾಜು, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು ಅವರಿಗೆ ನನ್ನ ನಮನಗಳು.

ತಮ್ಮ ಇಳಿವಯಸ್ಸಿನಲ್ಲಿ ಡಾ|| ಶಂಕರ ಮೊಕಾಶಿ ಪುಣೇಕರ ಅವರು ತುಂಬು ಆಸಕ್ತಿಯಿಂದ ನನ್ನ ವಿಮರ್ಶೆಯನ್ನು ಓದಿ, ಮಾರ್ಗದರ್ಶನ ನೀಡಿ ಈ ಕೃತಿಗೆ ಮುನ್ನುಡಿಯನ್ನು ಬರೆದುಕೊಟ್ಟು ನನ್ನನ್ನು ಹರಸಿದ್ದಾರೆ. ಅವರಿಗೆ ನನ್ನ ವಿಶೇಷ ಕೃತಜ್ಞತೆಗಳು.

ನನ್ನ ಬೇಂದ್ರೆ ಕಾವ್ಯಾಧ್ಯಯನಕ್ಕೆ ಎಲ್ಲಾ ಸಹಾಯವನ್ನು ನೀಡಿ ಪ್ರೋತ್ಸಾಹಿಸುತ್ತಿರುವ ವರಕವಿ ದ.ರಾ.ಬೇಂದ್ರೆಯವರ ಮಕ್ಕಳಾದ ಶ್ರೀ ಪಾಂಡುರಂಗ ಬೇಂದ್ರೆ, ಡಾ|| ವಾಮನ ಬೇಂದ್ರೆ ಮತ್ತು ಸೌ|| ಮಂಗಳ ಅವರಿಗೆ ಈ ಕೃತಿಯನ್ನು ಸಮರ್ಪಿಸಿದ್ದೇನೆ. ಇದನ್ನವರು ಪ್ರೀತಿಯಿಂದ ಸ್ವೀಕರಿಸಿ ನನ್ನನ್ನು ಆಶೀರ್ವದಿಸಬೇಕೆಂದು ಪ್ರಾರ್ಥಿಸುತ್ತೇನೆ.

ನನ್ನ ಸಾಹಿತ್ಯ ಪ್ರಕೃತಿಗೆ ನೀರೆರೆಯುತ್ತ ಅದು ಚಿಗುರುವಂತೆ ಮಾಡುತ್ತಿರುವ ನನ್ನ ಧರ್ಮಪತ್ನಿ ಶ್ರೀಮತಿ ಸರೋಜ, ಮಕ್ಕಳಾದ ಕುಮಾರಿ ಬಿ.ಕೆ. ತೃಪ್ತಿ, ಬಿ.ಕೆ. ಶಾಂತಲ ಹಾಗೂ ಕುಮಾರ ಬಿ.ಕೆ. ಶ್ರೀರಂಗ ಇವರಿಗೆ ಹೃತ್ಪೂರ್ವಕ ಶುಭಾಶಯಗಳು. ಅವರ ಕರ್ತವ್ಯ ಪ್ರಜ್ಞೆ ನನ್ನೊಂದಿಗೆ ಸತತವಾಗಿ ಸಹಕರಿಸುತ್ತಿರಲಿ ಎಂಬುದೊಂದೆ ಹಾರೈಕೆ.

ನನ್ನ ಮೋಟಾರು ವಾಹನಗಳ ಹಿರಿಯ ನಿರೀಕ್ಷಕನ ಕೆಲಸದ ಜೊತೆಗೆ ಬೇಂದ್ರೆ ಕಾವ್ಯಾಧ್ಯಯನವನ್ನು ಮಾಡಲು ಪ್ರೋತ್ಸಾಹಿಸಿ ಸಹಕಾರ ನೀಡುತ್ತಿರುವ ಮೋಟಾರು ವಾಹನ ಇಲಾಖೆಯ ಎಲ್ಲ ಅಧಿಕಾರಿಗಳಿಗೆ ಮತ್ತು ಸಹೋದ್ಯೋಗಿ ಮಿತ್ರರಿಗೆ ನಾನು ಋಣಿಯಾಗಿರುವೆ. ಈ ಕೃತಿಯನ್ನು ಪ್ರಕಾಶಿಸುತ್ತಿರುವ ಶ್ರೀರಂಗ ಪ್ರಕಾಶನದ ಶ್ರೀಮತಿ ಸರೋಜಮ್ಮ ರಂಗಧಾಮಯ್ಯ ಅವರಿಗೆ; ನನ್ನ ನಮಸ್ಕಾರಗಳು.

ಧಾರವಾಡ
೨೪.೯.೨೦೦೦

**ಡಾ|| ಜಿ. ಕೃಷ್ಣಪ್ಪ**

# ಮುನ್ನುಡಿ

ಬೇಂದ್ರೆ ಕನ್ನಡವನ್ನು ಪರಿಪರಿಯಾಗಿ ಮಿದ್ದಿ ನಾದಿ ತಮ್ಮ ಕಾವ್ಯಕ್ಕಾಗಿ ಹದಗೊಳಿಸಿದರು. ಎಷ್ಟು ಪರಿಪರಿಯಾಗಿ ಯಥಾರ್ಥವಾಗಿ ಹದ ಗೊಳಿಸಿದರೆಂಬುದನ್ನು ಅರಿತುಕೊಳ್ಳುವುದಕ್ಕೆ ಡಾ॥ ಜಿ.ಕೃಷ್ಣಪ್ಪನವರನ್ನು ಓದಬೇಕು. ಆಮೇಲೆಯಷ್ಟೇ ನಾವು ಬೇಂದ್ರೆಯವರನ್ನು ಸರಿಯಾಗಿ ಓದಬಲ್ಲೆವು. ಜಾನಪದ ಭಾಷೆಯನ್ನು ತಮ್ಮ ಅರ್ಥವಿಸ್ತಾರಕ್ಕಾಗಿ ಬಳಸಿಕೊಂಡರೆಂಬುದು ಸತ್ಯವೇ; ಹಾಗೆ ಹೇಳಿಬಿಟ್ಟರೆ ನಮಗೇನೂ ಲಾಭವಿಲ್ಲ. ಎಷ್ಟು ಪರಿಯಾಗಿ ಮಿದ್ದಿದರು, ನಾದಿದರು ಎಂಬುದರ ಯಥಾರ್ಥ ಜ್ಞಾನವಾಗಬೇಕಿದ್ದರೆ ಜಿ.ಕೃಷ್ಣಪ್ಪನವರ ಪ್ರಬಂಧಗಳನ್ನು ಓದಬೇಕು. ಆಗ ಬೇಂದ್ರೆಯವರ ಕೃಷಿಯನ್ನು ಸ್ವಲ್ಪ ಮಟ್ಟಿಗೆ ತಿಳಿದುಕೊಳ್ಳಬಲ್ಲೆವು. ಆ ರೀತಿಯಲ್ಲಿ ಬೇಂದ್ರೆ ವಿಮರ್ಶೆಯಲ್ಲಿ ಜಿ. ಕೃಷ್ಣಪ್ಪನವರಿಗೆ ಅಪೂರ್ವ ಸ್ಥಾನವಿದೆ. ಅವರ ನಿಬಂಧಗಳನ್ನು ಓದುವವರೆಗೆ ನಾನೂ ಬೇಂದ್ರೆಯವರನ್ನು ತಿಳಿದುಕೊಳ್ಳಬಲ್ಲೆ ಎಂಬ ಆತ್ಮ ಸಂತೋಷದಲ್ಲಿ ಮುಳುಗಿದ್ದೆ. ಈಗ ನನ್ನ ಸ್ವಾಭಿಮಾನಕ್ಕೆ ತೀವ್ರ ಧಕ್ಕೆ ಬಿದ್ದಿದೆ. ಬೇಂದ್ರೆ ಮಹಾಸಾಗರದಂತೆ. ಅದರ ಆಳಕ್ಕೆ ಇಳಿದಷ್ಟೂ ಮುಂದೆ ಇನ್ನೂ ತಿಳಿದುಕೊಳ್ಳುವದು ಬಹಳಷ್ಟಿದೆ ಎಂಬುವ ಅನುಭವ ಆಗುತ್ತದೆ. ಈ ಹೊಸ ಅತೃಪ್ತಿಯನ್ನು ಹುಟ್ಟಿಸಿದವರು ಜಿ. ಕೃಷ್ಣಪ್ಪ. ಸಾಮಾನ್ಯವೆಂದು ತೋರುವ ಪದ ಪಂಕ್ತಿಯಲ್ಲೂ ಬೇಂದ್ರೆ ನಮ್ಮ ಬುದ್ಧಿಗೆ ನಿಲುಕದ ಏನೋ ಹೊಸ ಅರ್ಥ ಹುದುಗಿಸಿಟ್ಟಿದ್ದಾರೆಂದು ಭಯ ಹುಟ್ಟಿಸಿದರು. ಆ ಭಯದಲ್ಲೇ ನಾನು ಹೊಸ ಅರ್ಥ ವಿಸ್ತಾರವನ್ನು ಹುಡುಕಿಕೊಂಡೆ. ಬೇಂದ್ರೆ ಕಾವ್ಯ ಹಿಗ್ಗಿಸಿದಷ್ಟು ಹಿಗ್ಗುತ್ತದೆ. ಈ ಹಿಗ್ಗಿನ ವಿಸ್ತಾರದಲ್ಲಿ ಒಮ್ಮೊಮ್ಮೆ ದಕ್ಕುವಷ್ಟು ದಕ್ಕಬಹುದು ಆದರೆ ಹಿಗ್ಗು ಹಿಗ್ಗೇ. ಆ ಸುಖದಲ್ಲಿ ನಮ್ಮ ಭಾಷೆಯೂ ಹಿಗ್ಗುತ್ತದೆ. ಇದು ಬೇಂದ್ರೆ ಕಾವ್ಯದ ವೈಶಿಷ್ಟ್ಯವೂ ಹೌದು. ಅಲ್ಲಿ ಅಲ್ಪ ಸಂತೋಷಕ್ಕೆ ಸ್ಥಾನವಿಲ್ಲ. 'ನಾಲ್ಪೆ ಸುಖಮಸ್ತಿ' ಎಂಬುವ ಕವನದ ಗುಪ್ತ ಅರ್ಥ ನನಗೆ ಮೊದಲ ಬಾರಿ ದೃಗ್ಗೋಚರವಾಯ್ತು.

ಬೇಂದ್ರೆ ಕಾವ್ಯ ಕನ್ನಡಿಗರ ಭಾಗ್ಯವಿದ್ದಂತೆ. ಕನ್ನಡ ಭಾಷೆಯ ಪದರು ಪದರೊಳಗೆ ಅಡಗಿದ ಕಾವ್ಯಮಯತೆಯನ್ನು ಬೇಂದ್ರೆ ಹೊರಹೊಮ್ಮಿಸಿದ್ದಾರೆ. ಇದು ಅಕ್ಷರಶಃ ಸತ್ಯ. ಕಾವ್ಯ ಬರೆಯುವದು ಸುಲಭವಾಗಿರಬಹುದು, ಆದರೆ ಬೇಂದ್ರೆಯಂತೆ ಕಾವ್ಯ ಬರೆಯುವದು ಬಹಳ ಕಷ್ಟ. ಬೇಂದ್ರೆ ಕಾವ್ಯದ ಒಳ ಪದರುಗಳಲ್ಲಿ ಹೊಕ್ಕು ಸೇರುವದು ಉನ್ಮತ್ತರಿಗೆ ಮಾತ್ರ ಸಾಧ್ಯ. ಈ ಉನ್ಮಾದ ಇಲ್ಲದ ವಿಮರ್ಶಕನ ಜೀವನ ವ್ಯರ್ಥವೇ ಸರಿ. ಬೇಂದ್ರೆಯವರ ಸಾಮೀಪ್ಯ ಇದ್ದೂ ನನಗೆ ಅನೇಕ ಕವನಗಳ ತಿರುಳು ತಿಳಿಯಲಿಲ್ಲ. ಆ ಲಾಭ ಇಲ್ಲದೇನೆ ಜಿ. ಕೃಷ್ಣಪ್ಪನವರಿಗೆ ಆ ಉನ್ಮಾದ ಸಾಧ್ಯವಾಗಿದೆ.

ಮಾಮರದ ಚಿಗುರನ್ನು ಕನಸಿನಲ್ಲೇ ಕಂಡು
ಕಣ್ಮುಚ್ಚಿ ಕುಕಿಲುತಿಹ ತರುಣ ಪಿಕನಂತೆ

ಅವರ ವಿಮರ್ಶೆ ಆ ಉನ್ಮಾದಕ್ಕೆ ಸಹಕಾರಿಯಾದ ಕುಕಿಲು. ನಾನು ಹೇಳುತ್ತಿರುವ ಮಾತು ಹೊಣೆಗೇಡಿ ಹೇಳಿಕೆಯಲ್ಲ. ಬೇಂದ್ರೆಯಂಥ ಕವಿ ಇರುವಾಗ ಅವರ ಬಗ್ಗೆ ಮುಕ್ತ ಪ್ರಶಂಸೆಯೂ ವಿಮರ್ಶೆಯ ಗುಣವೇ. ನಮ್ಮ ಹಿರಿಯರು ಮಾಮರಕ್ಕೆ 'ಸಹಕಾರ' ಎಂಬ ಅನ್ವರ್ಥಕ ನಾಮದಿಂದ ಕರೆದಿರಬಹುದು. ಬೇಂದ್ರೆಯವರ ಮೇಲಿನ ಪ್ರಬಂಧಗಳಿಗೆ ಈ ಉತ್ಸಾಹಶಕ್ತಿಯೇ ಮೂಲಾಧಾರ. ಬೇಂದ್ರೆ ಬಗ್ಗೆ ಬರೆಯುವಾಗ ನಾವು ನಮ್ಮ ಉತ್ಸಾಹವನ್ನು ಕಳೆದುಕೊಂಡರೆ ಆಗುವ ಹಾನಿ ಅಪಾರ. ಏಕೆಂದರೆ ಒಂದು ಅಕ್ಷರವನ್ನೂ, ಒಂದು ಮಾತ್ರೆಯನ್ನೂ, ಒಂದು ಲಯಕಾರಿಯನ್ನೂ ಬಿಡುವಂತಿಲ್ಲ. ನಾವು ನಿರ್ಲಕ್ಷಿಸಿದ ಒಂದು ಮಾತ್ರೆಯೂ ನಮ್ಮನ್ನು ಅಧೋಗತಿಗೆ ಎಳೆಯಬಲ್ಲುದು. ಇದೇ ಬೇಂದ್ರೆ ಮಾಯೆ. ಅದನ್ನು ದಾಟಿ ಬಂದ ವಿಮರ್ಶಕ ತಿರುಗಿ ಹೋಗಿ ತಾನು ಬರೆದ ವಿಮರ್ಶೆಯನ್ನು ಪುನರಾಲೋಚಿಸಬಹುದು. ಹಾಗೆ ಪುನರಾಲೋಚಿಸಿದರೆ ಅವರ ಅಮುಖ್ಯ ಕವನಗಳಲ್ಲೂ ಅಣಿಮುತ್ತು ಸಿಕ್ಕುತ್ತದೆಂಬುದನ್ನು ನನ್ನ ಸ್ವಾನುಭವದಿಂದ ಹೇಳುತ್ತೇನೆ.

ಹೀಗಾಗಿ ಬೇಂದ್ರೆ ಅಮುಖ್ಯ ಕವನಗಳನ್ನೇ ಬರೆದಿಲ್ಲವೆಂಬುದು ಅನುಭವಕ್ಕೆ ಬರುತ್ತದೆ. ತೀರ ಹಿಂದಿನ ಕವನಗಳಿಂದ ಕಣ್ಣಿಗೆಬಿದ್ದ ಒಂದು ಸುನೀತವನ್ನು ಉದ್ಧರಿಸುವೆ.

ಕೃತಿಯ ರಚಿಸದೆ ಕೃತಾರ್ಥವೆ ಜೀವ? ರಸವಿಮ-
ರ್ಶೆಯು ರಸದ ಯೋಗ ಕೊಡಬಲ್ಲುದೆ?

ಬೇಂದ್ರೆಯವರಿಗೆ ಕವಿಯ ದೀಕ್ಷೆ ಯಾರು ಕೊಟ್ಟರು? ಯಾವಾಗ? ಕಾವ್ಯ ಬರೆಯುವ ಪ್ರಾರಂಭದಿಂದಲೇ ಪೂರ್ಣತೆಯ ದೀಕ್ಷೆ ಕೈಕೊಂಡರು. ಪ್ರಾರಂಭದಿಂದಲೇ Master Piece ಗಳನ್ನೇ ಬರೆದರು.

ಬರಿಗೊಡದ ಬಾಲಿ ಕೊಡನ್ಯಾಕ ತುಂಬಿಲ್ಲ
ದಡದಾಗ ನಿಂತ್ಯೆ ಸುಮ್ಮನೆ । ಕೋಲ.

ಯಾವ ಕಾರಣದಿಂದ ನಾನು ಅವರ ಮೇಲೆ ಅಪೂರ್ಣತೆಯ ದೋಷವನ್ನು ಆರೋಪಿಸಬೇಕು? ಇದು ತೀರ ಹಿಂದೆ ಬರೆದ ಕವನವಾಯಿತು. ಮಧ್ಯವಯಸ್ಕರಾದ ಮೇಲೆ ಬರೆದ 'ಅಳಿಯಾನ ಪತ್ರ ಬಂತು ಗೆಳೆಯಾನ ಅಕ್ಷರದಾಗ । ಘುಳಿಸಾಳಿ ಇಲ್ಲದನ ಜೋರಾ'. ಇಂಥ ಕವನಗ್ಳಳಾದರೂ ತಮ್ಮ ಮಿತಿಯಲ್ಲೇ ಸಂಪೂರ್ಣ ಘಟನೆಯನ್ನು ವರ್ಣಿಸುತ್ತವೆ. ಅಥವಾ

ಟೊಂಕದ ಮೇಲೆ ಕೈ ಇಟಗೊಂಡು
ಬಿಂಕದಾಕಿ ಯಾರ ಈಕಿ?
ಒಂಕಿ ತೋಳ ತೋರಿಸತಾಳ
ಸುಂಕದ ಕಟ್ಟ್ಯವಗ.

ಇದು ಅಮುಖ್ಯಕವನವೆಂದು ಹೇಳುವುದು ಶಕ್ಯವೆ?

ಹೀಗೆ ಬೇಂದ್ರೆಯವರ ಕಾವ್ಯದಲ್ಲಿ ಒಳಪದರುಗಳು ಬಹಳ ಪರಿಪರಿಯಾಗಿ ಪೀಡಿಸುತ್ತವೆ. ಒಂದು ಪರೆ ಹರಿದು ಹೋದರೂ ಇನ್ನೊಂದು ಪರೆ ಇದ್ದೇ

ಇರುತ್ತದೆ. ಜಿ. ಕೃಷ್ಣಪ್ಪನವರು ಬರೆದ ವಿಮರ್ಶಾ ಪುಸ್ತಕದಲ್ಲಿ ಬೇಂದ್ರೆಯವರ ಒಳಪದರುಗಳನ್ನು ತೆರೆದು ತೋರಿಸಿದ್ದಾರೆ. 'ಹೂತಽದ ಕವನವನ್ನು ಹೀಗೆ ಪದರು ಪದರಾಗಿ ಉದ್ಘಾಟಿಸಿ ತೋರಿಸಿದ್ದಾರೆ.

'ರುಚಿಗೆ ಹುಳಿಯೊಗರು!'

'ಬ್ಯಾಸಗಿ ಹೊಡೆದಽದ ಬಿಸಿಲಿನ ಡೇರೆ
ಮಧ್ಯಾಹ್ನದ ಪಾಹರೆ
ಯಾರಿಗಿಲ್ಲ ಹ್ವಾರೆ.'

ಅವರು ಎಷ್ಟು ರಸೋನ್ಮಾದದಿಂದ ಬರೆದಿದ್ದಾರೆ ಎಂಬುದು ನನ್ನ ಕೌತುಕದ ವಿಷಯ.

ಅವರ 'ಶ್ರೀ ವಿವೇಕಾನಂದ ಶಿಖರ ಪ್ರಗಾಥ' ದ ವಿವರಣೆ ಮತ್ತೆ ಮತ್ತೆ ಓದಬೇಕೆನಿಸುತ್ತದೆ. ವ್ಯಂಗ್ಯ ವ್ಯಂಜನಾತ್ಮಕವಾದ 'ಬ್ಯಾಬೆಲ್' ಓದಬಹುದು. ಒಂದು ಕವನದ ರಸಾನ್ವೇಷಣೆಗಾಗಿ ಕೃಷ್ಣಪ್ಪ ಎಲ್ಲಿ ಎಲ್ಲಿ ಹೋಗಿ ತಮ್ಮ ಸಂಶೋಧನೆಗೆಯ್ಯುತ್ತಾರೆ ಎಂಬುದಕ್ಕೆ ಇದೊಂದೇ ಉದಾಹರಣೆ ಸಾಕು. 'ನಾಕುತಂತಿ' ಯ ವಿಮರ್ಶೆಯಂತೂ ಅವರ ಉದ್ದಾಮ ವಿಮರ್ಶಾಧ್ವಜವೆತ್ತಿ ನಿಂತಿದೆ.

'ಶ್ರೀ ಗುರುವರೇಣ್ಯ' ದ ಒಂದೊಂದು ಶಬ್ದವನ್ನೆತ್ತಿಕೊಂಡು ಕವನದ ಒಟ್ಟಂದದ ರಚನೆಗೆ ಪೋಷಕವಾಗುವುದನ್ನು ತೋರಿಸಿದ್ದಾರೆ.

ಒಂದು ಮಾತಿನಲ್ಲಿ ಹೇಳುವುದಾದರೆ, ಬೇಂದ್ರೆ ಕಾವ್ಯವನ್ನು ಹೇಗೆ ಓದಬೇಕು ಎಂಬುದಕ್ಕೆ ಜಿ. ಕೃಷ್ಣಪ್ಪನವರ ವಿಮರ್ಶೆಗಳು ಒಂದೊಂದು ಕವನದ ಸೂಕ್ಷ್ಮಾತಿಸೂಕ್ಷ್ಮ ವಿವರಗಳನ್ನು ಹಿಗ್ಗಿಸಿ ತೋರಿಸುವ ರಾವುಗನ್ನಡಿಗಳಾಗಿವೆ. ಬೇಂದ್ರೆಯವರ ಸಾಹಸ, ಧೈರ್ಯ, ಸೂಕ್ಷ್ಮಾತಿಸೂಕ್ಷ್ಮ ಭಾವಗಳ ಹಿತವಾಗಿ ನಿರ್ವಹಿಸುವ ಜಾಣ್ಮೆ; ಸಂಯಮಗಳ ಯತಾರ್ಥ ಬಿಗುವು, ಅರ್ಥವ್ಯಾಪ್ತಿ, 'ಕುಸುರಾಗಿ ಬಿಡಿಸಿಡುವ' ಧೋರಣೆ ಮುಂಜಾಗ್ರತೆಗಳಿಗೆ ಸರಿಯಾಗಿ ವಿವರಿಸುವ

ಹವಣು; ಇವೆಲ್ಲಕ್ಕೂ ಪ್ರಮಾಣಬದ್ಧವಾದ ವಿವರಣೆ ಸಿಕ್ಕುತ್ತದೆ. ಬೇಂದ್ರೆ ತಮ್ಮ ಕಲ್ಪನಾಶಕ್ತಿಯನ್ನು ಪ್ರಮಾಣಬದ್ಧವಾಗಿ ಹಿಡಿದಿಟ್ಟುಕೊಳ್ಳುತ್ತಾರೆ. ಎಲ್ಲಿಯೂ ಅತಿಯಾಯಿತೆಂಬುದರ ಭಾವನೆಗೆ ಎಡೆಗೊಡುವುದಿಲ್ಲ. ಅದೇ ಪ್ರಮಾಣ ಬದ್ಧತೆಯನ್ನು ಕೃಷ್ಣಪ್ಪನವರಲ್ಲಿ ಕಾಣಬಹುದು. ಅವತರಣಿಕೆಗಳನ್ನು ಎರಡು ಮೂರು ಬಾರಿಯಾದರೂ, ಪುನರುಚ್ಚರಿಸಿಯಾದರೂ ಕವಿಗೆ ನ್ಯಾಯಸಿಕ್ಕುವಂತೆ ಮಾಡುತ್ತಾರೆ. ಓದುಗರಿಗೆ ಸ್ಪಷ್ಟ ಹಿಡಿತ ಸಿಗುವವರೆಗೆ ಹೇಳುತ್ತಾರೆ.

ಬೇಂದ್ರೆ ಶ್ಲೇಷೋಕ್ತಿ ಪ್ರಿಯರು. 'ಚಿಕ್ಕ ಚಿಕ್ಕೆಗಳನು ಉದರಲು ಉದರದಿ ಹಿಡಿಯುವೆನು'. ಇವು ಒಂದು ಬಗೆಯಾದರೆ ಸಣ್ಣಸಣ್ಣ ಶ್ಲೇಷೋಕ್ತಿಗಳು ಬೇಂದ್ರೆಯವರ ಸಾಲುಸಾಲಿನಲ್ಲಿ ಹುದುಗಿ ಕುಳಿತಿರುತ್ತವೆ. 'ಕಳಗವೋ? ಕಾಳಘಮೋ? ಅವುಗಳ ಔಚಿತ್ಯ ಅರ್ಥಪೂರ್ಣತೆಗಳನ್ನು ಕೃಷ್ಣಪ್ಪನವರು ಇಲ್ಲಿ ವಿಶಿಷ್ಟ ಅಭ್ಯಾಸ ಮಾಡಿದಂತೆ ಕಾಣುವದು. ಇಡೀ ಕವನವೇ ಒಂದು ಬಗೆಯ ಶ್ಲೇಷೋಕ್ತಿ.

ಬೇಂದ್ರೆಯವರ ಶ್ಲೇಷೋಕ್ತಿ ಸಂಭ್ರಮ 'ಚತುರೋಕ್ತಿ' ಕವನ ಸಂಕಲನದಲ್ಲಿ ವಿಸ್ತಾರಗೊಂಡಿದೆ. ಪ್ರತಿಕವನಕ್ಕೂ ತನ್ನದೇ ಆದ ಸ್ವತಂತ್ರ ಅರ್ಥದ ಜೊತೆಗೆ ಶ್ಲೇಷೋಕ್ತಿಗಳ ಮೂಲಕ; ಶ್ಲೇಷೋಕ್ತಿಜನ್ಯ ಸ್ವತಂತ್ರ ಆಕೃತಿಜನ್ಯ ಅರ್ಥವಿನ್ಯಾಸ; ಅವುಗಳ ಅಂತರ್ಗತ ಉಪಪತ್ತಿಜನ್ಯ ಅರ್ಥವಿನ್ಯಾಸ ಹೀಗೆ ಪ್ರತಿ ಕವನಕ್ಕೂ ಮೂರು ನಾಲ್ಕು ಅರ್ಥವಿನ್ಯಾಸಗಳು ವಿಸ್ತಾರಗೊಂಡಿವೆ. ಅದು ದುರ್ಬಿನು ಹಿಡಿದು ಓದಬೇಕಾದ ಸಂಗ್ರಹ. 'ಹೊಸದಿದ್ದರೆ ಹೊಸದು ನೋಡಬ್ಯಾಡಾ'. 'ಹಕ್ಕೀಲೇ ಅಕ್ಕಪಕ್ಕ ಸನಿ'. ವಿಚಾರ ಮಾಡಿದಷ್ಟೂ ಅರ್ಥ ವಿಸ್ತಾರಗೊಳ್ಳುತ್ತದೆ. ಶ್ಲೇಷೋಕ್ತಿಯಷ್ಟೇ ಹೊಸರೂಪ ಕೊಡುವ ಚಟುಲ ವಿನ್ಯಾಸ ಪಲ್ಲಟ ಬಳಸಿಕೊಂಡಿದ್ದಾರೆ. 'ನಾಕುತಂತಿ' ಇದಕ್ಕೆ ಉಜ್ವಲ ಉದಾಹರಣೆ. ಬೇಂದ್ರೆಯವರ ಇತ್ತೀಚಿನ ಕವನಗಳಂತೂ ಅರ್ಥ ಮಾಡಿಕೊಳ್ಳಲಿಕ್ಕೆ ದುರ್ಬಿನು ಬೇಕು. ಕೈತಪ್ಪಿ ಯಾವ ಶಬ್ದ ಬಿಟ್ಟರೂ ನಮಗೇ ಹಾನಿ. ಇಷ್ಟೆಲ್ಲ ಲಕ್ಷ್ಯದಲ್ಲಿಟ್ಟುಕೊಂಡೆ

ಜಿ. ಕೃಷ್ಣಪ್ಪನವರು ಒಂದು ಶಬ್ದ ಬಿಡದೇನೆ ಅರ್ಥವಿಸ್ತಾರಗೊಳಿಸಿದ್ದಾರೆ.

ಇಂಥ ಗ್ರಂಥಕ್ಕಾಗಿ ಕಳೆದ ಐವತ್ತು ವರ್ಷಗಳವರೆಗೆ ನಾನು ಕಾದಿದ್ದೇನೆ. ನನ್ನ ಹಸಿವನ್ನು ಜಿ.ಕೃಷ್ಣಪ್ಪನವರು ಹಿಂಗಿಸಿದ್ದಾರೆ. ಅದಕ್ಕಾಗಿ ಈ ಸಂಕಲವನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಬೇಂದ್ರೆಯವರಂಥ ಕವಿ ಕನ್ನಡಕ್ಕೆ ದೊರಕಿದ್ದು ಕನ್ನಡದ ಭಾಗ್ಯ. ಆ ಭಾಗ್ಯವನ್ನು ಅರಿತುಕೊಳ್ಳುವುದೇ ನಮ್ಮ ಪುಣ್ಯ. ಹಾಗೆ ಕವಿಯನ್ನು ತಿಳಿದುಕೊಂಡ ಗ್ರಂಥಗಳು ಬರಲಿ ಎಂದು ಹಾರೈಸುತ್ತೇನೆ. ಏಳುಬೀಳಿಲ್ಲದ ಸತತ ಉತ್ಸಾಹದಿಂದ ಜಿ.ಕೃಷ್ಣಪ್ಪನವರು ವಿಮರ್ಶೆ ರಚಿಸುತ್ತಾರೆ. ಇದೇ ನಿತ್ಯೋತ್ಸಾಹದ ದನಿ ಬೇಂದ್ರೆಯವರ ವಿಮರ್ಶನಕ್ಕೆ ಬೇಕು. ಬುದ್ಧಿಭಾವಗಳ ನಿತ್ಯ ಆಲಿಂಗನದ ತಿರುಳು ಬೇಂದ್ರೆ ಕಾವ್ಯ. ಅದರ ವಿಮರ್ಶಕಗೂ ಅದೇ ನಿತ್ಯ ಉತ್ಸಾಹ ಅಗತ್ಯ. ಅದೇ ಹುಮ್ಮಸ್ಸನ್ನು ಕಾಯ್ದುಕೊಂಡಿರುವುದು ಜಿ.ಕೃಷ್ಣಪ್ಪನವರ ವೈಶಿಷ್ಟ್ಯ.

ಧಾರವಾಡ

೧೭.೯.೨೦೦೦

**ಡಾ॥ ಶಂಕರ ಮೊಕಾಶಿ ಪುಣೇಕರ**

# ಪ್ರಕಾಶಕರ ನುಡಿ

ಶ್ರೀರಂಗ ಪ್ರಕಾಶನದಿಂದ ಹೊರಬರುತ್ತಿರುವ ಮೂರನೆಯ ಕೃತಿ "ಹೂತಽದ ಹುಣಸಿ". ಇದು ಬೇಂದ್ರೆಯವರ ೧೩ ಕವನಗಳ ವಿಮರ್ಶೆಯನ್ನೊಳಗೊಂಡಿದೆ. ಇಲ್ಲಿಯ ಬಹುತೇಕ ಕವನಗಳು ಅಧ್ಯಾತ್ಮದ ನೆಲೆಯಲ್ಲಿ ಸಹೃದಯ ರಂಜಕವಾಗಿವೆ. ಕೃತಿ ಮುದ್ರಣ ಕಾರ್ಯದಲ್ಲಿ ಡಾ|| ಕೆ. ಅನಂತರಾಮು ಅವರು ಅಮೂಲ್ಯ ಸಲಹೆಗಳನ್ನೀಯುತ್ತ ಕೃತಿಯ ಅಂದವನ್ನು ಹೆಚ್ಚಿಸುವಲ್ಲಿ ಕಾರಣರಾಗಿದ್ದಾರೆ. ಅವರಿಗೆ ನನ್ನ ಕೃತಜ್ಞತೆಗಳು. ಪ್ರೊ|| ಕೆ. ಭೈರವಮೂರ್ತಿಯವರೂ ಸಹ ಆಗಾಗ್ಗೆ ವಿಚಾರಿಸಿಕೊಳ್ಳುತ್ತ ಮಾರ್ಗದರ್ಶನ ನೀಡುತ್ತಾ ಬಂದಿದ್ದಾರೆ. ಅವರಿಗೂ ನನ್ನ ನಮಸ್ಕಾರಗಳು. ಮುದ್ರಣದ ಹಂತದಲ್ಲಿ ಕರಡುಪ್ರತಿಯ ಪರಿಷ್ಕಾರದಲ್ಲಿ ನನ್ನ ಪತಿ ಶ್ರೀ ರಂಗಧಾಮಯ್ಯನವರು, ಚಿ|| ಆರ್.ಯೋಗೇಶ್, ಚಿ|| ಕೆ.ಎಸ್.ಸುಭಾಷ್‌ಚಂದ್ರ ಮತ್ತು ಪ್ರಕಾಶ ಕುರುಬರಹಳ್ಳಿ ಇವರುಗಳು ಸಹಕರಿಸಿದ್ದಾರೆ. ಅವರಿಗೂ ನನ್ನ ಕೃತಜ್ಞತೆಗಳು.

ಈ ಕೃತಿಯನ್ನು ಅತ್ಯಂತ ವಿಶ್ವಾಸದಿಂದ ಅಂದವಾಗಿ ಮುದ್ರಿಸಿಕೊಟ್ಟ ಮೈಸೂರಿನ ಗುಡ್‌ಟಚ್ ಆಫ್‌ಸೆಟ್ ಪ್ರಿಂಟರ್ಸ್‌ನ ಮಾಲೀಕರಾದ ಶ್ರೀ ಪಿ.ಎಸ್.ಗಣಪತಿಯವರಿಗೂ, ವ್ಯವಸ್ಥಾಪಕರಾದ ಶ್ರೀ ರಾಘವೇಂದ್ರ ಅವರಿಗೂ ನನ್ನ ಕೃತಜ್ಞತೆಗಳು. ಕೆ. ಪೂರ್ಣಚಂದ್ರ ಮತ್ತು ಸಿಬ್ಬಂದಿ ವರ್ಗದವರಿಗೂ ನನ್ನ ಕೃತಜ್ಞತೆಗಳು.

ಇಂತಹ ಸತ್ಕೃತಿಯೊಂದನ್ನು ಶ್ರೀರಂಗ ಪ್ರಕಾಶನದ ಮೂಲಕ ಪ್ರಕಟಿಸಲು ಅನುವು ಮಾಡಿಕೊಟ್ಟ ಡಾ||ಜಿ.ಕೃಷ್ಣಪ್ಪನವರಿಗೆ ವಿಶೇಷ ಕೃತಜ್ಞತೆಗಳನ್ನು ಸಮರ್ಪಿಸುತ್ತೇನೆ. ಕಾವ್ಯ ಪ್ರೇಮಿಗಳು ಈ ಕೃತಿಯನ್ನು ಪ್ರೀತಿಯಿಂದ ಸ್ವಾಗತಿಸಿ, ಬೇಂದ್ರೆ ಕಾವ್ಯದ ನವನೂತನ ಮುಖಗಳನ್ನು ಆಸ್ವಾದಿಸಿ ಆನಂದಪಡಬೇಕೆಂದು ಪ್ರಾರ್ಥಿಸುತ್ತೇನೆ.

ಮೈಸೂರು — ಸರೋಜಮ್ಮ ರಂಗಧಾಮಯ್ಯ

೧೮.೯.೨೦೦೦

# ಪರಿವಿಡಿ

# ೧. ಹೂತsದ ಹುಣಸಿ

ಹೂತsದ ಹುಣಸಿಯಾ ಚಿಗುರು
ಮದರಂಗಿ ಬಣ್ಣದುಗುರು
ರುಚಿಗೆ ಹುಳಿಯೊಗರು
ನೋಡ್ಯೆ ಜೀವಕ್ಕನಿಸಿತs ಹಗುರು ॥ ಹೂತsದ

ಉಗುರ್ಗೆಂಪು ಹಸಿರು ಬಿಳಿನಿಂಬಿ
ಹುಣಸಿಯಾರೆಂಬಿ
ಚಿಗತೀತೇನೊ ಎಂಬಿ
ಕಾಮsನ ಬಿಲ್ಲಿನ ಕೊಂಬಿ ॥ ಹೂತsದ

ಬ್ಯಾಸಗಿ ಹೊಡೆದsದ ಬಿಸಿಲಿನ ಡೇರೆ
ಮಧ್ಯಾಹ್ನದ ಪಾಹರೆ
ಯಾರಿಗಿಲ್ಲ ಹ್ವಾರೆ
ಸದ್ದು ಸುಳಿವು ಇಲ್ಲ ಬ್ಯಾರೆ ॥ ಹೂತsದ

ಸುಳ್ಳ ಸುಳ್ಳ ಗಾಳಿ ಹಾಕಿತ ಸಿಳ್ಳು
ಕಾಗಿ ಚುಂಚಿನ ಹಳ್ಳು
ಬಿದ್ದು ಅಂತ್ಯು 'ಹೊಳ್ಳು'
ಮೈ ಚಾಚ್ಯsದ ಹುಣಸಿಯ ನೆಳ್ಳು ॥ ಹೂತsದ

ಅಡ್ಡಾಗತೇನಿ ನೆಳ್ಳಾಗ ಹೀಂಗ
ಹೂವು ಚಿಗುರು ಹ್ಯಾಂಗ
ಅವs ಹಾಸಿಧಾಂಗ
ಹುಳಿ ಚಿಗುರು ನುರಿಸಿ ನಾ ದಂಗ ॥ ಹೂತsದ

ಬಿಸಿಲ್ಗುದರಿ ಕುಣಿಯಲಿ ದೂರ
ಯಾರಿಗೆ ಬೇಕು ನೀರ
ಹೀಂಗ ನನ್ನಿದಿರ
ಕಣ್ಣಳತಿಯೊಳಗ ನೀ ಬಾರ ॥ ಹೂತsದ

ಹಾರತಿರಲಿ ಗಾಳಿಗೆ ಬಿಚ್ಚಿದ್ದೆರಳು
ವಾರಿಯಿರಲಿ ಕೊರಳು
ಬಾಚತಿರಲಿ ಬೆರಳು
ನೋಡ್ತೇನಿ ನಿನ್ನ ಕವಿನೆರಳು ॥ ಹೂತsದ

ಕಣಕಣ್ಣ ಚಕಮಕಿ ಇತ್ತ
ಕುಡಿಗಣ್ಣಿನತ್ತ
ತಾಕಿ ಹಾರಿತ್ತ
ಗಾಳಿಸವಾರಿಗ್ಹೊರಟಿತು ಚಿತ್ತ ॥ ಹೂತsದ

ಅಗೊ ಗಾಳಿ ಧೂಳಿಯಾ ಬಂಬಾ
ನಿಂತ್ಹಾಂಗ ಅವ ಖಂಬಾ
ಅಲ್ಲಿ ರೌದಿ ತುಂಬಾ
ಗಣಿ ಕುಣಿಧಾಂಗ ಡೊಂಬರ ರಂಭಾ ॥ ಹೂತsದ

ಮ್ಯಾಲೆ ಅಲ್ಲಿ ಪಾರಿವಾಳ ಜೋಡಿ
ಒಂದಕ್ಕೊಂದ ನೋಡಿ
ಬಿಸಿಲ ತೆರೆ ದೂಡಿ
ಹಾರ್ತsದ ನೀಲಿಮುಗಿಲ್ಕೂಡಿ ॥ ಹೂತsದ

ಕಂಡ್ಹಾಂಗಾತು ನೀರಿನ ಕೊಳ
ನೀಲಿ ಮುಗಿಲ ಜಳಾ
ಎಂಥ ಝುಳ ಝುಳಾ
ಮುಳುಮುಳುಗಿ ಹೋತು ಮನದ ಧೂಳಾ ॥ ಹೂತsದ

ಕಾಲ ಹೋಗುತಿತ್ತ ಹಿಂದ ಸರಿದು
ಮನಸು ಆತ ಬರಿದು
ಮಧ್ಯಾನ್ ಬ್ಯಾಸರ ಮುರಿದು
ಬಿಸಿಲ ತಾನ ಹೋಗತಿತ್ತ ಹರಿದು ॥ ಹೂತsದ

ಕವಿ ಜೀವದ ಬ್ಯಾಸರ ಹರಿಸಾಕ
ಹಾಡ ನುಡಿಸಾಕ
ಹೆಚ್ಚಿಗೇನು ಬೇಕ?
ಒಂದ ಹೂತ ಹುಣಸಿಮರ ಸಾಕ ॥ ಹೂತsದ

---

ಆಕರ: ದ.ರಾ.ಬೇಂದ್ರೆ, ಸಖೀಗೀತ, ಡಾ॥ ವಾಮನ ಬೇಂದ್ರೆ (ಸಂ), ಅಂಬಿಕಾತನಯದತ್ತ ವೇದಿಕೆ, ಶ್ರೀಮಾತಾ ಪ್ರಕಾಶನ, ಧಾರವಾಡ ೧೯೯೭, ಪು. ೭೭-೭೯.

# ಹೂತಽದ ಹುಣಸಿ

ಬೇಂದ್ರೆಯವರ ಮೈಮನಸ್ಸಿನಲ್ಲಿ ಹೊಕ್ಕ ಹೂಬಿಟ್ಟ ಹುಣಸಿಮರ ರಸಿಕರ ಕಾವ್ಯಕನ್ಯೆ. ಅದು ಓದುಗರ ಚಿತ್ತವನ್ನು ಸೆರೆ ಹಿಡಿದು ಅವರ ಅನುಭವಕ್ಕೆ ತಕ್ಕಂತೆ ಅರ್ಥದ ಹೊಳಹನ್ನು ನೀಡಿರುವ ಆನಂದಿ. ಚಿಗುರಿನ ಜೊತೆ ಮೂಡಿದ ಹೂತ ಗಂಧರ್ವನಗರಿ. ಅವರ ಕಾವ್ಯದಲ್ಲಿ ಬೇಲಿಗೂ, ಮರಕ್ಕೂ ಹೂ ಬೆರಳಿದೆ. ಅಂತಹ ಬೆರಳಿಗೆ ಹಚ್ಚಿದ ಮದರಂಗಿ ಬಣ್ಣ; ನೆನೆನೆನೆದು ನೋಡುತ್ತಿದ್ದಂತೆ ಹುಳಿಯನ್ನು ಒಸರುವ ಗಂಧ ಜೀವಕ್ಕೆ ಹಗುರೆನಿಸಿದ ಆಹ್ಲಾದ.

ಹೂತ ಹುಣಸಿಮರ ಬೇಂದ್ರೆಯವರಿಗೆ 'ಕಾಮನಬಿಲ್ಲಿನ ಕೊಂಬೆ'. ಆ ಮರದ ಕೊಂಬೆಯೆಲ್ಲವೂ ಅಂಕುಡೊಂಕು; ನೇರವೆಂಬುದು ಅಲ್ಲಿಲ್ಲ. ಪ್ರತಿರಂಬೆಯೂ ಚಿಗಿತು ಹೂ ಬಿಟ್ಟಾಗ 'ಕಾಮನ ಬಿಲ್ಲಾಗಿದೆ' ಎಂಬ ಚಿತ್ರಣವೇ ಅದರ ಸೊಬಗು, ಒನಪು, ಒಯ್ಯಾರ, ಆಕರ್ಷಣೆ ಬಣ್ಣದ ಬೆಡಗು. ಆ ತುಂಬಿನಿಂತ ಚಿಗುರು ಮತ್ತು ಹೂವನ್ನು ನೋಡಿಯೇ ಸವಿಯಬೇಕು. ಅವುಗಳಲ್ಲಿ ಕಾಮನಬಿಲ್ಲಿನ ಏಳು ಬಣ್ಣದ ಎಲ್ಲ ಛಾಯೆ ಇದ್ದು, ಅದರಲ್ಲೂ ಪ್ರಮುಖವಾಗಿ ಕಾಣುವುದು ಉಗುರ್ಗೆಂಪು, ಹಸಿರು, ಬಿಳಿನಿಂಬಿ.

ಹುಣಸೆ ಮರದ ನೆರಳಿನ ಆಹ್ಲಾದ ಮನದುಂಬುವುದು ಬೇಸಿಗೆ ಕಾಲದಲ್ಲಿ. ಬೇಸಿಗೆಯ ಬಿಸಿಲು ಇಡೀ ನಾಡನ್ನು ಆವರಿಸಿರುವುದನ್ನು ಬೇಂದ್ರೆಯವರು 'ಬ್ಯಾಸಗಿ ಹೊಡೆದಽದ ಬಿಸಿಲಿನ ಡೇರೆ' ಎಂಬ ಹೊಚ್ಚ ಹೊಸ ರೂಪಕದಲ್ಲಿ ಬಣ್ಣಿಸಿ ಬಿಸಿಲಿನ ತೀವ್ರ ಝಳ ರಾಚುವ ಅನುಭವವನ್ನು ಕಾವ್ಯದಲ್ಲಿ ಸೃಷ್ಟಿಸಿದ್ದಾರೆ. ಡೇರೆ ಹಾಕುವುದಕ್ಕೆ ಡೇರೆ ಹೊಡೆಯುವುದು ಎಂಬ ಅರ್ಥವಿರುವಂತೆಯೇ ಊರಿ ನಿಲ್ಲುವುದರ ಸೂಚನೆಯಾಗಿ ಡೇರೆ ಪದವು ಪೌಜು ಪಾಳ್ಯದ ಸೂಚಕವೂ ಆಗುತ್ತದೆ. ಅದರ ಪರಿಣಾಮವೆಂದರೆ ಯಾರೂ ಅಲುಗಾಡದಂತೆ ಎಚ್ಚರದ ಕಣ್ಣಿಂದ ಕಾಯುವ ಪಹರೆ. ಬಿಸಿಲಿನ ಕಾಯುವಿಕೆ ಬೇಂದ್ರೆ ಕಾವ್ಯದ ಮೋಡಿಯಲ್ಲಿ ಪಹರೆಯಾಗಿ ಯಾರೂ ಅಲುಗಾಡದಂತೆ

ಮಾಡುವುದು ಅನುಭವ ಗೋಚರ. ಅಂತಹ ಸಮಯದಲ್ಲಿ ಆ ಶಿಸ್ತಿನ ಕಾಯುವಿಕೆಯಲ್ಲಿ ಯಾರೂ ಏನೂ ಮಾಡುವಂತಿಲ್ಲ. ಅದು ಯಾರಿಗೂ ಏನೂ ಕೆಲಸವಿಲ್ಲದ 'ಯಾರಿಗಿಲ್ಲ ಹ್ವಾರೆ.' 'ಬ್ಯಾಸಗಿ ಹೊಡೆದಽದ ಬಿಸಿಲಿನ ಡೇರೆ'ಯಲ್ಲಿ ಮೌನ ಬೀಡುಬಿಟ್ಟಂತೆ ನಿಶ್ಯಬ್ದ ವಾತಾವರಣ. ಆಗ ಇತರೆ ಸದ್ದಿನ ಸುಳಿವಿಲ್ಲ -'ಸದ್ದು ಸುಳಿವು ಇಲ್ಲ ಬ್ಯಾರೆ'. ಎಲ್ಲವೂ ಅದರ ಆಣತಿಯಂತೆ ನಡೆಯುವುದು.

ಪ್ರಕೃತಿ ಎಲ್ಲವನ್ನೂ ತನ್ನ ಹಿಡಿತಕ್ಕೆ ತೆಗೆದುಕೊಂಡಾಗ ಅಲ್ಲಿ ಪ್ರಕೃತಿಯ ಇನ್ನೊಂದು ಮುಖವೇ ಮಾತಾಡಬೇಕಾಗುತ್ತದೆ. ಹಾಗಾಗಿ ಬ್ಯಾಸಗಿಯ ಶಿಸ್ತಿನಲ್ಲಿ 'ಸುಳ್ಳ ಸುಳ್ಳ ಗಾಳಿ ಹಾಕಿತ ಸಿಳ್ಳು' ಎಂದು ಚಲನಶೀಲತೆಯನ್ನು ವಾತಾವರಣಕ್ಕೆ ತಂದಿದ್ದಾರೆ. ಗಾಳಿಯ ಸಿಳ್ಳು ಹೊರಟ ತಕ್ಷಣ ಬಿಸಿಲ ಬೇಗೆಯಲ್ಲಿ ಕೂಗಲೂ ಆಗದೆ ಕೂತ ಕಾಗೆಗೆ ಬೇಸರವಾಗಿ ತನಗೆ ವೈವಿಧ್ಯ ಬೇಕಾಗಿ ತಾನು ಕುಂತ ಮರದ ನೆರಳಿಗೆ ಸ್ವಲ್ಪ ಹೊರಳು ಎಂಬ ಸೂಚನೆ ಕೊಡುವಂತೆ - ತನ್ನ ಚುಂಚಿನಲ್ಲಿದ್ದ ಹರಳಿಗೆ ಹೇಳಿತು. 'ಕಾಗಿ ಚುಂಚಿನ ಹಳ್ಳು। ಬಿದ್ದು ಅಂತ್ಯು ಹೊಳ್ಳು'. **ಹೀಗೆ ಅಲ್ಲಿ ಇಡೀ ಪ್ರಕೃತಿಯ ಚರಾಚರ ವಸ್ತುಗಳ ಮೌನ ಸಂವಾದದ ತನ್ಮಯತೆ ಬೇಂದ್ರೆಯವರ ಗಾರುಡಿಯಲ್ಲಿ ಕಾವ್ಯದ ಲಾಸ್ಯವಾಡಿದೆ.**

ಆ ಮರದ ನೆರಳು ಹೂ ಚಿಗುರಿನಿಂದಾದ ಪ್ರಕೃತಿಯ ಸುಪ್ಪತ್ತಿಗೆ. 'ಹೂವು ಚಿಗುರು ಹ್ಯಾಂಗ। ಅವಽ ಹಾಸಿಧಾಂಗ'. ಅದರ ಮೇಲೆ 'ಅಡ್ಡಾಗತೇನಿ ನೆಳ್ಳಾಗ ಹೀಂಗ' ಎಂದು ಕವಿ ಮಲಗಿ ಆ ಚಿಗುರು ಅಗಿದು ನಲುಮಿ ನುರಿಸಿ ಆ ಸವಿಗೆ ದಂಗು ಬಡೆದು ಹೋಗಿದ್ದಾನೆ. ಆ ಆಹ್ಲಾದದಲ್ಲಿ ಕವಿಗೆ ಹುಣಸೆ ಮರದಂತೆ ವಾಸ್ತವ ಹಾಗೂ ಸತ್ಯವಷ್ಟೇ ಬೇಕಾಗಿದೆ. ಆದಕಾರಣ ಆತ ನುಡಿಯುತ್ತಾನೆ - ಕಣ್ಣು ಮಿಟುಕಿಸಿ ಪ್ರಲೋಭನೆಗೊಳಿಸುವ ಮರೀಚಿಕೆ ಬೇಡ. ಅದು ದೂರದಲ್ಲಷ್ಟೆ ಕುಣಿಯಲಿ. ಸುಳ್ಳು ಭರವಸೆ ನೀಡುವಂತಹ ಆ ಅಣಕದಾಟದ ಮೃಗಜಲ ಬೇಡ. ಅದು ದೂರವೇ ಇರಲಿ. 'ಬಿಸಿಲ್ಗುದರಿ ಕುಣಿಯಲಿ ದೂರ| ಯಾರಿಗೆ ಬೇಕು ನೀರ.' ಆತನಿಗೆ ಬೇಕಾದದ್ದು ಕಣ್ಣಿಗೆ ಕಾಣಿಸುವ, ಕೈಯಳತೆಗೆ ಸಿಗುವ, ಕೂಗಳತೆಯಲ್ಲಿ ಪ್ರತಿಸ್ಪಂದಿಸುವಂತಹುದು. ಆದಕಾರಣ ಅವನನ್ನು

ಆವರಿಸಿದ ಹುಣಸೆ ಮರವನ್ನು ಹೆಣ್ಣಾಗಿ ಸಂಬೋಧಿಸಿದ ಕವಿ 'ಹೀಂಗ ನನ್ನಿದಿರ ಕಣ್ಣಳತಿಯೊಳಗ ನೀ ಬಾರ' ಎಂದು ಅಪ್ಪಿ ಮುದ್ದಾಡಿದ ಭಾವದಲ್ಲಿದ್ದಾನೆ. ಆ ಇಡೀ ಮರ ಅವನಿಗೆ ಸುಂದರ ಹೆಣ್ಣಾಗಿ ಕಂಡು ಅವನ ಕಲ್ಪನೆ ಗರಿಗೆದರಿದೆ. ಅದರ ಒನಪು ಒಯ್ಯಾರವನ್ನು ಕಾಣುವ ಅವನಿಗೆ ಅದರ ರೆಂಬೆ, ಕೊಂಬೆ, ಚಿಗುರು ಬಿಚ್ಚಿದ ಹೆರಳಾಗಿ ಬಳುಕಾಡುತ್ತಿದೆ. ಅದರ ಕೊರಳು ನಾಚಿಕೆಯಿಂದ ಓರೆಯಾಗಿದೆ. ಅದರ 'ಹೂ ಬೆರಳು' ಹೆರಳನ್ನು ಬಾಚಿಕೊಳ್ಳುತ್ತಿದೆ!

ಅಂತಹ **'ಹೂತ ಹುಣಸಿ'ಯ ವಿವಿಧ ಬೆಡಗು ಬಿನ್ನಾಣದ ಛಾಯೆಯನ್ನು ಕವಿಯು 'ಕವಿನೆರಳು' ಎಂದು ಕರೆದಿದ್ದಾನೆ. (ಕವಿನೆರಳು = Silhuate) ಅದು ಕವಿದ ನೆರಳು ಉಂಟು ಮಾಡುವ ವಿವಿಧ ಭಾವಲಹರಿಯ ದೃಶ್ಯ ಪ್ರದರ್ಶನದ ಬೇಂದ್ರೆ ಸೃಷ್ಟಿಯ ಹೊಸ ನುಡಿಗಟ್ಟಾಗಿದೆ.**[1] 'ಕವಿ ನೆರಳ'ನ್ನು ಸವಿಯುತ್ತ ಆನಂದಗೊಂಡ ಕವಿ ರಸಿಕಭಾವದಲ್ಲಿ ನುಡಿದಿದ್ದಾನೆ:

ಹಾರತಿರಲಿ ಗಾಳಿಗೆ ಬಿಚ್ಚಿದ್ಹೆರಳು
ವಾರಿಯಿರಲಿ ಕೊರಳು
ಬಾಚತಿರಲಿ ಬೆರಳು
ನೋಡ್ತೇನಿ ನಿನ್ನ ಕವಿನೆರಳು ॥

ಪ್ರಕೃತಿ ಸದಾ ಚಲನಶೀಲೆ. ಅವಳ ದೃಷ್ಟಿ ನಿಂತಕಡೆ ಇರುವುದಿಲ್ಲ. ಅದು 'ಕಣಕಣ್ಣ ಚಕಮಕಿ ಇತ್ತ' ಎಂಬ ನಡಿಗೆಯ ಹೊಳಪಿನ ನೆಲೆ. ಅವಳ ತೇಜದ ಕೊನೆಗಣ್ಣು ತಾಕಿ - ತನ್ನ ಚಿತ್ತ 'ಗಾಳಿಸವಾರಿಗ್ಹೊರಟಿತು' ಎಂದು ಗಾಳಿಯನ್ನು ಬೆನ್ನುಹತ್ತಿ ನಿಸರ್ಗದ ಇನ್ನೊಂದು ಅನುಭವಕ್ಕೆ ಕವಿ ನಡೆಯುತ್ತಾನೆ. ಹೀಗೆ ಈ ಕಾವ್ಯ ತನ್ನೊಡಲಿನಲ್ಲಿ ಮೌನ ಬದಲಾವಣೆಯನ್ನು, ಶಾಂತ ಚಲನಶೀಲತೆಯನ್ನು ಒಳಗೊಂಡು ಸಹೃದಯನನ್ನು ಕ್ರಿಯಾಶೀಲ ಚಿಂತಕನನ್ನಾಗಿಸುತ್ತದೆ.

---

1. 'ಕವಿ' ಎಂಬ ಶಬ್ದಕ್ಕೂ ಇಂಗ್ಲಿಷಿನ "to show = ತೋರಿಸು" ಎಂಬ ಧಾತುವಿಗೂ ಒಂದೇ ಮೂಲವೆಂದು ಭಾಷಾ ಶಾಸ್ತ್ರಜ್ಞರ ಅಭಿಪ್ರಾಯ. - ತೀನಂಶ್ರೀ 'ಭಾರತೀಯ ಕಾವ್ಯ ಮೀಮಾಂಸೆ', ನಿರ್ದೇಶಕರು, ಪ್ರಸಾರಾಂಗ, ಮೈ. ವಿ.ವಿ., ೧೯೬೦ ಪು- ೧೨೬

ಕವಿಯ ಮನಸ್ಸು ವಾಯುವಿಹಾರಕ್ಕೆ, ಶಾಂತ ತಿರುಗಾಟಕ್ಕೆ ಹೊರಟಾಗ ವಾಸ್ತವದ ನೆಲೆಯಲ್ಲಿ ನಿಂತು ಉದಾತ್ತದತ್ತ ಮುಖಮಾಡಿ ನಿಜವನ್ನು ಅರಸತೊಡಗಿದೆ. ಬಿಸಿಲ ಬೇಗೆಯ ಕಾಲದಲ್ಲಿ ಧೂಳು ಹೆಚ್ಚು. ಧೂಳು ಇರುವ ಕಡೆ ಗಾಳಿ ಬೀಸಿದರೆ ಅದು ಒಟ್ಟುಗೂಡಿ ವ್ಯಾಪಿಸುವುದು ಹೆಚ್ಚು - 'ಅಗೊ ಗಾಳಿಧೂಳಿಯಾ ಬಂಬಾ'. ಅದು ಗಾಳಿಯ ನೆರವಿನಿಂದ ಒಂದು ಬಿದಿರುಗಳ ಎದ್ದ ಹಾಗೆ ಸುರುಳಿ ಸುರುಳಿಯಾಗಿ ಸುತ್ತುತ್ತ ಮೇಲ್ಮುಖವಾಗಿ ಸಾಗುತ್ತದೆ. ನೆಲದ ಮೇಲೆ ಕ್ಷುಲ್ಲಕವಾಗಿ ಬಿದ್ದಿದ್ದ ರವದಿ (ಜೋಳದ ಗರಿ) ಗಣೆ ಏರಿ ಕುಣಿವ ಡೊಂಬರ ಹೆಣ್ಣು ರಂಭಾಳ ರೀತಿ ಅಂಗಸಾಧನೆ ಮಾಡುತ್ತ ತಿರುಗಿ, ಬಳುಕಿ, ನೆಗೆದು, ನಿಂತು, ಕುಂತು ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತದೆ.

ಅಗೊ ಗಾಳಿ ಧೂಳಿಯಾ ಬಂಬಾ
ನಿಂತ್ಹಾಂಗ ಅವ ಖಂಬಾ
ಅಲ್ಲಿ ರೌದಿ ತುಂಬಾ
ಗಣಿ ಕುಣಿಧಾಂಗ ಡೊಂಬರ ರಂಭಾ ॥

ಏತಕ್ಕೂ ಬಾರದ ಅಪ್ರಯೋಜಕ ರವದಿಯಲ್ಲೂ ಜೀವಂತಿಕೆಯನ್ನು ಕಂಡ ಕವಿ ಮತ್ತೆ ಏರುತ್ತ ಸಾಗುತ್ತಾನೆ. ಆಗಸದಲ್ಲಿ ಹಾರಾಡುತ್ತಿರುವ ಪ್ರೇಮದ ಸಂಕೇತವಾದ ಜೋಡಿ ಪಾರಿವಾಳವನ್ನು ನೋಡಿ ಆನಂದದ ಶಿಖರದಲ್ಲಿ ತೇಲಾಡುತ್ತಾನೆ. ಅವುಗಳ ಸಂತೋಷವೇ ತನ್ನ ಸಂತೋಷವೆಂಬಂತೆ ಬಣ್ಣಿಸುತ್ತಾನೆ.

ಒಂದಕ್ಕೊಂದ ನೋಡಿ
ಬಿಸಿಲ ತೆರೆ ದೂಡಿ
ಹಾರ್‍ತಃದ ನೀಲಿ ಮುಗಿಲ್ಕೂಡಿ ॥

ಪ್ರೇಮಿಗಳ ಜೀವನದಲ್ಲಿ ಕಷ್ಟದ ತಾಪ ಬಂದರೂ ಅವರು ಅದನ್ನು ದೂಡಿ ಮುನ್ನುಗ್ಗುತ್ತಾರೆ. ನೀಲಿಮುಗಿಲು ಅನಂತ. ಅದರ ಸಂಕೇತದಿಂದ ಅಂತ್ಯವಿಲ್ಲದ ಪ್ರೇಮವನ್ನು ಹೋಲಿಸುತ್ತ ಪ್ರೇಮದ ಅನಂತತೆಯಲ್ಲಿ, ಉನ್ನತ ಮುಖಿಗಳಾಗಿ

ಪ್ರೇಮಪಕ್ಷಿಗಳಿವೆ ಎಂದು ವರ್ಣಿಸಿದ್ದಾರೆ. ಆ ಪಕ್ಷಿಗಳು ನೀಲಿ ಮುಗಿಲಿನಲ್ಲಿ ಹಾರುವುದು ಕವಿಗೆ - ತಂಪಾದ ನೀರಿನ ಕೊಳದ ಹಾಗೆ ಕಂಡಿದೆ. ಆ ಪ್ರೇಮ ಜಲದಲ್ಲಿ ಕವಿಯು ಮಿಂದು, ಹಾಗೆ ಮೀಯುವಾಗ ತನ್ನ ಮನದ ಧೂಳಾದ ಒಗರು, ಕಹಿ, ಅತೃಪ್ತಿಯ ಕಲ್ಮಷವೆಲ್ಲ ತೊಯ್ದು ತಾನು ಶುದ್ಧವಾದೆ ಎಂದಿದ್ದಾರೆ.

ಬೇಂದ್ರೆಯವರು ಈ ಕಾವ್ಯದಲ್ಲಿ ಮೊದಲು ಧೂಳಿನಂತಹ ಸಣ್ಣತನ, ಕ್ಷುಲ್ಲಕತನದ ಮನುಷ್ಯಸ್ವಭಾವದ ಚಿತ್ರ ಕೊಟ್ಟಿದ್ದಾರೆ. ಅನಂತರ ಮನುಷ್ಯನ ಮನಸ್ಸು ಆ ಧೂಳು ರಾಡಿಯಲ್ಲಿ ಸಿಕ್ಕಿ ನರಳದೆ ಪ್ರೇಮದ ಬಾಂದಳಕ್ಕೆ ಏರಿ ಮಾನಸಿಕ ಔನ್ನತ್ಯದ ನೆಲೆಗೆ ಹಾರುವ ಜೋಡಿಪಾರಿವಾಳದ ಚಿತ್ರ ನೀಡಿದ್ದಾರೆ. ಅನಂತ ನೀಲಿಯಾಗಸದ, ಪ್ರಶಾಂತ ಕೊಳದ ಅನಂತ ಪ್ರೇಮದ ಝುಳ ಝುಳ ಹರಿವ ಶುದ್ಧ ನೀರಿನಲ್ಲಿ ಮಿಂದಾಗ ತನ್ನ ಮನಸ್ಸು ಪರಿಶುದ್ಧವಾಯಿತು ಎಂದಿದ್ದಾರೆ.

ಸಣ್ಣಜನರ ಟೀಕೆ ಟಿಪ್ಪಣಿ ಧೂಳು. ಅಲ್ಲಿಯೇ ವಿರಮಿಸದೆ ಅದನ್ನು ಮೀರಿ ರಾಡಿರಹಿತವಾದ ಪ್ರಶಾಂತನೆಲೆಗೆ ಏರುವುದನ್ನು - ಸಂಚಾರಿ ಭಾವ ಸ್ಥಾಯಿಯಾಗುವುದನ್ನು 'ಮುಳು ಮುಳುಗಿ ಹೋತು ಮನದ ಧೂಳಾ' ಎಂಬ ನುಡಿಯಲ್ಲಿ ಪ್ರತಿಮಿಸಿದ್ದಾರೆ. ಆ ಸ್ಥಾಯಿಭಾವ ಹರಳುಗಟ್ಟುತ್ತ ಹೋದದ್ದು ಕಾವ್ಯದಲ್ಲಿ ಹೀಗೆ ಪಲ್ಲವಿಸಿದೆ :

ಕಾಲ ಹೋಗುತಿತ್ತ ಹಿಂದ ಸರಿದು
ಮನಸು ಆತ ಬರಿದು
ಮಧ್ಯಾನ್ ಬ್ಯಾಸರ ಮುರಿದು
ಬಿಸಿಲ ತಾನ ಹೋಗತಿತ್ತ ಹರಿದು ॥

ಮಧ್ಯಾಹ್ನದ ತೀವ್ರಬಿಸಿಲು ಕೂಡ ಬಿಸಿಲಾಗಿ ಉಳಿಯದೆ ಅತ್ಯಂತ ಶಾಂತವಾದ ತಾಣವಾದದ್ದು ಕವಿಭಾವದ ಮಹೋನ್ನತ ಶಾಂತನೆಲೆ. ಜೀವನದಲ್ಲಿ ಎದ್ದ ರಾಡಿ ಒಂದು ಕಡೆ ಇದ್ದರೆ ಪ್ರೇಮದ ಮೋಡಿ ಮತ್ತೊಂದು ಕಡೆ ಅದೇ

ಕ್ಷಣದಲ್ಲಿರುತ್ತದೆ. ಆ ಎರಡು ಮುಖಗಳನ್ನು ಏಕಕಾಲದಲ್ಲಿ ಚಿತ್ರಿಸುವ ಶಕ್ತಿ ಸಮಗ್ರ ದೃಷ್ಟಿ ಪಡೆದ ಕವಿಗಳಿಗೆ ಮಾತ್ರ ಸಾಧ್ಯ. ಕಹಿ ಸಿಹಿ ಎರಡೂ ಜೀವನದಲ್ಲಿ ಜೊತೆಜೊತೆಯಲ್ಲಿ ಹೋಗುತ್ತಿರುತ್ತವೆ. ಅವುಗಳಲ್ಲಿ ಒಂದನ್ನು ಬಿಟ್ಟು ಇನ್ನೊಂದನ್ನು ಚಿತ್ರಿಸಿದರೆ ಸಮಗ್ರತೆ ಪ್ರಾಪ್ತವಾಗುವುದಿಲ್ಲ. ಪೂರ್ಣ ದೃಷ್ಟಿಯುಳ್ಳ ಕವಿ ಅದಕ್ಕೆ ಲೋಪ ಬರದ ಹಾಗೆ ಎರಡರ ಚಿತ್ರವನ್ನೂ ಕೊಡುತ್ತಾನೆ. ಇಲ್ಲಿ ಬರುವ ಗಾಳಿಯ ಧೂಳಿಯ ರೂಪಕ ಮತ್ತು ಪಾರಿವಾಳಗಳ ರೂಪಕ ಆ ಎರಡು ನಿಲುವಿಗೆ ಪ್ರತೀಕಗಳಾಗಿವೆ. ಇದೊಂದು ಬೇಂದ್ರೆಯವರ ಪೂರ್ಣ ದೃಷ್ಟಿದರ್ಶನದ ಕಾವ್ಯವಾಗಿದೆ. ಅಂತಹ ದರ್ಶನ ತನಗೆ 'ಹೂತ ಹುಣಸಿ ಮರ' ದೊರಕಿಸಿಕೊಟ್ಟದ್ದಕ್ಕೆ ಕವಿ ಆನಂದದಿಂದ ನುಡಿದಿದ್ದಾರೆ:

ಕವಿ ಜೀವದ ಬ್ಯಾಸರ ಹರಿಸಾಕ
ಹಾಡ ನುಡಿಸಾಕ
ಹೆಚ್ಚಿಗೇನು ಬೇಕ?
ಒಂದ ಹೂತ ಹುಣಸಿ ಮರ ಸಾಕ ||

* * *

# ೨. ಜೋಗಿ

ಊರ ತುದಿಯ ಆ ಮೂರು ಬಟ್ಟೆ ಮುಗಿದಲ್ಲಿ ಕೊಳ್ಳವೆಲ್ಲಿ
ಹಳ್ಳ ಅಡಗಿ ಹರಿದಲ್ಲಿ, ತುಡುಗು-ದನ ತೊಂಡು ಮೇಯುವಲ್ಲಿ
ದಿಕ್ಕು ತಪ್ಪತಾರ ತಪ್ಪಿ ಹೊಕ್ಕರs ಕಕ್ಕಾವಿಕ್ಕಿಯಾಗಿ
ಇರುಳು ಅಂತನs ಹಗಲs ಗೂಕತಾವ ಅಲ್ಲಿ ಜೋಡಗೂಗಿ. ॥೧॥

ಅದನ ದಾಟಿ ಆ ಮಸಣವಾಟಿ, ಎಡಕಾಗಿ ಅದರ ಆಚಿ
ಕಾಮ ತನ್ನ ಹಚ್ಚಂಗಿ ಹಾಸಿಧಾಂಗೆಲ್ಲಿ ನೀರ ಪಾಚಿ
ಹೊಚ್ಚಿ ಹೊಂಡವನು ಮೆಚ್ಚ ಮಾಡತಾವೊ ಕಂಡ ಕಣ್ಣುಗಳಿಗೆ.
ಪಾಚಿ ಸರಿಸಿದಾಗ ಕಪ್ಪು ನೀರು ಕರಿತಾವ ಒಳಗ ಬಳಿಗೆ. ॥೨॥

ಅದರ ಮುಂದ ಗವಿಗುಡ್ಡ ಅಡ್ಡ ಬರತsದ ನಮ್ಮ ಬಲಕ
ಅತ್ತಿತ್ತ ಹರುಹಿ ಹತ್ತೊತ್ತಿ ಬಂದ ಕಾಳಮ್ಮಗಿರುವ ಹೊಲಕ
ಆ ಹೊಲದ ನಟ್ಟನಡುವಿರುವ ಹುಣಿಸಿಮರ ಏರಿ ನೋಡಿದಾಗ
ಹತ್ತ ಗಿಡದ ಗುಂಪೊಂದು ಕಾಣತದ ಸಣ್ಣ ಏರಿಮ್ಯಾಗ. ॥೩॥

ಅಲ್ಲಿ ತೊಗಲಬಾವಲೀ ಚೀರತಾವ ಭರತಿ ಹಗಲಿನೊಳಗ
ಹಿಂಡು ಪಾರಿವಾಳ ಹೊಕ್ಕ ಹೊರಡತಾವ ಮತ್ತ ಒಳಗ ಹೊರಗ
ಅಲ್ಲಿ ಹಬ್ಬಿ ಹರುಹ್ಯsದ ಬೇವಿಗೇ ಸುತ್ತ ಅಮೃತಬಳ್ಳಿ
ಹಾಲ ಸುರವತಾವ ಆಲ. ಅಲ್ಲಿ ಅಲ್ಲಾಡತಾವ ಅಳ್ಳಿ. ॥೪॥

ಅತ್ತಿಗಿಡಕ ಹತ್ಯಾವ ಹಲಸಿನ್ಹಂಗ ಬುಡುಕು ಕೆಂಪು ಹಣ್ಣು
ಜೇನು ತುಂಬಿ ತೊಟಗುಟ್ಟತಾವ ಅದ ಬಯಸತಾವ ಕಣ್ಣು
ಈ ತೋಪಿನ್ಯಾಗ ಬೆಳದsದ ಹ್ಯಾಂಗೋ ಮೂಲ್ಯಾಗ ತಪ್ಪಿ ಮಾವು
ಅದರಡಿಗೆ ಹುತ್ತ, ಅದರಾಗ ಐತೆ ಒಂದೇಳ ಹೆಡೆಯ ಹಾವು. ॥೫॥

ಆ ಮಾವಿನೊಳಗ ಈ ಸುಗ್ಗಿಯೊಳಗ ಬಂದsದ ಕೋಗಿಲೊಂದು
ತನ್ನ ಜೋಡಿ ಕರೆದ್ಹಾಂಗ ಕರಿತsದ ನನ್ನ ಬಾರs ಅಂದು
ಕೂಗೇ ಕೂಗತದ ಕೂಗೇ ಕೂಗತsದ ಗಿರಣಿ ಕರೆಯೊ ಹಾಂಗ
ತೆರಪು ಇಲ್ಲ ಒಂದಳತಿ ಕೂಗತsದ ಬ್ಯಾಸರಿಲ್ಲಧಾಂಗ. ॥೬॥

ತಿಳಿಯದ್ಯಾವದೋ ಕಂಪು ಎಳೀತsದ ತುಂಬಿ ಹುಚ್ಚು ಆಗಿ
ಎಚ್ಚರಿಲ್ಲದs ಎತ್ತೊ ತಿರಗತಾವ ದಿಕ್ಕು ತೋರದಾಗಿ
ಬಂತು ಸುಗ್ಗಿ ಬಂದsದ ಸುಗ್ಗಿ ಬರತsದ ಸುಗ್ಗಿ ಎಂದು
ಕುಹೂ ಅನ್ನತದ ಕುಹೂ ಅನ್ನತದ ಕುಹುಕ್ಕುಹೂ ಅಂದು. ॥೭॥

ತಾರ ಪಂಚಮದಾಗ ಕೋಗಿಲಾ ಕೂಗತsದೊ ಜೋಗಿ
ಯಾವ ಬಣ್ಣ ಅದಕಾವ ಕಣ್ಣು ನಾ ನೋಡಲೇನು ಹೋಗಿ?
ತೋಟವೆಲ್ಲ ಹೂವಾಗಿ ನಿಂತು ತೊಂಗೆಲ್ಲ ಗೊಂಚಲಾಗಿ
ಪಾಡು ಆಗತಾವ, ಹಣ್ಣು ಆಗತಾವ ಅದರ ಲಯಕೆ ತೂಗಿ. ॥೮॥

ಮುಂಜಾವತೊಟ್ಟು ಇರು ಹಂಗು ಬಿಟ್ಟು ಬರಿ ಹಾಂಗ ತೂಗತsದೊ
ತಲಿ ಕಾವಿನೊಳಗ ಇಮ್ಮಾವಿನೊಳಗ ಬಿಸಿಗಾಲ ನೂಗತsದೋ
ಕೊಳಲ ನುಡಿಸಿಧಾಂಗ ಕುಹೂಹುಹೂಹೂ ಉಲಿತsದೊ ಜೋಗಿ
ಬೇರೆ ಕೆಲಸದಾಗ ಮನಸು ತೊಡಗದೊ ನೋಡಲೇನು ಹೋಗಿ? ॥೯॥

ಬಂದೆ ಜೋಗಿ ಬಾ, ಬಾರೊ ಜೋಗಿ ಬಾ, ಏನು ಹೊತ್ತು ಬಂದಿ
ನೀನೆ ಹೇಳಿದಾ ನಾಮ ಜಪಿಸುವಾಗ ಬಂತೋ ಸುಗ್ಗಿ ಸಂಧಿ.
ತಲೆಯ ಯಾವುದೋ ನಾಡಿಯೊಳಗ ಸುರುವಾತು ಸುಗ್ಗಿ ಸೊಲ್ಲು
ಮುಂದೆ ಕೇಳಿದರ ಅದs ತುಂಬಿತೋ ಮೂಲೆ ಮೂಲೆಯಲ್ಲು.॥೧೦॥

ಗುಡಿಗೆ ನಾನು ಹೊರಟಾಗ ಕರೀತದ ಕುಹುಕ್ಕುಹೂ ಎಂದು
ಮನದ ಜಪದ ನಡುನಡುವೆ ನಡೀsತsದ ಓಂ ಕುಹೂ ಎಂದು
ಕನಸಿನೊಳಗ ನಾ ಸ್ವರಾ ಕೇಳಿ ಮಾಮರಾ ಆಗತೇನೋ
ಅಂತ ಭ್ರಮಾ ಆಗ್ಯsದ ಮನಕ ನೀ ಬಂದೆ ಜೋಗಿ ಏನೋ! ||೧೧||

ಯಾವ ಸ್ವರಾ ಇದು, ಯಾವ ಕೋಗಿಲಾ? ಯಾವ ಮರವೋ ಏನೋ!
ಯಾಕ ಹೀಂಗ ಅಸರಂತ ಕೂಗತದ ಏನು ಇದಕೆ ಬ್ಯಾನ್ಯೊ?
ಸುತ್ತು ಗುಡ್ಡ ನುಗ್ಗಾಗಿ ಹೋದವೋ ಓಗೊಟ್ಟು ಇದಕs
ಬಿಸಿಲು ಕುಣಿದು ಬೆವತsದ, ಈಗ ಬಂದsದ ಮಳಿಯ ಹದಕs ||೧೨||

---

ಆಕರ: ದ.ರಾ.ಬೇಂದ್ರೆ,ಗಂಗಾವತರಣ, ಡಾ|| ವಾಮನ ಬೇಂದ್ರೆ (ಸಂ.), ಅಂಬಿಕಾತನಯದತ್ತ ವೇದಿಕೆ, ಶ್ರೀಮಾತಾ ಪ್ರಕಾಶನ, ಧಾರವಾಡ, ೧೯೮೯ ಪು. ೭೫-೭೭.

# ಜೋಗಿ

ಬೇಂದ್ರೆಯವರ 'ಜೋಗಿ' ಕವನದ ಜೋಗಿ ಸ್ವಯಂ ಕವಿಯೆ ಆಗಿ, ಅಲ್ಲಿ ತನ್ನ ಆತ್ಮದ ಸಂಭಾಷಣೆಯೊಂದಿಗೆ ಪರಮಾತ್ಮನನ್ನು ಅರಿಯುವ ಪ್ರಯತ್ನ ಮಾಡುವ ಒಂದು ಜೀವಸಂವಾದ ನಡೆದಿದೆ.

ಒಟ್ಟು ೧೨ ಚರಣಗಳಿರುವ ಈ ಕವನದಲ್ಲಿ ಮೊದಲ ಐದು ಚರಣಗಳು ವ್ಯಕ್ತಿಯು ಕಾಣುವ, ನೇರವಾಗಿ ಅರ್ಥವಾಗುವ ಬದುಕಿನ ಹಾಗೂ ಧಾರ್ಮಿಕ ನಂಬಿಕೆಯ ಸಮೃದ್ಧಿ ಮತ್ತು ಭಯಾನಕತೆಯ ಚಿತ್ರವನ್ನು ನೀಡುತ್ತವೆ :

> ಊರ ತುದಿಯ ಆ ಮೂರು ಬಟ್ಟೆ, ಮುಗಿದಲ್ಲಿಕೊಳ್ಳವೆಲ್ಲಿ
> ಹಳ್ಳ ಅಡಗಿ ಹರಿದಲ್ಲಿ, ತುಡುಗು-ದನ ತೊಂಡು ಮೇಯುವಲ್ಲಿ
> ದಿಕ್ಕು ತಪ್ಪತಾರ, ತಪ್ಪಿ ಹೊಕ್ಕರs ಕಕ್ಕಾವಿಕ್ಕಿಯಾಗಿ
> ಇರುಳು ಅಂತನs ಹಗಲs ಗೂಕತಾವ ಅಲ್ಲಿ ಜೋಡಿಗೂಗಿ.

ಎಂಬಲ್ಲಿ 'ಊರು ಹೋಗು ಅನ್ನುತ್ತಿದೆ, ಕಾಡು ಬಾ ಅನ್ನುತ್ತಿದೆ' ಎಂಬ ಭಾವದ ಮನಸ್ಸಿಗೆ ಪಕ್ಕಾದ ಜೋಗಿ ಊರತುದಿಯ ಆ ಮೂರುದಾರಿ ಸೇರುವಲ್ಲಿನ ಕೊಳ್ಳ, ಅಲ್ಲಿ ಹಳ್ಳ ಅಡಗಿ ಹರಿದು, ತುಡುಗುದನ ತೊಂಡು ಮೇಯುವುದು, ಅಲ್ಲಿ ಹಗಲೇ ಕತ್ತಲಂತಿರುವುದರಿಂದ ಜೋಡುಗೂಗಿಗಳು ಗೂಕು ಹಾಕುತ್ತ, ದಿಕ್ಕುತಪ್ಪಿ ಹೋದವರು ಕಕ್ಕಾವಿಕ್ಕಿಯಾಗುವುದು ಮುಂತಾದ ಸಂಕೇತವಿದೆ. ಆ ಸಂಕೇತ ಅವನ ಮನದ ಭಾವದ ಚಿತ್ರಣವೂ ಆಗಿ ಬಿಂಬಿಸುತ್ತದೆ.

ಅದನ್ನು ದಾಟಿ ಹೋದಾಗ ಸ್ಮಶಾನ ಸಿಗುತ್ತದೆ. ಅದರ ಎಡಗಡೆ ಒಟ್ಟು ಆಸೆಯ, ಕುತೂಹಲದ, ಆಕರ್ಷಣೆಯ 'ಕಾಮ ತನ್ನ ಹಚ್ಚಂಗಿ ಹಾಸಿಧಾಂಗೆಲ್ಲಿ ನೀರ ಪಾಚಿ । ಹೊಚ್ಚಿ ಹೊಂಡವನು ಮೆಚ್ಚ ಮಾಡತಾವೊ ಕಂಡ ಕಣ್ಣುಗಳಿಗೆ' ಎಂಬ ಕಾಮದ ಮೆಚ್ಚುತನ ತನ್ನ ಹಸುರುಪಾಚಿ ಚಾಚಿರುವುದನ್ನು ಬಣ್ಣಿಸುತ್ತಾ

ಎಚ್ಚರಿಕೆಯ ಗಂಟೆ ಬಾರಿಸುತ್ತದೆ. 'ಪಾಚಿ ಸರಿಸಿದಾಗ ಕಪ್ಪು ನೀರು ಕರಿತಾವ ಒಳಗ ಬಳಿಗೆ'. ಇದು ಇಷ್ಟೆ ಎಂದು ಕಾಮದಲ್ಲಿಯೇ ಪೂರ್ಣ ಆಸಕ್ತನಾದವನನ್ನು ಸಾವು ಬಳಿಗೆ ಕರೆಯುತ್ತದೆ. ಅದನ್ನು ಮೀರುವ ಬಲ ರೂಢಿಸಿಕೊಳ್ಳಬೇಕೆಂಬ ಮನೋಸ್ಥೈರ್ಯ ಹೊಂದಿದವನು ಮುಂದೆ ಸಾಗುವನೆಂದು ಆ ಸ್ಥೈರ್ಯ ಪಡೆಯಬೇಕೆಂಬ ಭಾವವು ಈ ಕಾವ್ಯದಲ್ಲಿದೆ.

ಅದರ ಮುಂದೆ ಬಲಕ್ಕೆ ಎಂಬ ಮಾತಿನಲ್ಲಿ ಬಲಭಾಗವೂ ಆಗಿ ನಮ್ಮ ಬಲಕ್ಕೆ ಬರುವ ಎಂಬ ಶ್ಲೇಷಾರ್ಥ ಹೊಂದಿ ಕಾಳಮ್ಮನಿಗಿರುವ ಹೊಲವಿದೆ. ಅದು ನಮ್ಮ ಉಪಸಂಸ್ಕೃತಿಯ ಹರಹನ್ನು ತೋರಿಸುತ್ತ, ಸಂಸ್ಕೃತಿಯ ಒಟ್ಟು ಅನುಭಾವಕ್ಕೆ, ಆ ಹೊಲದ ನಟ್ಟನಡುವಿರುವ ಹುಣಿಸಿಮರ ಏರಿ ನೋಡಬೇಕೆನ್ನುತ್ತದೆ. ಆಗ ದೂರದಲ್ಲಿ ಸಣ್ಣ ಏರಿಯ ಮೇಲೆ ಹತ್ತು ಗಿಡದ ಗುಂಪೊಂದು ಕಾಣಿಸುತ್ತದೆ.

ಅಲ್ಲಿ ತೊಗಲ ಬಾವಲೀ ಚೀರತಾವ ಭರತಿ ಹಗಲಿನೊಳಗ
ಹಿಂಡು ಪಾರಿವಾಳ ಹೊಕ್ಕ ಹೊರಡತಾವ ಮತ್ತ ಒಳಗ ಹೊರಗ.
ಅಲ್ಲಿ ಹಬ್ಬಿ ಹರುಹ್ಯಽದ ಬೇವಿಗೇ ಸುತ್ತ ಅಮೃತ ಬಳ್ಳಿ
ಹಾಲ ಸುರವತಾವ ಆಲ, ಅಲ್ಲಿ-ಅಲ್ಲಾಡತಾವ ಅಳ್ಳಿ.

ಆ ಹತ್ತುಗಿಡದ ಗುಂಪಿನಲ್ಲಿ ರಕ್ತಹೀರುವ ನಡುಹಗಲಲ್ಲಿ ಚೀರುವ ಬಾವಲಿ, ಶಾಂತಿಯ ಸಂಕೇತವಾದ ಪಾರಿವಾಳ; ಬೇವಿನಮರ, ಅದರ ಸುತ್ತ ಹಬ್ಬಿರುವ ಅಮೃತಬಳ್ಳಿ; ಹಾಲು ಸುರಿವ ಆಲ, ಜೊತೆಗೆ ಅಲ್ಲಿಯೇ ಅಲ್ಲಾಡುವ ಅಳ್ಳಿ - ಇವು ಸಮೃದ್ಧಿ ಮತ್ತು ಭಯಾನಕತೆ ಎರಡೂ ಏಕೀಭವಿಸಿರುವ ಚಿತ್ರವನ್ನು ನೀಡುತ್ತವೆ. ಅನಂತರ ಆ ವಾತಾವರಣದಲ್ಲಿಯ ಆಕರ್ಷಣೆ ಮತ್ತು ಭಯಾನಕತೆ ಇನ್ನೂ ಗಟ್ಟಿಗೊಳ್ಳುತ್ತ ಸಾಗುತ್ತದೆ :

ಅತ್ತಿಗಿಡಕ ಹತ್ಯಾವ ಹಲಸಿನ್ಹಂಗ ಬುಡಕು ಕೆಂಪು ಹಣ್ಣು
ಜೇನುತುಂಬಿ ತೊಟಗುಟ್ಟತಾವ, ಅದ ಬಯಸತಾವ ಕಣ್ಣು.

ಈ ತೋಪಿನ್ಯಾಗ ಬೆಳದsದ ಹ್ಯಾಂಗೋ ಮೂಲ್ಯಾಗ ತಪ್ಪಿ ಮಾವು
ಅದರಡಿಗೆ ಹುತ್ತ, ಅದರಾಗ ಐತೆ ಒಂದೇಳ ಹೆಡೆಯ ಹಾವು.

ಆ ಗಿಡದ ಗುಂಪಿನಲ್ಲಿರುವ ಅತ್ತಿಗಿಡದ ಬುಡಕ್ಕೆ ಹತ್ತಿದ ಜೇನು ತುಂಬಿ ತೊಟಗುಟ್ಟುವ ಹಣ್ಣು ಆಕರ್ಷಿಸುತ್ತದೆ. ಅತ್ತಿಗಿಡದ ಆ ಕೆಂಪುಹಣ್ಣು ಮರದ ಬುಡಬುಡಕು ಹಲಸಿನ ಹಾಗೆ ಹತ್ತಿದರೂ ಹಲಸಿನ ತೂಕವಿಲ್ಲ, ಹಲಸಿನಂತೆ ಜೇನು ಜೇನಲ್ಲ. ಆದರೆ ರುಚಿಯಿಲ್ಲದೆ ಇಲ್ಲ. ಜೊತೆಗೆ ಗೊನೆಯ ಕೆಂಪು ಹಣ್ಣಿನ ತುಂಬ ತುಂಬುಹುಳುವಿದೆ. ಕವಿಗೆ ಭಯಾನಕತೆಯ ಮಧ್ಯೆ ಗೋಚರಿಸುವ ಹ್ಯಾಂಗೋ ತಪ್ಪಿ ಹುಟ್ಟಿದ ಮಾವಿನಮರ ಕಂಡಾಗ ಆ ಗಿಡದ ಗುಂಪು ಈ ತೋಪು ಆಗುತ್ತದೆ, ಆತ್ಮೀಯತೆ ಹುಟ್ಟುತ್ತದೆ. ಆದರೆ ಅದರಡಿಯಲ್ಲಿ ಏಳುಹೆಡೆಯ ಹಾವಿರುವ ಹುತ್ತವಿದೆ. ಅಂದರೆ ಆತ್ಮೀಯತೆಯ ಸಾಹಸಗಾಥೆಗೆ ಏಳುಹೆಡೆ ಸರ್ಪದಾಟಿ ಹೋಗಬೇಕೆಂಬ ಸೂಚನೆಯಿದೆ.

ಅನಂತರದ ನಾಲ್ಕು ಚರಣಗಳು ಕನ್ನಡ ಕಾವ್ಯಪರಂಪರೆಯ ಉತ್ತಮ ಧ್ವನಿಯಾಗಿ ಕವಿಯ ಆತ್ಮ ಮಾತನಾಡುವ ನುಡಿಯಾಗಿ; ಕವಿಯ, ಕವಿಯ ಆತ್ಮದ ಸಂಭಾಷಣೆಯಾಗಿದೆ :

ಆ ಮಾವಿನೊಳಗ ಈ ಸುಗ್ಗಿಯೊಳಗ ಬಂದsದ ಕೋಗಿಲೊಂದು
ತನ್ನ ಜೋಡಿ ಕರೆದ್ಹಾಂಗ ಕರಿತsದ ನನ್ನ ಬಾರs ಅಂದು
ಕೂಗೇ ಕೂಗತsದ ಕೂಗೆ ಕೂಗತsದ ಗಿರಣಿ ಕರೆಯೊ ಹಾಂಗ
ತೆರಪು ಇಲ್ಲ ಒಂದಳತಿ ಕೂಗತsದ ಬ್ಯಾಸರಿಲ್ಲಧಾಂಗ.

ಈ ಬದುಕಿನ ಎಲ್ಲ ಜಂಜಾಟದಲ್ಲಿ ಸದಾ ಆತ್ಮದ ಕರೆಗೆ ಎಚ್ಚರವಾಗಬೇಕು. ಆ ಎಚ್ಚರ ಬರುವುದು ಆತ್ಮದ ಸುಗ್ಗಿಯ ಕಾಲ. ಆ ಮಾವಿನಲ್ಲಿ ಈ ಸುಗ್ಗಿಯಲ್ಲಿ ಒಂದು ಕೋಗಿಲೆ ಬಂದು ತನ್ನ ಜೋಡಿಗಾಗಿ ನನ್ನನ್ನು ಬಾ ಎಂದು ಕರೆಯುತ್ತಿದೆ ಎಂದು, ಅದು ನಿರಂತರ ಕೂಗಾಗಿ 'ಒಂದಳತಿ ಕೂಗತsದ ಬ್ಯಾಸರಿಲ್ಲಧಾಂಗ'. ಆ ಕೂಗಿನ ನಿರಂತರತೆ ಗಿರಣಿ ಕರೆಯುವ

ಕೂಗಿನಂತೆ ಒಂದಳತಿ ಕೂಗುವ ಬ್ಯಾಸರಿಲ್ಲದ ಕೂಗಾಗಿದೆ. ಆ ಕೂಗು ಆತ್ಮದ ಕರೆ, ಕರ್ತವ್ಯದ ಕರೆಯೆಂಬಂತೆ; ಆತ್ಮದ ಕರ್ತವ್ಯ ಪರಮಾತ್ಮನತ್ತ ನಡೆದು ಆ ಕೂಗಿಗೆ ಓಗೊಡುವುದು-ಎಂಬಂತೆ ಸಮರ್ಥ ಧ್ವನಿಯನ್ನು ಧ್ವನಿಸುತ್ತದೆ.

ಆ ಅಂತರಾತ್ಮದ ಕರೆಗೆ ಓಗೊಟ್ಟಾಗ ತಿಳಿಯದ ಯಾವುದೋ ಕಂಪು ಆ ಆತ್ಮವನ್ನು ಎಳೆಯುತ್ತದೆ. ಅದು ತುಂಬಿಯಾಗಿ ಆ ಕಂಪಿನ ಸೆಳೆತಕ್ಕೆ ಸಿಕ್ಕು ಹುಚ್ಚಾಗಿ, ದಿಕ್ಕುತೋಚದಂತಾಗಿ ಕಂಪಿನ ಕರೆಯಿಂದ ಕಂಪಿನ ಸುತ್ತು ತಿರುಗುವುದೇ ಆಗಿದೆ. ಆ ಕಂಪು ಮಾವಾಗಿ ಕೋಗಿಲೆಯಾಗಿ 'ಬಂತು ಸುಗ್ಗಿ ಬಂದsದ ಸುಗ್ಗಿ ಬರತsದ ಸುಗ್ಗಿ' ಎಂದು ಕೂಗಿಕೂಗಿ ಹೇಳುತ್ತದೆ. ಆ ಕೂಗಿನಲ್ಲಿರುವ ಕ್ರಿಯಾಪದದ ಬಳಕೆಯ ಗತಿ; ಬಂತು ಸುಗ್ಗಿ, ಬಂದsದ ಸುಗ್ಗಿ, ಬರತsದ ಸುಗ್ಗಿ ಎಂಬುದು ವರ್ತಮಾನ, ಭೂತ, ಭವಿಷ್ಯತ್ತಿನಲ್ಲಿದ್ದು - ಕವಿಯ ಮನದ ಏಕಬಿಂದುವಿನಲ್ಲಿ ಸಂಧಿಸುತ್ತಿರುವ ಸೂಚನೆಯಾಗಿದೆ :

> ತಾರ ಪಂಚಮದಾಗ ಕೋಗಿಲಾ ಕೂಗತsದೊ ಜೋಗಿ
> ಯಾವ ಬಣ್ಣ ಅದಕಾವ ಕಣ್ಣು ನಾ ನೋಡಲೇನು ಹೋಗಿ?
> ತೋಟವೆಲ್ಲ ಹೂವಾಗಿ ನಿಂತು ತೊಂಗೆಲ್ಲ ಗೊಂಚಲಾಗಿ
> ಪಾಡು ಆಗತಾವ, ಹಣ್ಣು ಆಗತಾವ ಅದರ ಲಯಕೆ ತೂಗಿ.

ಎಂಬಲ್ಲಿ ಕವಿಯ ಆತ್ಮ, ಪರಮಾತ್ಮನ ಕೋಗಿಲ ಕರೆಗೆ ಓಗೊಡುತ್ತ ಅದು ಕವಿಯಾದ ಜೋಗಿಗೆ ಕೇಳುತ್ತದೆ. 'ತಾರ ಪಂಚಮದಾಗ ಕೋಗಿಲಾ ಕೂಗತsದೊ ಜೋಗಿ, ಯಾವ ಬಣ್ಣ ಅದಕಾವ ಕಣ್ಣು ನಾ ನೋಡಲೇನು ಹೋಗಿ?'

ಆ ತಾರ ಪಂಚಮದ ಕೋಗಿಲೆಯ ಪರಮಾತ್ಮನ ಕೂಗಿಗೆ; ತನ್ನ ಮನದ ತೋಟವೆಲ್ಲಾ ಹೂವಾಗಿ, ತೊಂಗೆಲ್ಲಾ ಗೊಂಚಲಾಗಿ ಪಾಡಾಗಿ, ಹಣ್ಣಾಗಿ ಅದರ ಲಯಕ್ಕೆ ತೂಗುತ್ತಿದೆ ಎಂದು- ಆ ಕರೆಗೆ ತೂಗುಯ್ಯಲಿಡುವ ಆತ್ಮ ಪರಮಾತ್ಮನ ಜೊತೆಗೆ ಬೆರೆಯಲು ತೂಗುವ ಸ್ಥಿತಿಯ ಸಮರ್ಥ ಬಣ್ಣನೆ ಇದೆ. ಅದು ವ್ಯಕ್ತಿ

ತನ್ನ ವೈಯಕ್ತಿಕ ಜೀವನದಲ್ಲಿ ಅಧ್ಯಾತ್ಮಿಕ ಎತ್ತರಕ್ಕೇರುವ ಮಾನಸಿಕ ಊರ್ಧ್ವಗಾಮಿತ್ವವನ್ನು ಸೂಚಿಸುತ್ತದೆ.

ಕವಿಯ ದೇಹವನ್ನು ಬಿಟ್ಟು ಆತ್ಮ ಪರಮಾತ್ಮನೊಡನೆ ತೂಗುವ ತೂಗುಯ್ಯಾಲೆಯ ಸಮರ್ಥ ಅಭಿವ್ಯಕ್ತಿ 'ತೊಂಗೆಲ್ಲ ಗೊಂಚಲಾಗಿ ಪಾಡು ಆಗತಾವ' ಎಂಬ ನುಡಿಯಲ್ಲಿದೆ. ಈ ಪಾಡು ಎಂಬ ಪದ ಆತ್ಮದ ಪರಿಪಕ್ವತೆಯ ಸ್ಥಿತಿಯನ್ನು ಧ್ವನಿಸುತ್ತದೆ. ಕಾಯಿಯಿದ್ದದ್ದು ಪಾಡಾಗಿ ಬಂದ ಪರಿಯನ್ನು ಅಭಿವ್ಯಕ್ತಿಸುತ್ತದೆ. ಮಾವಿನಮರದ ಸಂಕೇತ, ಅಲ್ಲಿನ ಕೋಗಿಲೆಯ ಕರೆ, ಏಳುಹೆಡೆ ಸರ್ಪದ ಹುತ್ತ ಏರಿಹೋದ ಧೈರ್ಯ-ಆತ್ಮನನ್ನು ಮಾವಿನ ಹಣ್ಣಿನ ಪಕ್ವತೆಯ ಸ್ಥಿತಿಗೆ ತಂದಿದೆ. ಉತ್ತರಕರ್ನಾಟಕದಲ್ಲಿ ಮಾವು ದೋರುಗಣ್ಣಿನ ಹಂತ ದಾಟಿ ಪಕ್ವತೆಯ ಹಂತ ತಲುಪಿದ ಸ್ಥಿತಿಯನ್ನು 'ಪಾಡು' ಎನ್ನುವರು. ಆಗ ಅದನ್ನು ಕಿತ್ತು ಅಡೆ ಹಾಕಬೇಕಾಗುತ್ತದೆ ಹಣ್ಣಾಗಲು. ಅಂತಹ 'Ripeness and readiness to be gatheredನ ಸ್ಥಿತಿಗೆ ತಲುಪಿದ್ದ ಆತ್ಮದ ಏರುಸ್ಥಿತಿ ಬಂದಿದೆ. ಅದೇ ಸಂದರ್ಭದಲ್ಲಿ ಆತ್ಮ ಪರಮಾತ್ಮನನ್ನು ತಲುಪಲು ನಡೆಸಿದ ಹೋರಾಟ ಅದರ ಪಾಡನ್ನು ಅಂದರೆ 'Suffering, trouble ಅನ್ನು Proper state, fitnessಗೆ ತಲುಪಿದ ಹಂತವನ್ನೂ ಸೂಚಿಸುತ್ತದೆ. ಅದು 'ಪಟ್ಟಪಾಡೆಲ್ಲವೂ ಹುಟ್ಟುಹಾಡಾಗುತ! ಹೊಸದಾಗಿ ರಸವಾಗಿ ಹರಿಯುತಿದೆ' ಎಂಬ ಸ್ಥಿತಿಯೂ ಆಗುತ್ತದೆ. ಅಂತಹ ಪಾಡು ಆತ್ಮ ಪರಮಾತ್ಮನನ್ನು ಸೇರುವ, ತೂಗಿ ತೊನೆವ ಸಮರ್ಥ ಚಿತ್ರಣವಾಗಿದೆ.

ಅಂತರಾತ್ಮದ ಕರೆಗೆ ಓಗೊಟ್ಟ ಕವಿಯ ಆತ್ಮ ಇರುವ ಹಂಗನ್ನೆಲ್ಲ ಬಿಟ್ಟು ಪರಮಾತ್ಮನ ಕರೆಗೆ ತೂಗುತ್ತ, ಆ ಕರೆಯಿಂದ ತಲೆಕಾವಿನಲ್ಲಿ ಇಮ್ಮಾವಿನಲ್ಲಿ ಬಿಸಿಗಾಲ ನೂಗಿದಂತಾಗುತ್ತದೆ. ಆ ಕರೆಯ ಝಳದಲ್ಲಿರುವ ಆತ್ಮ ಅದರಿಂದ ತಪ್ಪಿಸಿಕೊಳ್ಳಲಾಗದ ತನ್ನ ಸ್ಥಿತಿಯಿಂದ ಮತ್ತೆ ಜೋಗಿಯನ್ನು ಕೇಳುತ್ತದೆ:

ಕೊಳಲ ನುಡಿಸಿಧಾಂಗ ಕುಹೂಹುಹೂಹೂ ಉಲಿತಽದೊ ಜೋಗಿ
ಬೇರೆ ಕೆಲಸದಾಗ ಮನಸು ತೊಡಗದೋ ನೋಡಲೇನು ಹೋಗಿ ||?

ಕೋಗಿಲೆಯ ಕರೆ ಇಹದ ಕೊಳಲ ನುಡಿಯಂತಾದಾಗ ಈ ಇಹದ ಕೆಲಸದಲ್ಲಿ ಮನಸ್ಸು ತೊಡಗದೆ 'ನೋಡಲೇನು ಹೋಗಿ' ಎಂದು ಜೋಗಿ ಕವಿಯನ್ನು ಅವನ ಅಂತರಾತ್ಮ ಕೇಳುತ್ತದೆ. ಅನಂತರದ ಚರಣ ಕವಿಯ ಆತ್ಮವು ಜೋಗಿ ಹೇಳಿದ ಎಂದು; ಅವನು ಹೇಳಿಕೊಟ್ಟ ನಾಮ ಜಪಿಸುವಾಗ ಆದ ಪರಿಣಾಮವನ್ನು ಕಾವ್ಯವಾಗಿಸುತ್ತದೆ:

ಬಂದೆ ಜೋಗಿ ಬಾ, ಬಾರೊ ಜೋಗಿ ಬಾ, ಏನು ಹೊತ್ತು ಬಂದಿ
ನೀನೆ ಹೇಳಿದಾ ನಾಮ ಜಪಿಸುವಾಗ ಬಂತೋ ಸುಗ್ಗಿ ಸಂಧಿ.
ತಲೆಯ ಯಾವುದೋ ನಾಡಿಯೊಳಗ ಸುರುವಾತು ಸುಗ್ಗಿಸೊಲ್ಲು
ಮುಂದೆ ಕೇಳಿದರ, ಅದs ತುಂಬಿತೋ ಮೂಲೆ ಮೂಲೆಯಲ್ಲು.

ಇಲ್ಲಿಯವರೆಗೆ ಸಂಭಾಷಣೆಯಲ್ಲಿ ಕೇಳುತ್ತಿದ್ದ ಜೋಗಿ ಪ್ರತ್ಯಕ್ಷನಾಗುತ್ತಾನೆ. ಕವಿಯ ಆತ್ಮ ಕವಿಯನ್ನು 'ಬಂದೆ ಜೋಗಿಬಾ, ಬಾರೊ ಜೋಗಿಬಾ, ಏನು ಹೊತ್ತು ಬಂದಿ' ಎಂದು ಎಚ್ಚರಿಕೆಯಿಂದ ಅವನನ್ನು ಸ್ವಾಗತಿಸುತ್ತ, ನಿನ್ನ ನಿರೀಕ್ಷೆಯಲ್ಲಿಯೇ ಇರುವಾಗ ನಿನ್ನ ಅಗತ್ಯ ಇರುವಾಗ ಬಂದೆ. ನೀನು ಹೇಳಿದ ಆತ್ಮಸಾಧನೆಯ ನಾಮ ಜಪಿಸುವಾಗ ಆ ಪರಮಾತ್ಮನ ಸುಗ್ಗಿ ಸಂಧಿ ಬಂತು. ಆ ಸುಗ್ಗಿಯ ಸೊಲ್ಲು ತಲೆಯ ಯಾವುದೋ ನಾಡಿಯಲ್ಲಿ ಸುರುವಾಗಿ ಕೇಳುತ್ತ ಕೇಳುತ್ತ ಅದೇ ಮೂಲೆಮೂಲೆಯಲ್ಲಿ ತುಂಬಿತು:

ಗುಡಿಗೆ ನಾನು ಹೊರಟಾಗ ಕರೀತದ ಕುಹುಕ್ಕುಹೂ ಎಂದು
ಮನದ ಜಪದ ನಡುನಡುವೆ ನಡೀsತsದ ಓಂ ಕುಹೂ ಎಂದು
ಕನಸಿನೊಳಗ ನಾ ಸ್ವರಾ ಕೇಳಿ, ಮಾಮರಾ ಆಗತೇನೋ
ಅಂತ ಭ್ರಮಾ ಆಗ್ಯsದ ಮನಕ ನೀ ಬಂದೆ ಜೋಗಿ ಏನೋ ।

ಎಂದು ಭಗವಂತನ ಸಾನ್ನಿಧ್ಯ ದೊರೆತ ಭಾವವನ್ನು ಆ ಕೂಗು ತಾನು ಗುಡಿಗೆ ಹೊರಟಾಗ ಕುಹುಕ್ಕುಹೂ ಎಂದು ಕರೆಯುತ್ತದೆ. ನನ್ನ ಮನದ ಜಪದ ನಡುನಡುವೆ ಓಂಕುಹೂ ಎಂದು ನುಡಿಯುತ್ತದೆ. ಆಗ 'ಕನಸಿನೊಳಗ ನಾ ಸ್ವರಾ

ಕೇಳಿ, ಮಾಮರಾ ಆಗತೇನೋ' ಎಂಬ ಭ್ರಮೆ ಮನಸ್ಸಿಗಾಗಿದೆ.

ಮನದಕೋಗಿಲೆ ಓಂ ಕುಹೂ ಎಂದಾಗ ಮೈಯಾದ ಮಾಮರ ಜುಮ್ಮೆಂದಿದೆ. ಇಲ್ಲಿ ಗುಡಿ ಮತ್ತು ಮೈ ಭೌತವಾಗಿ ಮನಸ್ಸು ಆತ್ಮಧ್ಯಾನಭಾವದಲ್ಲಿ ಲೀನವಾಗಿ `ನೀ ಬಂದೆ ಜೋಗಿ ಏನೋ!' ಎಂದು ಆಶ್ಚರ್ಯ ವ್ಯಕ್ತಪಡಿಸುವ ಸಂಭ್ರಮವಾಗುತ್ತದೆ. ಆ ಭ್ರಮೆಯ ಸಂದರ್ಭದಲ್ಲಿ ಆತ್ಮಕವಿಯಾದ ಜೋಗಿಯನ್ನು-ಗೊಂದಲ ನಿವಾರಣೆಗಾಗಿ ಪ್ರಶ್ನಿಸುವಂತೆ 'ಯಾವ ಸ್ವರ ಇದು, ಯಾವ ಕೋಗಿಲ, ಯಾವ ಮರವೊ ಏನೋ? ಯಾಕೆ ಹೀಗೆ ಒಂದೇ ಸಮನೆ ಕೂಗುತ್ತಿದೆ, ಇದಕ್ಕೇನು ಬೇನೆ?' ಎಂದು ಕೇಳುತ್ತದೆ. ಆ ಕೂಗಿನಲ್ಲಿ ಒಟ್ಟು ಪರಿಸರ ಸುತ್ತಲ ಗುಡ್ಡ ಆ ಅಂತರಾತ್ಮನ ಕರೆಗೆ ನುಗ್ಗಾಗಿ ಹೋಗಿರುವಾಗ, ಅಂದರೆ-ಇಡೀ ಪ್ರಕೃತಿ ಪರಮಾತ್ಮನಲ್ಲಿ ಲೀನವಾದಾಗ ಬಿಸಿಕಾವು ಬೆವತು ತಣ್ಣಗಾದ ಹಾಗೆ, ಆತ್ಮವಾದ ತಾನು ಸಾಧನೆಯ ಸಿದ್ಧಿ ಪಡೆದ ಭಾವ ಹೊಂದಿದೆ ಎಂದು ಕವಿಯ ಆತ್ಮ ನುಡಿಯುತ್ತದೆ. 'ಬಿಸಿಲು ಕುಣಿದು ಬೆವತsದ ಈಗ ಬಂದsದ ಮಳಿಯ ಹದಕs'.

ಹೀಗೆ 'ಜೋಗಿ' ಕವನ ತನ್ನ ತೆಕ್ಕೆಯಲ್ಲಿ ಅನುಭಾವವನ್ನು ಹಿಡಿದಿಟ್ಟು ಕೊಂಡು ಓದುಗರ ಅಳವಿಗೆ ತಕ್ಕಷ್ಟನ್ನು ಹಂಚಿಕೊಡುವ ಶ್ರೇಷ್ಠ ಕವನವಾಗಿದೆ.

* * *

## ೩. ಸಣ್ಣ-ಸೋಮವಾರ

ಬಂತಣ್ಣ ಸಣ್ಣ ಸೋಮವಾರ
ಕಾಣಬೇಕಣ್ಣ ಸೋಮೇಶ್ವರ

ಹಾದಿಗುಂಟ ಚೆಲ್ಲಾಟ
ದಾರಿ ಉದ್ದ ನೀರನೋಟ
ಹಸರಾಣಿ ಬನರಾಣಿ ತ್ವಾಟ;
ಅತ್ತ ಏರೀ ಇತ್ತ ವಾರಿ
ನಡುನಡುವೆ ಕೆರಿ, ಕೆರಿ
ಸುತ್ತು ಮತ್ತು ಪಯಿರಿನ ಮಾಟ.

ಮುಗಿಲಾಗ ಮೋಡದ ಹಡಗು
ಎಲ್ಲೆಲ್ಲೊ ಮಿಂಚೂ ಗುಡುಗು
ಚಳಿಗಾಽಳಿ ತಂದಽರು ನಡುಗು
ಹುಡುಗ ಪಾಳ್ಯಕ್ಕ ಎಲ್ಲಾನು ಬೆಡುಗು.

ನಾ ಮುಂದ ನೀ ಮುಂದ
ನಡಿಗೀಯು ತರತರದಿಂದ
ಸಾಲಿಽಗೆ ಸೂಟಿ ಎಂಥ ಹ್ವಾರೆ?
ಕಾಯಿಕಪ್ಪುರ ಕಟಿಕೊಂಡು
ಬೆಲಪತ್ರಿ ಹಿಡಕೊಂಡು
ಸಂಗಾಟ ಫರಾಳ ಬ್ಯಾರೇ.

ಧಾರವಾಡ ಸೀಮಿ ಛಂದ
ಏರು ಇಳಿವಿನ ಅಂದ
ಹಬ್ಬ! ಕುಣಿಕೋತ ಹೊರಟಾಂಗ ಕುದುರಿ,

ಮರದಿಂದ ಮರಕ ಹಾರಿ
ಟೊಂಗಿಯಿಂದ ಟೊಂಗಿಗೇರಿ
        ಹುಬ್ಬ । ಹಾರsಸತಾವ ಮಂಗ ಬೆದರಿ,
ತಪತಪ ತೊಯ್ದು ಗಿಡ
ಅಲ್ಲಾಡಿ ಟಪಟsಪ
        ಅಬ್ಬ । ಬೀಳ್ತಾವ ನೀರಲಹಣ್ಣು ಉದರಿ.

        ಗುಡ್ಸು ದುಡು ದೂಡು ಬರುತಿತ್ತು ದೂಡಿ
ಸೀಟೀ ಹೊಡೆತಿತ್ತು ದೂರಿಂದ ಗಾಡಿ
ಗೇಟಿನ ಫಜಾರಗಟ್ಟೆಗೋಡಿ ಓಡಿ
ಕೈಯೆ ಸಿಗ್ನಲು ಮಾಡಿ
ಒಬ್ಬರೊಬ್ಬರ್ನ ನೋಡಿ
        ನಾವು । ನಿಲ್ತಿದ್ವಿ ಠೀಕು ಜೋಡಿ ಜೋಡಿ.

ತಗ್ಗಿನ್ಯಾಗ ಗಿಡದ ಗುಂಪು
ಹೊಂಡsದ ನೀರ ತಂಪು
        ದೂರಿಂದ ಕಂಡರೂ ಸೊಂಪು.

ಭಜನೀಯ ಮ್ಯಾಳದ ಧನಿ
ಅಲ್ಲಾ ದೂರಾ ಅಲ್ಲಾ ಸನಿ
        ತುಳಕ್ಯಾಡತಾವ ದಿಕ್ಕು ದಿಕ್ಕು.
ತಪ್ಪಿ ಉಳಿದ ಕೋಗಿಲಾ
ನಡುವೇನs ಕೂಗ್ತದ
        ಶ್ರಾವಣದ ಝುಡಿಯೊಳಗ ಸಿಕ್ಕು.

ಹರಹರ ಮಹಾದೇವಾ
ಈಸಾಡ ತಾವ ಜೀವಾ.
    ಮಾನಸ ಸರೋವರ ಹೊಕ್ಕು.

ಗರ್ಭ ಗುಡಿಯೊಳಗ ಲಿಂಗ
ನಿದ್ದಿಯೊಳಗs ನೋಡಿಧಾಂಗ
    ಕಣ್ಣು ಮುಚ್ಚತಾವ ನಮೋ ಎಂದು.
ಗವೀಯೊಳಗಿನ ದಾರಿ
ಹರದಾರಿ ಹರದಾರಿ
    ಮಿಂಚಿತ್ತು ಚಂದ್ರಕ್ವಾರಿ ಒಂದು.
ನಿಂತs ಮೈಯಾಗಿ ಖಂಬ
ಸೋರ್‍ಯಾವ ಜಂಬಗಿಂಬ
    ಹಿಡಿದಾನ ಕೈಯ್ಯ ಶಿವನೆ ಬಂದು.

ಎಚ್ಚರsದಾಗ ಇದು
ಹುಚ್ಚುಚ್ಚಾರ ಅನಿಸಿ
    ಎಲ್ಲಾರ ಕೂಡ ಕೈ ಮುಗಿದು
ಬೆಂಡೂ ಬೆತ್ತಾಸ ಅಂತ
ತಿಂತsನ ನುರಿಸಿಕೊಂತ
    ಹೋಗತಿದ್ವಿ ಜಾತ್ರಿಗೆ ಜಿಗಿದು.

ಶಾಲ್ಮಲಿ ಸಣ್ಣ ಬಾಲಿ
ಕಿವಿಯಲ್ಲಿ ತಾಳೆವಾಲಿ
    ಗರಿಗರಿ ಬನದಾಗ ಅಡಗಿ

ಗಂಗಾ ಹೊಳಿಯಾಗಿ
ಸಾಗರ ಬಿದ್ದು ಸಾಗರಕಾಗಿ
    ಹೊರಟಾಳ ಗೋಕರ್ಣಕಡಿಗಿ.
ಬೂರಲ ದೀಪಮಾಲಿ

ನಂದಿಸಿ ಸೆಜ್ಜಿಸಾಲಿ
ಗತ್ತಿನ : ಸಪ್ಪಳಿಲ್ಲದ ನಡಿಗಿ.

ಆ ರಾತ್ರಿ ಈ ರಾತ್ರಿ
ಯಾತರದು ಐತಿ ಖಾತ್ರಿ
ಶಿವರಾತ್ರಿ ಬೆಳಕೆ ಬೆಳ್ಳಬೆಳಗು.
ಒಟ್ಟಿತ್ತು ಏನೋ ಹಾಸ
ತಟ್ಟಿತ್ತು ಶಿವಭಾಸ
ಕೈಲಾಸಾನೆ ಹೊರಗೂ ಒಳಗು.
ಜೀವದ ಜಾಗರಣೆ
ಶ್ರಾವಣದ ಶರಣ ಸರಣಿ
ಓಂಕಾರ ಕಹಳೆಯ ಮೊಳಗು.

ಭಾಽವಾಽ ಇದ್ದಾಂಗ ದೇವಾ
ಹೇಳಿದ್ರು ಹಿರಿಯರು
ಅಲ್ಲೆ । ಸುತ್ತಾಡತಾವ ನಮ್ಮ ಖ್ಯಾಲಾ.
ಎಣಿಸಿದರ ಏನೋ ಕನಸ
ಕಂಡಾಂಗ ಅನಸ್ತಽದ
ಕಣ್ಣು । ಆಗ್ತಾವ ಹ್ಯಾಂಗೊ ತೇಲುಮೇಲಾ.

ನೆನಪಿನ ಓರಿಯೊಳಗ
ಮಿಣುಕ್ತಾವ ಏಣ್ಣೀ ದೀಪ
ಎಲ್ಲೆ । ಹೋದಾವೊ ಗೆಳೆಯಾ ಆ ಕಾಲಾ.

ಬಂತಣ್ಣ ಸಣ್ಣ ಸೋಮವಾರಾ
ಕಾಣಬೇಕಣ್ಣಾ ಸೋಮೇಶ್ವರಾ.

---

ಆಕರ: ದ.ರಾ. ಬೇಂದ್ರೆ , ಮುಗಿಲ ಮಲ್ಲಿಗೆ, ಪ್ರತಿಭಾ ಗ್ರಂಥಮಾಲೆ, ಧಾರವಾಡ. ೧೯೬೧,
ಪು. ೨೩-೨೭.

# ಸಣ್ಣ ಸೋಮವಾರ

ಬೇಂದ್ರೆಯವರ 'ಸಣ್ಣ ಸೋಮವಾರ'* ಧಾರವಾಡದ ಪರಿಸರದಲ್ಲಿ ಅರಳಿದ ಅವರ ಆಸ್ತಿಕಭಾವ ಬೆಳೆದು ಅಧ್ಯಾತ್ಮಿಕ ಅನುಭಾವವಾದುದರ ಬಗೆಯನ್ನು ತಿಳಿಯಹೇಳುವ ಕವನ. ಅವರ ಧಾರವಾಡದ ನೆಲೆಗಟ್ಟು ಭಾರತೀಯ ಧಾರ್ಮಿಕ ಹಿನ್ನೆಲೆಯಲ್ಲಿ ಹೊಮ್ಮಿ, ಒಂದು ಕಾಲದ ಮಿತಿಯ ಅನುಭವ ಸಾರ್ವಕಾಲಿಕವಾಗಿ; ಸೋಜಿಗದ ಚಿಕ್ಕಂದಿನ ನಂಬಿಕೆಯ ಭಾವ ಪ್ರಕೃತಿ ಸಹಜ ಪ್ರಕಾಶವಾಗಿ ಈ ಕವನದಲ್ಲಿ ಮೂಡಿದೆ:

ಬಂತಣ್ಣಾ ಸಣ್ಣ ಸೋಮವಾರಾ
ಕಾಣಬೇಕಣ್ಣಾ ಸೋಮೇಶ್ವರಾ ||ಪಲ್ಲ||

ಎಂಬ ಪ್ರಾರಂಭದ ನುಡಿಯಲ್ಲಿ ತನ್ನ ಎಪ್ಪತ್ತನೇ ವಯಸ್ಸಿನಲ್ಲಿ ಬಾಲ್ಯದ ನೆನಪನ್ನು ಮಾಡಿಕೊಳ್ಳುತ್ತಿರುವ ಕವಿಯಲ್ಲಿ ಆ ಸೋಮೇಶ್ವರನ ಕಾಣ್ಕೆಯ ಭಾವವಿದೆ. ತನ್ನ ಬಾಲ್ಯದ ಸುಂದರ ಚಂಚಲತೆ, ಮಕ್ಕಳಾಟ, ನೋಟ, ಹಸಿರು ತೋಟ, ಸುತ್ತಮುತ್ತಲ ಪಯಿರಿನ ಮಾಟ; ಮುಗಿಲು, ಮೋಡ, ಮಿಂಚು, ಗುಡುಗು, ಚಳಿಗಾಳಿಯ ಬೆಡಗಿಗೆ ಪಕ್ಕಾದ ಮನಸ್ಸಿದೆ. ಶ್ರಾವಣಮಾಸದಲ್ಲಿ ಕವಿಯಲ್ಲಿನ ಶ್ರವಣಪ್ರತಿಭೆ ಜಾಗೃತವಾದ ಪ್ರಕೃತಿಯಿದೆ. ಆ ಪ್ರಕೃತಿಯಲ್ಲಿ ಸೋಮೇಶ್ವರನನ್ನು ನೋಡಲು ಹೋಗುವಾಗಿನ ಬಿಡುವು ಮನಸ್ಸು ಮತ್ತು ಮಕ್ಕಳಿಗೆ ಇಷ್ಟವಾದ ಫರಾಳದ ರುಚಿಯಿದೆ:

ನಾ ಮುಂದ ನೀ ಮುಂದ
ನಡಿಗೀಯು ತರತರದಿಂದ
ಸಾಲಿsಗೆ ಸೂಟಿ, ಎಂಥ ಹ್ವಾರೆ?

---

* 'ಶ್ರಾವಣ' ಪದ ಅಪಭ್ರಂಶವಾಗುತ್ತ ಧಾರವಾಡದ ಗ್ರಾಮೀಣರ ಬಾಯಲ್ಲಿ 'ಸಣ್ಣ' ಆಗಿದೆ. 'ಸಣ್ಣಸೋಮವಾರ' ಪವಿತ್ರವಾಗಿ ಧಾರವಾಡದ ಜನರ ಭಕ್ತಿಭಾವದ ಸೆಲೆಯಾಗಿದೆ. ಅಂದು ಸೋಮೇಶ್ವರನ ದರ್ಶನ ಭಾಗ್ಯವನ್ನು ಪಡೆದು ಜನ ಧನ್ಯರಾಗುತ್ತಿದ್ದಾರೆ.

ಕಾಯಿ ಕಪ್ಪುರ ಕಟಿಕೊಂಡು
ಬೆಲಪತ್ರಿ ಹಿಡಕೊಂಡು
ಸಂಗಾಟ ಫರಾಳ ಬ್ಯಾರೇ.

ಆ ಸೋಮೇಶ್ವರನಿರುವ ಸೀಮೆ ಧಾರವಾಡದ ಏರು ಇಳುವಿನ ಚಲನಶೀಲತೆಯ ಜೀವತುಂಬಿದ ಪ್ರಕೃತಿಯ ಬೀಡಾಗಿ; ಮಂಗಗಳು, ಟೊಂಗೆಯಿಂದ ಟೊಂಗೆಗೆ ಏರಿ ನೀರಲಹಣ್ಣು ಉದುರಿಸುವ; ಗೂಡ್ಸುಗಾಡಿ ದುಡುದುಡು ಬರುವ; ಅದರ ಶಬ್ಧ ಕೇಳಿ ಮಕ್ಕಳು ರೈಲಾಗಿ ಠೀಕು ಜೋಡಿಜೋಡಿ ನಿಂತು ನಿಂತಲ್ಲೆ ಕುಣಿವ ಕುಣಿತವಿದೆ. ಆ ಜೀವಗತಿ ಆಸ್ತಿಕತೆಯ ಜೀವಂತಿಕೆಯನ್ನು ಬಿಂಬಿಸುತ್ತದೆ:

ತಗ್ಗಿನ್ಯಾಗ ಗಿಡದ ಗುಂಪು
ಹೊಂಡsದ ನೀರ ತಂಪು
ದೂರಿಂದ ಕಂಡರೂ ಸೊಂಪು.

ಎಂಬ ವಾಸ್ತವಚಿತ್ರಣ ವಯಸ್ಸಾದ ಶರೀರದಿಂದ ಮಕ್ಕಳಾಗಿದ್ದಾಗಿನ 'ನಾ ಮುಂದ ನೀ ಮುಂದ' ಎಂದು ಗುಂಪಾಗಿ ನಡೆದ, ತಂಪಾದ ಮನದ ಆನಂದವನ್ನು 'ದೂರಿಂದ ಕಂಡರೂ ಸೊಂಪು' ಎಂದು ನೆನೆಯುತ್ತಿದೆ.

ಸೋಮೇಶ್ವರನನ್ನು ಕಾಣಲು ಹೋಗುವಾಗಿನ ಭಜನಿಯ ಮ್ಯಾಳದ ದನಿ 'ಅಲ್ಲಾದೂರಾ ಅಲ್ಲಾಸನಿ' ಎಂಬ ಸೋಮೇಶ್ವರನ ಅನುಭವವಾಗಿ, ನಡುವೆ ಕೂಗುವ ಕೋಗಿಲೆಯ ಧ್ವನಿ ಅಧ್ಯಾತ್ಮಿಕ ಅನುಭವದ ಕೂಗಾಗಿ, ಮಾನಸ ಸರೋವರ ಹೊಕ್ಕು, 'ಹರಹರ ಮಹಾದೇವ' ಎಂಬ ಭಾವದಲ್ಲಿ ಜೀವ ಈಸಾಡುವ ಅನುಭವ ನೀಡುತ್ತದೆ. ಆ ಕೋಗಿಲೆಯ ಧ್ವನಿ ವಾಸ್ತವಿಕ ಅರಿವನ್ನು ನೀಡುತ್ತ ಅಧ್ಯಾತ್ಮಿಕ ಸ್ತರಕ್ಕೊಯ್ಯುವ ಅಲೌಕಿಕ ಧ್ವನಿಯಾಗಿದೆ. ಭಜನೆಯ ಧ್ವನಿ ನಿರ್ದಿಷ್ಟತೆ ಸೂಚಿಸಿದರೂ ಸುತ್ತ ಬದುಕಿನ, ವಾಸ್ತವದ ಅರ್ಥ ಬಂಧದ ಜೊತೆಗೆ, ಆ ಕೋಗಿಲೆಯ ಧ್ವನಿ ದೇವರು-ಭಕ್ತ, ಜೀವ-ಮಹಾದೇವ ಸಂಬಂಧ ಕಲ್ಪಿಸುವ

ಅಧ್ಯಾತ್ಮಿಕ ಸೇತುವಾಗಿ ಬಂದಿದೆ. ಆ ಧ್ವನಿ ಸಾಮಾನ್ಯತೆಯನ್ನು ಅಸಾಮಾನ್ಯತೆಗೆ ಕರೆದೊಯ್ಯುವ ಸಾಧನದ ಸಂಕೇತವಾಗಿ ಕಾವ್ಯದಲ್ಲಿ ಮೂಡಿದೆ. ಆ ಸುತ್ತಲ ವಾತಾವರಣದಲ್ಲಿ ಸೋಮೇಶ್ವರನನ್ನು ಕಂಡಾಗ ಮನದ ಮೇಲಾಗುವ ಪ್ರಭಾವ:

ಗರ್ಭಗುಡಿಯೊಳಗ ಲಿಂಗ
ನಿದ್ದಿಯೊಳಗs ನೋಡಿಧಾಂಗ
    ಕಣ್ಣು ಮುಚ್ಚತಾವ ನಮೋ ಎಂದು.
ಗವೀಯೊಳಗಿನ ದಾರಿ
ಹರದಾರಿ ಹರದಾರಿ
    ಮಿಂಚಿತ್ತು ಚಂದ್ರ ಕ್ವಾರಿ ಒಂದು.
ನಿಂತs ಮೈಯಾಗಿ ಖಂಬ
ಸೋ¡ರ್‍ಯಾವ ಜಂಬಗಿಂಬ
    ಹಿಡಿದಾನ ಕೈಯ್ಯ ಶಿವನೆ ಬಂದು.

ಎಂಬ ಆಸ್ತಿಕಭಾವದಿಂದ ನಮೋ ಎಂದು ಕಣ್ಣು ಮುಚ್ಚಿದಾಗ ಮನದ ಒಳಹಾದಿಯಲ್ಲಿ ಹರದಾರಿಯಲ್ಲಿ, ಶಿವನದಾರಿಯಲ್ಲಿ: ಹರದಾರಿ ಹರದಾರಿ ಹರಿದು ಸಾಕಷ್ಟು ಸಾಗಿದಾಗ ಚಂದ್ರನ ಬೆಳಕು ಗೋಚರಿಸಿ, ಮೈಕಂಬವಾಗಿ ನಿಂತು; ಜಂಬಗಿಂಬ ಎಲ್ಲಾ ಸೋರಿ- ಶಿವನೆ ಬಂದು ಕೈಹಿಡಿದ ಭಾವ ಮನದುಂಬುತ್ತದೆ. ಮಹಾದೇವನ ಅರಿವು ಒಂದು ಬಗೆಯ ನಿದ್ದೆಯೊಳಗೆ ನೋಡಿದ ಭಾವ ತಂದರೂ, ಅದರ ದಾರಿ ಹರದಾರಿಯ ರೀತಿಯಲ್ಲಿ ಕಾಣಿಸುವುದು ಭಗವಂತನನ್ನು ಅನುಭಾವಿಸುವ ಪರಿ.

ಎಚ್ಚರಾದಾಗ, ನಿದ್ದೆಯಲ್ಲಿ ನೋಡಿದ ಹಾಗೆ ಮತ್ತು ಶಿವನೆ ಬಂದು ಕೈ ಹಿಡಿದಿದ್ದಾನೆ ಎಂಬ ಭಾವ ಹುಚ್ಚುಚ್ಚಾರ ಎನಿಸಿ ಎಲ್ಲರ ಕೂಡ ಕೈ ಮುಗಿದು ಬೆಂಡು ಬತ್ತಾಸು ತಿನ್ನುತ್ತ ನುರಿಸಿಕೊಳ್ಳುತ್ತ ಜಾತ್ರೆಗೆ ಜಿಗಿದು ಹೋಗುತ್ತಿದ್ದೆವು ಎಂದು ಬೇಂದ್ರೆಯವರು ಹೇಳಿದ್ದಾರೆ. ಹಾಗೆ ಹೇಳುತ್ತ ಭಾವ ಅನುಭಾವದ

ತೆಳುಪರದೆಯ ಅರಿವನ್ನು ತಿಳಿಯುತ್ತ, ತಿಳಿಸಲು ಪ್ರಯತ್ನಿಸುತ್ತ ಅವರು ತಮ್ಮ ಎಚ್ಚರದಲ್ಲಿ-ಓದುಗನನ್ನೂ ಎಚ್ಚರಿಸುತ್ತಾ ಸಾಗಿದ್ದಾರೆ.

ಆ ಚಿಕ್ಕಂದಿನ ಒಂದು ಅನುಭವ ಮತ್ತೊಂದು ಮಜಲಿನ ಅನುಭವಕ್ಕಾಗಿ ಶಾಲ್ಮಲಿಯ ರೂಪಕಕ್ಕೆ ಜಿಗಿಯುತ್ತದೆ. ಧಾರವಾಡದ ಸೋಮೇಶ್ವರನ ನೆಲದ ಶಾಲ್ಮಲಿ ಚಿಕ್ಕನದಿಯಾಗಿ ಹುಟ್ಟಿ ಬೆಳೆವ ರೀತಿಯನ್ನು ಬೇಂದ್ರೆಯವರು ಚಿತ್ರಿಸಿದ್ದಾರೆ. ಅವಳು ಬೆಳೆದು ಗಂಗಾವಳಿಯಾಗಿ ಗೋಕರ್ಣದ ಮಹಾ ಬಲೇಶ್ವರನನ್ನು ಕಂಡು ಸಾಗರ ಸೇರುವಾಗ ಇಡೀ ಪ್ರಕೃತಿಯೆ ಮಹಾಬಲವಾಗುತ್ತದೆ. ಸಣ್ಣಭಾವದ ಸೆಜ್ಜೆಸಾಲು ನಂದಿಹೋಗಿ ಹಿರಿದಾದ ಬೂರಲದ ದೀಪದಮಾಲೆಯಾಗಿ ಬೆಳಗಿ, ತನ್ನ ಗತ್ತಿನ ಸಪ್ಪಳಮಾಡದ ನಡಿಗೆಯಿಂದ ಜೀವಾತ್ಮ- ಪರಮಾತ್ಮನನ್ನು ಸೇರಿದ ಭಾವವಾಗಿ ಅಭಿವ್ಯಕ್ತಗೊಳ್ಳುತ್ತದೆ.

ಕೆಲವು ತಿಂಗಳ ಧಾನ್ಯ ಬೆಳೆಯಾಗಿ ಬೆಳೆದು, ದೀಪದಕುಡಿಯಂತೆ ಸೆಜ್ಜೆ ತೆನೆಯಿದ್ದು, ಅದು ಆಕಾಶಮುಖಿಯಾದರೂ ಅದಕ್ಕೆ ಅಸಾಮಾನ್ಯತೆಯ ಎತ್ತರಕ್ಕೇರುವ ನಿಲುವಿಲ್ಲ. ಆ ಎತ್ತರಭಾವದ ಊರ್ಧ್ವಗಾಮಿತ್ವದ ಸಂಕೇತವಾಗಿ ಬೂರಲಮರವಿದೆ. ಬೂರಲಮರ ಹೂತು, ದೀಪಮಾಲೆಯಂತೆ ಗತ್ತಿನಿಂದ ಸಪ್ಪಳಿಲ್ಲದೆ ಬೆಳಗುವ ರೀತಿ ಅಧ್ಯಾತ್ಮಜೀವಿ ಬೆಳಗಬೇಕು. ಮಹಾಬಲನನ್ನು ಕಾಣಬೇಕು. ಗೋಕರ್ಣದ ಮಹಾಬಲನನ್ನು ಕಾಣಲು ಶಾಲ್ಮಲಿ ಗಂಗಾವಳಿಯಾದಂತೆ ಸೆಜ್ಜೆ ಧಾನ್ಯದ ವ್ಯಕ್ತಿ ವಿಕಾಸ ಹೊಂದಿ ಬೂರಲವೃಕ್ಷವಾಗಿ ಹೂತು ಮೇಲ್ಮುಖದ ಬೆಳಕು ಕಾಣುವ ಬೆಳಕಾಗಬೇಕು ಎಂಬ ಭವ್ಯರೂಪಕವನ್ನು ಬೇಂದ್ರೆ ನೀಡಿದ್ದಾರೆ:

ಶಾಲ್ಮಲಿ ಸಣ್ಣ ಬಾಲಿ
ಕಿವಿಯಲ್ಲಿ ತಾಳೆ ವಾಲಿ
    ಗರಿಗರಿ ಬನದಾಗ ಅಡಗಿ
ಗಂಗಾ ಹೊಳಿಯಾಗಿ

ಸಾಗರ ಬಿದ್ದು ಸಾಗರಕಾಗಿ
ಹೊರಟಾಳ ಗೋಕರ್ಣಕಡಿಗಿ.
ಬೂರಲ ದೀಪಮಾಲಿ
ನಂದಿಸಿ ಸೆಜ್ಜಿ ಸಾಲಿ
ಗತ್ತಿನ : ಸಪ್ಪಳಿಲ್ಲದ ನಡಿಗಿ.

ಹಾಗೆ ತನ್ನ ಚಿಕ್ಕಂದಿನ ಭಾವ ಬೆಳೆದು ಸುತ್ತಲ ಪ್ರಕೃತಿ ಬೂರಲ ದೀಪಮಾಲೆಯಾಗಿ ಸೆಜ್ಜಿಸಾಲು ಭಾವದ ಕಿರಿತನ ನಂದಿ; ಸಾಗರಬಿದ್ದು ಸಾಗರವಾಗುವ ಅಲೌಕಿಕತೆಯ ಭಾವ, ಗತ್ತಿನ ಸಪ್ಪಳಿಲ್ಲದ ನಡಿಗೆಯಾಗುತ್ತದೆ. ಆ ಗತಿಯಲ್ಲಿ ಶಿವದರ್ಶನವಾದ ಬಗೆಯನ್ನು 'ಶಿವರಾತ್ರಿ ಬೆಳಕೆ, ಬೆಳ್ಳ ಬೆಳಗು, 'ಕೈಲಾಸಾನೆ ಹೊರಗು ಒಳಗು', ಎಂಬ ನುಡಿಗಳಲ್ಲಿ ಮೂಡಿಸಿದ್ದಾರೆ.

ಅಲೌಕಿಕತೆಯ ಭಾವಲೋಕದಿಂದ ಹೊರಬಂದು ಎಚ್ಚರಗೊಂಡ ಬೇಂದ್ರೆಯವರು ವಾಸ್ತವದ ಚಿಕ್ಕಂದಿನ ಅನುಭವದ, ಹಿರಿಯರ ಸಹಜ ಮಾತಿನ ಹಾದಿಹಿಡಿದು ನಮ್ಮ ಖ್ಯಾಲಾ ಅಲ್ಲೇ ಸುತ್ತಾಡುವ ಬಗೆಯನ್ನು ಹೇಳಿದ್ದಾರೆ. ಹಾಗೆ ಹೇಳುತ್ತ ಮತ್ತೆ ಭಾವಲೋಕಕ್ಕೆ ಜಿಗಿದು ಒಳಹೊರಗು ಒಂದಾಗುವ; ಭಾವ ಅನುಭಾವ ಒಂದಾಗಲೆಳಸುವ ಬಗೆಯನ್ನು ಕಾವ್ಯವಾಗಿಸಿದ್ದಾರೆ.

ಭಾಽವಾಽ ಇದ್ಧಾಂಗ ದೇವಾ
ಹೇಳಿದ್ರು ಹಿರಿಯರು
ಅಲ್ಲೆ। ಸುತ್ತಾಡತಾವ ನಮ್ಮ ಖ್ಯಾಲಾ.
ಎಣಿಸಿದರ ಏನೋ ಕನಸ
ಕಂಡಾಂಗ ಅನಸ್ತಽದ
ಕಣ್ಣು। ಆಗ್ತಾವ ಹ್ಯಾಂಗೋ ತೇಲುಮೇಲಾ.

ಅಧ್ಯಾತ್ಮಿಕ ಭಾವ, ಕವನ ಬೆಳೆದಂತೆ ಕವಿಗಾದ ಒಟ್ಟು ಅನುಭಾವದ ಭಾವ ಪ್ರಪಂಚವಾಗಿ 'ಎಣಿಸಿದರ ಏನೋ ಕನಸ ಕಂಡಾಂಗ ಅನಸ್ತಽದ ಕಣ್ಣು । ಆಗ್ತಾವ

ಹ್ಯಾಂಗೋ ತೇಲು ಮೇಲಾ', ಎಂಬಲ್ಲಿ ದಟ್ಟವಾಗಿದೆ.

ಚಿಕ್ಕಂದಿನ ನೆನಪು, ನೆನಪಿನ ಮನದ ಒಳಕೋಣೆಯಲ್ಲಿ (ಓರಿಯೊಳಗ) ಅನುಭಾವವಾಗಿ ಎಣ್ಣೀದೀಪ ಮಿಣುಗಿದಂತೆ ಶಾಂತವಾಗಿ ಉರಿದು ಬೆಳಕಾಗಿದೆ. ಅಲ್ಲಿ ಬೆಳಕಿರುವುದರಿಂದ ಆ ಕಾಲ ಎಲ್ಲಿಯೂ ಹೋಗಿಲ್ಲ ಅದು ಇಲ್ಲೆ ಇದೆ ಎಂದು; ಪ್ರತ್ಯಕ್ಷ ನೋಡಿದ್ದ, ಕಂಡ ನೆನಪು ಅಧ್ಯಾತ್ಮಿಕ ನಿರೂಪಣೆಯಾಗಿ ಅನುಭಾವ ಕಾವ್ಯವಾಗಿ ಹರಿದಿದೆ. ಆ ಆನಂದಭಾವದಲ್ಲಿ ಕವಿ ಹಾಡಿದ್ದಾರೆ:

ನೆನಪಿನ ಓರಿಯೊಳಗ
ಮಿಣುಕ್ತಾವ ಎಣ್ಣೀದೀಪ
ಎಲ್ಲೆ! ಹೋದಾವೊ ಗೆಳೆಯಾ ಆ ಕಾಲಾ?
ಬಂತಣ್ಣ ಸಣ್ಣ ಸೋಮವಾರಾ
ಕಾಣಬೇಕಣ್ಣ ಸೋಮೇಶ್ವರಾ.

* * *

# ೪. ನಾಕುತಂತಿ

೧

ಆವು ಈವಿನ
ನಾವು ನೀವಿಗೆ
ಆನು ತಾನದ
ತನನನಾಽ.

ನಾನು ನೀನಿನ
ಈನಿನಾನಿಗೆ
ಬೇನೆ ಏನೋ?
ಜಾಣೆ ನಾಽ.

ಚಾರು ತಂತ್ರಿಯ
ಚರಣ ಚರಣದ
ಘನಘನಿತ ಚತು -
ರಸ್ವನಾ.

ಹತವೊ ಹಿತವೋ
ಆ ಅನಾಹತಾ
ಮಿತಿಮಿತಿಗೆ ಇತಿ
ನನನನಾ.

ಬೆನ್ನಿನಾನಿಕೆ
ಜನನ ಜಾನಿಕೆ

ಮನನವೇ ಸಹಿ -
ತಸ್ತನಾ.

೨

ಗೋವಿನ ಕೊಡುಗೆಯ
ಹಡಗದ ಹುಡುಗಿ
ಬೆಡಗಿಲೆ ಬಂದಳು
ನಡುನಡುಗಿ;

ಸಲಿಗೆಯ ಸುಲಿಗೆಯ
ಬಯಕೆಯ ಒಲುಮೆ
ಬಯಲಿನ ನೆಯ್ಗೆಯ
ಸಿರಿಯುಡುಗಿ;

ನಾಡಿಯ ನಡಿಗೆಯ
ನಲುವಿನ ನಾಲಿಗೆ
ನೆನೆದಿರೆ ಸೋಲುವ
ಸೊಲ್ಲಿನಲಿ;

ಮುಟ್ಟದ ಮಾಟದ
ಹುಟ್ಟದ ಹುಟ್ಟಿಗೆ
ಜೇನಿನ ಥಳಿಮಳಿ
ಸನಿಹ ಹನಿ;

ಬೆಚ್ಚಿದ ವೆಚ್ಚವು
ಬಸುರಿನ ಮೊಳಕೆ

ಬಚ್ಚಿದ್ದಾವುದೊ
ನಾ ತಿಳಿಯೆ.

ಭೂತದ ಭಾವ
ಉದ್ಭವ ಜಾವ
ಮೊಲೆ ಊಡಿಸುವಳು
ಪ್ರತಿಭೆ ನವ.

೩

'ಚಿತ್ತೀಮಳಿ ತತ್ತೀ ಹಾಕತಿತ್ತು
ಸ್ವಾತಿ ಮುತ್ತಿನೊಳಗ
ಸತ್ತಿsಯೊ ಮಗನs
ಅಂತ ಕೂಗಿದರು
ಸಾವೀ ಮಗಳು, ಭಾವಿ ಮಗಳು
ಕೂಡಿ'

* * *

"ಈ ಜಗ, ಅಪ್ಪಾ, ಅಮ್ಮನ ಮಗ
ಅಮ್ಮನೊಳಗ ಅಪ್ಪನ ಮೊಗ
ಅಪ್ಪನ ಕತ್ತಿಗೆ ಅಮ್ಮನ ನೊಗ
ನಾ ಅವರ ಕಂದ
ಶ್ರೀ ಗುರುದತ್ತ ಅಂದ."

೪

'ನಾನು' 'ನೀನು'
'ಆನು' 'ತಾನು'
ನಾಕೆ ನಾಕು ತಂತಿ.

ಸೊಲ್ಲಿಸಿದರು
ನಿಲ್ಲಿಸಿದರು
ಓಂ ಓಂ ದಂತಿ !
ಗಣನಾಯಕ
ಮೈ ಮಾಯಕ
ಸೈ ಸಾಯಕ ಮಾಡಿ
ಗುರಿಯ ತುಂಬಿ
ಕುರಿಯ ಕಣ್ಣು
ಧಾತು ಮಾತು
ಕೂಡಿ.

---

ಆಕರ: ದ.ರಾ ಬೇಂದ್ರೆ, **ನಾಕುತಂತಿ**, ಡಾ|| ವಾಮನ ಬೇಂದ್ರೆ (ಸಂ.), ಅಂಬಿಕಾತನಯದತ್ತ ವೇದಿಕೆ, ಶ್ರೀ ಮಾತಾ ಪ್ರಕಾಶನ, ಧಾರವಾಡ. ೧೯೯೭, ಪು. ೮-೧೧.

# ನಾಕುತಂತಿ

ಅಂಬಿಕಾತನಯದತ್ತರ 'ನಾಕುತಂತಿ' ಕಾವ್ಯ 'ಓಂ'ಕಾರದ ಅರ್ಥ ವ್ಯಾಪ್ತಿಯಂತೆ ಜೀವ-ಜಗತ್ತನ್ನು ಅರಿಯಲು ಪ್ರಯತ್ನಿಸಿದ ಒಂದು ಶ್ರುತಿ. 'ಓಂ'ಕಾರಕ್ಕೆ ಅ, ಉ, ಮ ಮೂಲಾಕ್ಷರಗಳಾಗಿ ಅವುಗಳಿಗೆ ಅನುಭಾವಿಗಳು ಅರ್ಥವನ್ನು ವಾಕ್, ಮನಸ್, ಪ್ರಾಣ; ದಮ, ದಯಾ, ದಾನ; ತಮಸ್, ರಜಸ್, ಸತ್ವ; ಸ್ಥೂಲ, ಸೂಕ್ಷ್ಮ, ಕಾರಣ; ಅನ್ನ, ಆಪ್, ತೇಜಸ್; ಪರಾ, ಪಶ್ಯನ್ತಿ, ಮಧ್ಯಮಾ; ಶಾಂತಿ (ಸಾಧನಾ), ಶಾಂತಿ (ಸ್ವರೂಪ), ಶಾಂತಿ (ಸಾಧ್ಯ) ಎಂದು ನೀಡಿದಂತೆ - ನಾಕುತಂತಿಯ `ನಾನು, ನೀನು, ಆನು, ತಾನು'ವಿಗೆ ಕನ್ನಡ ಕಾವ್ಯಾಭ್ಯಾಸಿಗಳು ಹಲವಾರು ಅರ್ಥ ಹಚ್ಚಿ ಸಂಶೋಧಿಸುತ್ತಿದ್ದಾರೆ. ಇದು 'ನಾಕುತಂತಿ'ಯ ಶ್ರುತಿಗುಣವನ್ನು, ಅರ್ಥ ನಿಗೂಢತೆಯನ್ನು, ಅಂಬಿಕಾತನಯುದತ್ತರ ಕಾವ್ಯೋದ್ಯೋಗದ ಸಿದ್ಧಿಯನ್ನು ದರ್ಶಿಸುತ್ತದೆ.

ನಾಕುತಂತಿ ಕಾವ್ಯದಲ್ಲಿ ನಾಲ್ಕು ಭಾಗಗಳಿವೆ. ಕಾವ್ಯದ 'ಭಾವಸಂದರ್ಭ ಸೂಚಿ'ಯಲ್ಲಿ ಬೇಂದ್ರೆಯವರು - 'ನಾಕುತಂತಿಯ ನಾಕು ಭಾಗಗಳು ಒಂದೇ ಭಾವದ ನಾಲ್ಕು ಮಗ್ಗಲು. ೧ರಲ್ಲಿ ಧ್ವನಿ ಪ್ರಬಲವಾದರೆ, ೨ರಲ್ಲಿ ಪ್ರತಿಮೆಗಳ ಸಾಲಿವೆ. ೩ನೆಯದರಲ್ಲಿ ಒಂದು ಸವಾಲು ಜವಾಬು ಇದೆ. ೪ನೆಯ ವಿಭಾಗ ಮೊದಲನೆಯದರ ಧ್ವನಿಗೆ ವಾಗರ್ಥ ದಾಂಪತ್ಯವನ್ನು ಕಿಂಚಿತ್ ಒಡದೇ ಹೇಳುತ್ತದೆ. ಅವು ನಾಕುತಂತಿ' ಎಂದಿದ್ದಾರೆ.

ಭಾಗ ೧ರಲ್ಲಿ ಐದು ನುಡಿಗಳಿವೆ. ಬೇಂದ್ರೆಯವರು ಮೊದಲ ನುಡಿಯಲ್ಲಿ ಕಾಮಧೇನುವಾದ ಈ ಜಗತ್ತು ಎಂಬ ಆವು (ಹಸು) ಈದದ್ದರಿಂದ ನಾವು ನೀವು ಆಗಿದ್ದೇವೆ. ಈ ನಾವು ನೀವುಗಳಿಗೆ ಆನುವಾದ ಪರಮಾತ್ಮ ಗೋವಿನ ಮತ್ತು ತಾನುವಾದ ಜೀವಾತ್ಮಗಳ ಶ್ರುತಿ ಹಿಮ್ಮೇಳದಂತಿದೆ ಎಂದಿದ್ದಾರೆ.

ಎರಡನೆಯ ನುಡಿಯಲ್ಲಿ 'ನಾನು' 'ನೀನು' ಎಂಬ ಈನಿನ ಅಂದರೆ ಈಯುವುದರ, ಕರುಹಾಕುವುದರ ಆನಿಗೆ (ಹಸುವಿಗೆ) ಬೇನೆ ಎಂದರೆ ಹೆರಿಗೆ

ಬೇನೆ ಏನೋ? 'ಜಾಣೆನಾ' ಎಂದಿದ್ದಾರೆ. ಈ ಜಾಣೆನಾ ಎಂಬುದು ನನಗೆ ಹೊಳೆಯುತ್ತಿಲ್ಲ ಎಂಬ ಅರ್ಥವನ್ನು ಹೊಮ್ಮಿಸಿ ಈ 'ನಾನು ನೀನು, ಆನು ತಾನು'ವಿಗೆ ಕಾರಣವನ್ನು ಹುಡುಕಲು ತೊಡಗುತ್ತದೆ. ಹಾಗೆ ತೊಡಗುತ್ತ ಈ ಸುಂದರವಾದ (ಚಾರುತಂತ್ರಿಯ) ಪಾದಪಾದವೂ (ಚರಣ ಚರಣವೂ) ಶ್ರೇಷ್ಠವಾದ ಘನೀಭೂತಗೊಂಡ ಅರ್ಥ ಸ್ಪಷ್ಟತೆಯನ್ನು ಹೊಂದಿದ ಮಹತ್ವವಾದ ನಾಲ್ಕು ಧ್ವನಿಯಾಗಿದೆ ಎಂದು ಬಣ್ಣಿಸಿದ್ದಾರೆ. ಹೀಗೆ ಹೊರಡುವ ಈ ಚತುರಸ್ವನವು ಅನಾಹತವಾದುದು ಎಂದರೆ ಅಡೆತಡೆಯಿಲ್ಲದೆ ಪ್ರಣವನಾದದಂತಹದು. ಈ ಅನಾಹತದ ನಡೆಯಲ್ಲಿ ಮಿತಿ ಎಂಬುದಿಲ್ಲದೆ ಅಣುಅಣುವಿನಲ್ಲಿಯೂ ನಾದಮಯವಾಗಿ ತನನನಾs ಎಂಬ ತಾನದಲ್ಲಿ ನಿರಂತರವಾಗಿದೆ. ಈ ಅನಾಹತನಾದಕ್ಕೆ 'ಬೆನ್ನಿನಾನಿಕೆ' ಇದೆ ಎಂದಿದ್ದಾರೆ. ಅದು ಭೂತದ ಅಥವಾ ಮೂಲವಸ್ತುವಾದ ಪರಬ್ರಹ್ಮವಾಗಿದ್ದು ಅದರ ಒರಗುವಿಕೆಯಿಂದ ಎಂದರೆ ಅದನ್ನು ಆಧರಿಸಿ ಈ ಹುಟ್ಟಿನ ಬಗೆಗೆ ಜಾನ ಎಂದರೆ ಧ್ಯಾನಮಾಡುವ ಮನಸ್ಸನ್ನು ಹೊಂದಿ, ಮನನ ಮಾಡುವುದೇ - ಅದರ ಬಗ್ಗೆ ಸದಾ ಚಿಂತಿಸುತ್ತಾ ಮೆಲುಕು ಹಾಕುವುದೇ ಹಿತದಿಂದ ಕೂಡಿದ್ದು. ಹೀಗೆ ಚಿಂತನಶೀಲವಾಗುತ್ತ ಆ ಪರವಸ್ತುವಿನೊಡನೆ (ಸ+ಹಿತ+ಅಸ್ತ) ಒಂದಾಗುವಿಕೆಯೇ ಅಸ್ತವಾಗುವ, ಮುಳುಗುವ ಬ್ರಹ್ಮದ ಶೋಧ ಎಂದಿದ್ದಾರೆ.

ಜನಪದರ ಅಧ್ಯಾತ್ಮ ಭಾವವನ್ನು ಅಭ್ಯಾಸ ಮಾಡಿದಾಗ ಅವರು 'ದೀಪವನ್ನು ಆರಿಸು' ಎಂದು ಹೇಳದೆ 'ದೀಪವನ್ನು ತುಂಬು' ಎಂದು; 'ದೀಪವನ್ನು ದೊಡ್ಡದು ಮಾಡು' ಎಂದು ಹೇಳುವುದನ್ನು ಕಾಣುತ್ತೇವೆ. ಈ ನುಡಿಗಟ್ಟುಗಳು ಅಪಾರ ಅಧ್ಯಾತ್ಮದ, ಅನುಭಾವದ ಅರ್ಥವನ್ನು ಹೊಂದಿವೆ. ಈ ಎರಡು ನುಡಿಗಟ್ಟುಗಳಿಗೆ 'ಈ ಖಂಡಜ್ಯೋತಿಯನ್ನು ಆ ದೊಡ್ಡ ಜ್ಯೋತಿಯೊಡನೆ ಸೇರಿಸು' ಎಂದೂ 'ಈ ಸಣ್ಣ ಜ್ಯೋತಿಯನ್ನು ಆ ದೊಡ್ಡ ಜ್ಯೋತಿಯೊಡನೆ (ಪರಂಜ್ಯೋತಿಯೊಡನೆ) ಒಂದುಗೂಡಿಸು' ಎಂದೂ ಅರ್ಥವಾಗುತ್ತದೆ. ಅದೇ ರೀತಿ ಬೇಂದ್ರೆಯವರ ಕೊನೆಯ ಚರಣದ ಆಶಯ, 'ಈ ಖಂಡಜೀವಾತ್ಮ ಆ

ಅಖಂಡ ಪರಮಾತ್ಮನೊಡನೆ ಮುಳುಗುವುದನ್ನು' ಸೂಚಿಸುವಂತಿದೆ.

ಅಧ್ಯಾತ್ಮ ಚಿಂತನೆಯಲ್ಲಿ ತೊಡಗಿದ ವ್ಯಕ್ತಿ ಆತ್ಮ ಚಿಂತನೆಯ ತನ್ನ ಒಳದನಿಗೆ ಕಿವಿಗೊಡುತ್ತ, ಕೇಳಿದ ಹೊರನುಡಿಯನ್ನು ಕುರಿತು ವಿಚಾರಮಾಡುತ್ತಾ ಅವುಗಳ ಸತ್ಯಶೋಧನೆಗೆ ತೊಡಗುತ್ತಾನೆ. ಅದು 'ಮನನವೇ ಸಹಿತಸ್ತನಾ' ಅಲ್ಲಿ ಮಾತು ಕೊನೆಗೊಂಡು ಆತ್ಮ ಮನೋಮಯವಾಗಿ ಜ್ಞಾನರಸಾಸ್ವಾದದತ್ತ ಸಾಗುತ್ತದೆ. ಮಾತಿನ ಹಂತವನ್ನು ದಾಟಿದ ಆತ್ಮದ ಚಿಂತನೆ ಮನೋಮಯವಾಗಿ ವಿಚಾರ, ಜ್ಞಾನ, ರಸಸಂಚಯದತ್ತ ಸಾಗುತ್ತದೆ. ಹಾಗೆ ಅನುಭವವಾದ ಆತ್ಮರೂಪಿ ಜ್ಞಾನರಸವು ವಿಶ್ವವ್ಯಾಪಕವಾದ ಬ್ರಹ್ಮವನ್ನು ಹುಡುಕುತ್ತಾ ಸಾಗುತ್ತದೆ. ಅದು ವಿಶ್ವದ ಒಳಿತನ್ನು ಚಿಂತಿಸುತ್ತ ವಿಶ್ವವ್ಯಾಪಿಯಾಗಿ ವಿಕಾಸಶೀಲವಾದಾಗ ಆ 'ಆನು'ವಿನಿಂದ ಇದೆಲ್ಲಾ ಸಾಧ್ಯವಾಗಿದೆ ಎಂಬ ಅರಿವಿಗೆ ಬರುತ್ತದೆ. ಇದು ಈ ಕಾವ್ಯ ಭಾಗದ ಧ್ವನಿ ಎಂದು ಹೇಳಬಹುದು.

* * * *

ಈ ಕಾವ್ಯದ ಎರಡನೆಯ ಭಾಗದಲ್ಲಿ ಜ್ಞಾನಕನ್ಯೆಯ ಪ್ರಸ್ತಾಪವಿದ್ದು, ಊರ್ಧ್ವಮುಖಿಯಾದ ಕುಂಡಲಿನೀಶಕ್ತಿ ಸುಷುಮ್ನಾನಾಡಿಯ ಮೂಲಕ ಬ್ರಹ್ಮರಂಧ್ರ (ಸಹಸ್ರಾರ ಚಕ್ರ)ವನ್ನು ಸೇರಿ ಅಲ್ಲಿ ಸ್ರವಿಸುವ ಅಮೃತವರ್ಷವನ್ನು ಪಾನಮಾಡುವ ಚಿತ್ರಣ ಇದ್ದಂತಿದೆ.

ಈ ಭಾಗದ ಮೊದಲ ನುಡಿಯಲ್ಲಿ ಬೇಂದ್ರೆಯವರು ಗೋವಿನ ಅಂದರೆ ಬ್ರಹ್ಮದ ಕೊಡುಗೆಯ ಎಂದಾಗ ಈಯುವ ವಸ್ತು ಹಡಗದ ಹುಡುಗಿ[೧] ಎಂದಿದ್ದಾರೆ. ಇಲ್ಲಿಯ 'ಹಡಗದ ಹುಡುಗಿ' ಸುಭದ್ರವಾದ, ಕಟ್ಟುಮಸ್ತಾದ ಜ್ಞಾನಕನ್ಯೆಯಾಗಿದ್ದಾಳೆ. ಅವಳು 'ಬೆಡಗಿಲೆ ಬಂದಳು ನಡುನಡುಗಿ' ಎಂಬುದು

---

೧. ಜನಪದದ ನುಡಿಗಟ್ಟಿನಲ್ಲಿ ಈ ಪದದ ಬಳಕೆ ಹೀಗಿದೆ: 'ಗಂಡ ಕೊಡವಿ ಹೋದರೆಂಬೆ ಅಂಗವ್ನೆ, ಹೆಂಡ್ತಿ ಹಡಗು ಇದ್ದಂಗವ್ನೆ'

ಸೊಂಟವನ್ನು ಬಳುಕಾಡಿಸುತ್ತಾ ಒಯ್ಯಾರದಿಂದ ಬಂದ ನಡಿಗೆಯ ರೀತಿಯನ್ನು ಬಣ್ಣಿಸುವುದಾಗಿದೆ. ಎರಡನೆಯ ನುಡಿಯಲ್ಲಿ ಅಂತಹ ದಿವ್ಯ ಕನ್ಯೆಯು ಸಲಿಗೆಯವಳಾಗಿ ಅಂದರೆ ಮುಕ್ತ ಪರವಾನಗಿ ಹೊಂದಿದ ಮುಕ್ತಭಾವದವಳಾಗಿ, ದುರ್ಗುಣಗಳನ್ನೆಲ್ಲಾ ಕೊಳ್ಳೆ ಹೊಡೆದು ಅರ್ಥಾತ್ ಶುದ್ಧೀಕರಿಸುವ `ಸುಲಿಗೆ'ಯವಳಾಗಿ, ಆಸೆ (ಬಯಕೆ), ಮತ್ತು ಪ್ರೀತಿ (ಒಲುಮೆ)ಯುಳ್ಳವಳಾಗಿ ಶೂನ್ಯ (ಬಯಲು) ನೇಯ್ಗೆಯ ಅಮೂಲ್ಯ ಉಡುಗೆಯನ್ನು (ಸಿರಿಯುಡುಗಿ) ಉಟ್ಟಿದ್ದಾಳೆ. ಅವು ಮುಷ್ಟಿಗೆ ಸಿಗದ ಭಾವರೂಪದ ಬೆಲೆಯುಳ್ಳ ಉಡುಗೆಯಾಗಿವೆ ಎಂದು ಬಣ್ಣಿಸಿದ್ದಾರೆ.

ಮೂರನೆಯ ನುಡಿಯ 'ನಾಡಿಯ ನಡಿಗೆಯ' ಎಂಬುವುದು ಉನ್ಮುಖ ಗೊಂಡ ಕುಂಡಲಿನೀ ಶಕ್ತಿ ಇಡಾಪಿಂಗಳಾ ನಾಡಿಗಳ ಮೂಲಕ ಸುಷುಮ್ನಾ ನಾಡಿಯನ್ನು ಸೇರಿ ಊರ್ಧ್ವಮುಖವಾಗುವುದರ ಸೂಚನೆ. ಅದು 'ನಲುವಿನ ನಾಲಗೆ'ಯಾಗಿದೆ. ಅಂದರೆ ಇಲ್ಲಿ ನಾಲಗೆ ಕುಂಡಲಿನೀ (ಸರ್ಪ) ಶಕ್ತಿಯನ್ನು ಪ್ರತಿಮಿಸುತ್ತದೆ. 'ನೆನೆದಿರೆ ಸೋಲುವ' ಎಂಬುದು -ಸಹಸ್ರಾರ ಸೇರಿದಾಗ ಸ್ರವಿಸುವ ಅಮೃತ ಪಾನದಿಂದ ತೊಯ್ದಿರಲು - ಅರ್ಥಾತ್ ಜೀವಾತ್ಮ ಮತ್ತು ಪರಮಾತ್ಮ ಒಂದಾದಾಗ ಮೌನ ಆವರಿಸುವ ಭಾವವನ್ನು ಪ್ರತಿಮಿಸುತ್ತದೆ. ಅದು ನಾಮಸ್ಮರಣೆಯ ಮಾತು ('ಸೊಲ್ಲು') ಸೋಲುವುದರ (ನಿಲ್ಲುವುದರ) ಸೂಚನೆಯಾಗಿದೆ.

ಪರಬ್ರಹ್ಮನಿಗೆ ಆದಿಯೂ ಇಲ್ಲ ಅಂತ್ಯವೂ ಇಲ್ಲ. ಅಂದರೆ ಹುಟ್ಟೂ ಇಲ್ಲ, ಸಾವೂ ಇಲ್ಲ. ಅದನ್ನು ಬೇಂದ್ರೆಯವರು ಪ್ರತಿಮಾಪೂರ್ವಕವಾಗಿ 'ಮುಟ್ಟದ ಮಾಟದ, ಹುಟ್ಟದ ಹುಟ್ಟಿಗೆ' ಎಂದಿದ್ದಾರೆ. ಅದು ಜೇನು ಹುಟ್ಟಿನಂತಹ ಸೃಷ್ಟಿ. ಅಂತಹದರ ಫಲವೆಂದರೆ 'ಜೇನಿನ ಥಳಿ ಮಳಿ'. ಸಿಹಿ ತಳಿಯ ಮಳೆ ಅರ್ಥಾತ್ ಅಮೃತವರ್ಷ. ಅದು ಹತ್ತಿರದಲ್ಲೇ 'ಸನಿಹ ಹನಿ'ಯಾಗಿ ಅಮೃತಧಾರೆಯ ಬಿಂದುಗಳನ್ನು ತೊಟ್ಟಿಕ್ಕುವ ಆನಂದ ವೃಷ್ಟಿ. ಅಂತಹ ಬ್ರಹ್ಮ ಸೃಷ್ಟಿಯಲ್ಲಿ ಬೆಸುಗೆಗೊಂಡ ಜೀವಾತ್ಮಗಳು ('ಬೆಚ್ಚದ ವೆಚ್ಚವು') ಮುಕ್ತಿಯ

ಅಥವಾ ಸಾಕ್ಷಾತ್ಕಾರಕ್ಕಾಗಿ ಅಂಕುರಗೊಂಡಿವೆ. ('ಬಸುರಿನ ಮೊಳಕೆ'). ಅಂಥ ಸಾಕ್ಷಾತ್ಕಾರದ ದಿವ್ಯ ಕ್ಷಣದಲ್ಲಿ ಬಚ್ಚಿಟ್ಟಿದ್ದೇನು, ಮುಚ್ಚಿಟ್ಟಿದ್ದೇನು ಎಂಬ ಯಾವ ಪರಿವೆಯೂ ಜೀವಾತ್ಮನಿಗೆ ಇರುವುದಿಲ್ಲ. ಅಂದರೆ ಅವನು ಆನಂದ ತುಂದಿಲನಾಗಿರುತ್ತಾನೆ, ಸಚ್ಚಿದಾನಂದ ಸ್ವರೂಪಿಯಾಗಿರುತ್ತಾನೆ ಎಂಬ ಭಾವ ನಾಲ್ಕು ಮತ್ತು ಐದನೆಯ ನುಡಿಯಲ್ಲಿದೆ.

'ಕರ್ಮ ಬ್ರಹ್ಮೋದ್ಭವಂ ವಿದ್ಧಿ ಬ್ರಹ್ಮಾsಕ್ಷರ ಸಮುದ್ಭವಂ
ತಸ್ಮಾತ್ಸರ್ವಗತಂ ಬ್ರಹ್ಮನಿತ್ಯಂ ಯಜ್ಞೇ ಪ್ರತಿಷ್ಠಿತಂ'
(ಗೀತೆ ೩, ೧೫)

ಆ ಪರಬ್ರಹ್ಮನು ನಿತ್ಯವಾದ ವೇದವೆಂಬ ಶಬ್ದ ಪ್ರಮಾಣದಿಂದಲೇ ತಿಳಿಯಲ್ಪಡುವವನು. ಹಾಗೆ ಯಥಾವತ್ತಾಗಿ ತಿಳಿಯಲ್ಪಟ್ಟರೆ ಅವನು ಅಧಿಕಾರಿಯಿಂದ ಸತ್ಕರ್ಮವನ್ನು ಮಾಡಿಸುವನು. ಹೀಗೆ ಪರಬ್ರಹ್ಮ ಜ್ಞಾನಕ್ಕೆ ಸಾಧಕವಾದ ವೇದವು ಭೂತ =ಅಧ್ಯಾಪಕ ಪ್ರಾಣಿಗಳಿಂದಲೇ ವ್ಯಕ್ತವಾಗುತ್ತದೆ. ಆ ಪ್ರಾಣಿಗಳಾದರೋ ಮೇಲೆ ಹೇಳಿದ ಪ್ರಕಾರ ಅನ್ನದಿಂದಲೇ ಹುಟ್ಟುತ್ತವೆಯಾದ ಕಾರಣ ಈ ಜಗತ್ತು ಚಕ್ರದಂತೆ ಸುತ್ತುತ್ತಿರುವುದು'[೨] ಎಂಬ ವಿವರಣೆ ಇದೆ.

ಹೀಗೆ 'ಭೂತದ ಭಾವ'ದಲ್ಲಿ ಅಂದರೆ ಪ್ರಾಣಿಯ ಅಥವಾ ಮರ್ತ್ಯದ ಭಾವದಲ್ಲಿ 'ಉದ್ಭವಜಾವ'ವಾಗಿ ಅಂದರೆ ಹೊಸದಾಗಿ ಆವಿರ್ಭಾವವಾದ ಜ್ಞಾನ (ಜಾವ) ಸಾಕ್ಷಾತ್ಕಾರದಲ್ಲಿ ಹೊಸ ಹುಟ್ಟನ್ನು ಪಡೆದ ಜೀವಿಗೆ ಜ್ಞಾನಕನ್ಯೆಯು ಮೊಲೆಯುಣಿಸುತ್ತಾಳೆ ('ಮೊಲೆ ಊಡಿಸುವಳು ಪ್ರತಿಭೆನವ') ಎಂಬುದು ಪ್ರತಿಮಾತ್ಮಕವಾಗಿ ಬಣ್ಣಿತವಾದುದಾಗಿದೆ.

* * * *

---

೨. ವಾಸುದೇವಾಚಾರ್ಯ, 'ಗೀತಾಭಾವ' ಡಿ. ವಾಸುದೇವಾಚಾರ್ಯ, ಶ್ರೀ ರಾಘವೇಂದ್ರ ಪ್ರಸಾದ ಮೈಸೂರು, ೧೯೫೨, ಪು. ೬೭.

ಕಾವ್ಯ ಸಂದರ್ಭದಲ್ಲಿ ಸೂಚಿಸಿರುವಂತೆ ಭಾಗ ಮೂರು ಸವಾಲು ಜವಾಬಿನ ರೀತಿಯಲ್ಲಿದೆ. ಇಲ್ಲಿ ಸ್ವಾಮಿ (ಸಾವೀ)ಯ ಮಗಳಾದ ಜ್ಞಾನಕನ್ಯೆ, ಭಾವಿ (ಮುಂದೆ ಆಗಲಿರುವ) ಮಗಳಾದ ಮೋಕ್ಷಕನ್ಯೆಯರ ದಿಗಿಲು ಹುಟ್ಟಿಸುವ ಎಚ್ಚರಿಕೆಯ ಮಾತಿಗೆ ಜೀವಿ (ಕವಿ) ಕೊಟ್ಟ ಉತ್ತರವಿದೆ.

ಸ್ವಾತಿಮಳೆಯ ಹನಿ ಚಿಪ್ಪನ್ನು ಸೇರಿ ಮುತ್ತಾಗುತ್ತದೆ ಎಂಬುದು ಪರಂಪರಾಗತವಾಗಿ ಬಂದಿರುವ ನಂಬಿಕೆ, ಕವಿಸಮಯ. ಆದರೆ ಇಲ್ಲಿ ಚಿತ್ತೀಮಳೆ (ಚಿತ್ತೆ)ಯ ಪ್ರಸ್ತಾಪವಿದೆ. ಆದ್ದರಿಂದ ಇಲ್ಲಿ ಚಿತ್ತೀ ಮಳೆ ಎಂಬುದನ್ನು ಚಿತ್ತಕ್ಕೆ ರೂಪಕವಾಗಿ ಬಳಸಿದ್ದಾರೆ. ವಾಲ್ಮೀಕಿಯ ಚಿತ್ತ ಹುತ್ತ ಕಟ್ಟದಿದ್ದರೆ ರಾಮಾಯಣದಂಥ ಮಹಾಕಾವ್ಯ ಮೂಡಿ ಬರುತ್ತಿರಲಿಲ್ಲ. ಆದ್ದರಿಂದ ಮರ್ತ್ಯ ಜೀವಿಯ ಚಿತ್ತ ಸಾಧನಾ ಸೋಪಾನಗಳನ್ನೇರುತ್ತಾ ತತ್ತಿ ಹಾಕಲು ಸಜ್ಜಾದುದನ್ನು ಮೊದಲನೆಯ ಸಾಲು ಸೂಚಿಸುತ್ತದೆ. ಅಂಥಾ ಸಿದ್ಧಸಮಯದಲ್ಲಿ ಸ್ವಾತಿಯ ಮಳೆಹನಿ ಚಿಪ್ಪನ್ನು ಸೇರಿ (ಹುತ್ತಗಟ್ಟದೆ ಚಿತ್ತ ಮಹತ್ತಾದುದನ್ನು ಸಾಧಿಸಲು ಸಾಧ್ಯವಿಲ್ಲ ಎಂಬ ಮಾತನ್ನು ಸ್ಮರಿಸಿ) ಮುತ್ತಾಗುತ್ತದೆ. ಆ ಮುತ್ತನ್ನು ಮತ್ತೆ ನೀರಿಗೆ ಹಾಕಿದರೆ -ಅದು ಪೂರ್ವಾಶ್ರಮದಲ್ಲಿ ನೀರೇ ಆಗಿದ್ದರೂ ನೀರಿನೊಂದಿಗೆ ನೀರಾಗದೆ ಪ್ರತ್ಯೇಕ ಅಸ್ತಿತ್ವವನ್ನುಳಿಸಿಕೊಳ್ಳುತ್ತದೆ. ಹಾಗೆಯೇ ಮಣ್ಣಿನಿಂದಲೇ ಮಾಡಿದ ಹಸಿ ಮಡಕೆ ಆವುಗೆಯಲ್ಲಿ ಬೆಂದ ಮೇಲೆ ಅದು ಮಣ್ಣಿನೊಂದಿಗೆ ಒಂದಾಗುವುದಿಲ್ಲ. ಅಂದರೆ ಲೋಕದಲ್ಲಿದ್ದರೂ ಪೂರ್ವದ ಲೌಕಿಕ ಸ್ಥಿತಿಯಿಂದ, ವಾಸನೆಗಳಿಂದ ದೂರವಿರುತ್ತದೆ ಎಂಬ ಭಾವ. ಅದೇ ರೀತಿ ಆತ್ಮಸಾಕ್ಷಾತ್ಕಾರವಾದ ಜೀವಿ ಲೋಕದಲ್ಲಿದ್ದರೂ ಲೌಕಿಕವಾಸನಾತ್ರಯಗಳಾದ ಹೆಣ್ಣು, ಹೊನ್ನು, ಮಣ್ಣುಗಳಿಂದ ದೂರವಿರುತ್ತಾನೆ, ಒಂದಾಗುವುದಿಲ್ಲ. ಅಂದರೆ ಪೂರ್ವಾಶ್ರಮದ ಸ್ಥಿತಿ ಸತ್ತಂತೆಯೇ ಲೆಕ್ಕ. ಆದ್ದರಿಂದಲೇ ಸಾವೀ ಮಗಳಾದ ಜ್ಞಾನ ಕನ್ಯೆ, ಭಾವೀ ಮಗಳಾದ ಮೋಕ್ಷ ಕನ್ಯೆ 'ಸತ್ತೀಽಯೊ ಮಗನಽ' ಎಂದು ಕೂಗಿ ಹೇಳುತ್ತಾರೆ. ಹೀಗೆ ಹೊಸ ರೂಪವನ್ನು ಪಡೆದ 'ಸತ್'

'ಸದ್ಭಾವೇ ಸಾಧುಭಾವೇಚ ಸದಿತ್ಯೇ ತತ್ಪ್ರಯುಜ್ಯತೇ
ಪ್ರಶಸ್ತೇ ಕರ್ಮಣಿ ತಥಾ ಸಚ್ಛಬ್ದಃ ಪಾರ್ಥಯುಜ್ಯತೇ'
(ಗೀತೆ ೧೭, ೨೬)

ಎಂಬ ಗೀತೆಯ ಸತ್. 'ಜನನ ಮತ್ತು ಸಾಧುತ್ವ ಎಂಬರ್ಥಗಳಲ್ಲಿ 'ಸತ್' ಎಂಬ ಪದವು ಪ್ರಯೋಗಿಸಲ್ಪಡುತ್ತದೆ. ಹಾಗೆಯೇ ಶುಭಕರ್ಮವನ್ನು ಹೇಳಲು 'ಸತ್' ಎಂಬ ಪದವು ಪ್ರಯೋಗಿಸಲ್ಪಡುವುದು.'[೩]

'ಮಮಯೋನಿರ್ಮಹಬ್ರಹ್ಮ ತಸ್ಮಿನ್ ಗರ್ಭಂ ದಧಾಮ್ಯಹಂ
ಸಂಭವಃ ಸರ್ವ ಭೂತಾನಾಂ ತತೋಭವತಿ ಭಾರತ

ಸರ್ವಯೋನಿಷು ಕಾಂತೇಯ ಮೂರ್ತಯಃ ಸಂಭವಂತಿಯಾಃ
ತಾ ಸಾಂ ಬ್ರಹ್ಮ ಮಹದ್ಯೋನಿರಹಂ ಬೀಜಪ್ರದಃ ತಿ ತಾ'
(ಗೀತೆ ೧೪; ೪, ೫)

ಅರ್ಜುನ! ಚಿತ್ಪ್ರಕೃತಿ = ರಮಾದೇವಿಯು ನನ್ನ ಭಾರ್ಯೆಯು. ಆ ದೇವಿಯಲ್ಲಿ ನಾನು ಗರ್ಭವನ್ನಿಡುವೆನು. ಎಂದರೆ ನನ್ನ ಉದರದಲ್ಲಿದ್ದ ಪ್ರಾಕೃತ ತತ್ವಾಂಶಯುತರಾದ ಚತುರ್ವಿಂಶತಿ ತತ್ವಾಭಿಮಾನಿ ದೇವತೆಗಳನ್ನೂ ರೇತಸ್ಸಿನ ರೂಪದಿಂದ ಹೊರಗೆಡವಿ ರಮಾದೇವಿಯ ಉದರದಲ್ಲಿ ಸ್ಥಾಪಿಸುವೆನೆಂದರ್ಥ. ಅಲ್ಲಿ ಸ್ಥಾಪಿಸುವುದರಿಂದ ಸಕಲ ಪ್ರಾಣಿಗಳಿಗೂ ದೇಹಯೋಗರೂಪವಾದ ಉತ್ಪತ್ತಿಯಾಗುತ್ತದೆ. ಪಾರ್ಥ ಆದಿಸೃಷ್ಟಿಯಲ್ಲಿ ಮಾತ್ರವೇ ನಾವು ಹೀಗೆ ಉತ್ಪಾದಕರೆಂದು ತಿಳಿಯಬೇಡ; ಯಾವಾಗಲೂ ನಾವಿಬ್ಬರೂ ಕಾರಣರಾಗಿರುವೆವು. ಹೇಗೆಂದರೆ -ಕೌಂತೇಯ! ದೇವ ಮನುಷ್ಯ ಪಶುಪಕ್ಷಾದಿ ಸಕಲ ಯೋನಿಗಳಲ್ಲಿಯೂ ಯಾವ ದೇಹಗಳು ಹುಟ್ಟುತ್ತವೆಯೋ

---

೩. ವಾಸುದೇವಾಚಾರ್ಯ, 'ಗೀತಾಭಾವ', ಡಿ. ವಾಸುದೇವಾಚಾರ್ಯ, ಶ್ರೀ ರಾಘವೇಂದ್ರ ಪ್ರಸಾದ, ಮೈಸೂರು, ೧೯೫೨, ಪು. ೨೫೨.

ಅವುಗಳಿಗೆಲ್ಲಾ ಮಹಾಲಕ್ಷ್ಮೀದೇವಿಯು ಕ್ಷೇತ್ರರೂಪ ಕಾರಣಳು = ತಾಯಿಯು, ನಾನು ಗರ್ಭದಾನ ಮಾಡುವ ತಂದೆಯು,[೪] ಎಂದು ಗೀತೆಯು ನುಡಿಯುತ್ತದೆ.

ಈ ಸೃಷ್ಟಿತತ್ವವನ್ನು ಕವಿ 'ಈ ಜಗ (ಬ್ರಹ್ಮಾಂಡ) ಅಪ್ಪ ಅಮ್ಮನ (ಶಿವಶಕ್ತಿಯರ-ಪ್ರಕೃತಿ ಪುರುಷರ) ಮಗ', ಪ್ರಕೃತಿಯಲ್ಲಿ ಪುರುಷನ ಮುಖವಿದೆ. ಪುರುಷನ ಕುತ್ತಿಗೆಯ ಮೇಲೆ ಪ್ರಕೃತಿಯ ಹತೋಟಿ(ನೊಗ) ಇದೆ ಎಂಬುದನ್ನು 'ಅಮ್ಮನೊಳಗ ಅಪ್ಪನ ಮೊಗ ಅಪ್ಪನ ಕತ್ತಿಗೆ ಅಮ್ಮನ ನೊಗ' ಎಂದಿದ್ದಾರೆ. ಇಹಲೋಕದ ಅಪ್ಪ ಅಮ್ಮಂದಿರು ಮರ್ತ್ಯಜೀವಿಗಳಾಗಿದ್ದರೂ ಮತ್ತೊಂದು ಅರ್ಥದಲ್ಲಿ ಶಿವಶಕ್ತಿಯರು ಎಂಬ ಭಾವವಿದೆ. ಶ್ರೀಗುರು ಎಂಬುದರಲ್ಲಿ ಶಿವ, ಅಂಬಿಕಾ ಎಂಬುದರಲ್ಲಿ ಶಕ್ತಿ ಇರುವುದರಿಂದಲೇ 'ಶ್ರೀಗುರುದತ್ತ ಅಂದ' ಎಂದು ಹೇಳಿದ್ದಾರೆ. ('ಅಂದ' ಎಂಬುದು 'ಅಂಬಿಕಾತನಯದತ್ತ' ಎಂಬ ಕಾವ್ಯನಾಮದ ಸಂಕ್ಷಿಪ್ತ ರೂಪ)

ಈ ಸವಾಲು ಜವಾಬಿನ ಹಿನ್ನೆಲೆಯಲ್ಲಿ ಮೊದಲಿನ ದ್ರವರೂಪದಿಂದ ಮುತ್ತಾಗುವ, ಮಾನವನಾಗುವ 'ಸತ್' ಆಗುವ ಚಿಂತನೆಯಿದೆ. ಆ 'ಸತ್' ಸಾಧನೆಗೆ 'ಓಂ' ಉಪಾಸನೆಯೇ ದಿವ್ಯ ಮಾರ್ಗವೆಂದು ಭಾರತೀಯ ಚಿಂತನೆ ಸಾರುತ್ತಿದೆ.

*    *    *    *

ಆಚಾರ್ಯ ವಿನೋಬ ಅವರು 'ಉಪನಿಷತ್ತುಗಳ ಅಧ್ಯಯನ' ಎಂಬ ಕೃತಿಯಲ್ಲಿ 'ಓಂ'ಕಾರವನ್ನು ಕುರಿತು ಈ ರೀತಿ ಹೇಳಿದ್ದಾರೆ:

ಓಂಕಾರದ ಮಹಿಮೆಯನ್ನು ವರ್ಣಿಸುವ ಇನ್ನೂ ಒಂದು ಆಖ್ಯಾಯಿಕೆ ಛಾಂದೋಗ್ಯೋಪನಿಷತ್ತಿನಲ್ಲಿದೆ.

---

೪. ವಾಸುದೇವಾಚಾರ್ಯ, 'ಗೀತಾಭಾವ', ಡಿ. ವಾಸುದೇವಾಚಾರ್ಯ, ಶ್ರೀ ರಾಘವೇಂದ್ರ ಪ್ರಸಾದ, ಮೈಸೂರು, ೧೯೫೨, ಪು. ೨೨೧

'ಬೆನ್ನಟ್ಟಿ ಬರುವ ಮೃತ್ಯುವಿಗೆ ಅಂಜಿ ದೇವತೆಗಳು ತ್ರಯೀವಿದ್ಯಾ ಎಂದರೆ ವೇದಗಳ ಆಚ್ಛಾದನೆಯನ್ನು ಶರಣು ಹೋದರು. ಹೀಗೆ ಸಂಸಾರ ತ್ರಸ್ತ ಮನುಷ್ಯನಿಗೆ ಅವಿತು ಕೂಡಲು ಸ್ಥಳ ವೇದ; ಆದುದರಿಂದ ಅದನ್ನು 'ಛಂದಸ್' (ಅವಿತು ಕೂಡುವ ಗುಪ್ತ ಸ್ಥಳ) ಎನ್ನುತ್ತಾರೆ. ಆದರೆ ನೀರಿನೊಳಗಿರುವ ಮೀನನ್ನೂ ಕೊಕ್ಕರೆ ಹುಡುಕಿ ತೆಗೆಯುವಂತೆ ಈ ಗುಪ್ತಸ್ಥಳದಲ್ಲೂ ಮೃತ್ಯು ದೇವತೆಗಳನ್ನು ಅರಸಿ ಹಿಡಿದಾಗ ಈ ಕೋಟೆಯನ್ನೂ ಬಿಟ್ಟು ಅವರು ಓಂಕಾರದ ದುರ್ಜಯ ದುರ್ಗ (ಉಧ್ರ್ವಾ:)ದ ಆಸರೆ ಪಡೆಯಬೇಕಾಯಿತು. ಈ ಕೋಟೆಯ ಮೇಲೇರಿ ಬರಲು ಸಾವಿಗೆ ಶಕ್ತಿಯಿಲ್ಲ. ಆದುದರಿಂದ ಅಲ್ಲಿಗೆ ಹೋದಮೇಲೆ ದೇವತೆಗಳು ಮೃತ್ಯುವಿನ ತ್ರಾಸದಿಂದ ಮುಕ್ತರಾಗಿ ನಿರ್ಭಯರಾದರು. ಈ ಓಂಕಾರದ ಉಪಾಸನೆ ಮಾಡುವವನು ಯಾರೇ ಆಗಲಿ ದೇವತೆಗಳಿಗೆ ಸಮಾನವಾಗಿ ಅಮೃತನೂ ಅಭಯನೂ ಆಗುತ್ತಾನೆ.'

ವೇದಗಳಲ್ಲೂ ಇಲ್ಲದ ನಿರ್ಭಯ ಓಂಕಾರದಲ್ಲಿದೆಯೆಂದು ಈ ಆಖ್ಯಾಯಿಕೆಯಲ್ಲಿ ಹೇಳಿ ಒಂದು ರೀತಿಯಲ್ಲಿ ಓಂಕಾರಕ್ಕೆ ಹೋಲಿಸಿ ವೇದಗಳನ್ನು ಅಧಿಕ್ಷೇಪ ಮಾಡಿದಂತೆ ಕಾಣುತ್ತದೆ"[೫]

ಈ ರೀತಿಯ 'ಓಂ'ಕಾರದ ಅಮೃತತ್ವವನ್ನು ತಿಳಿದ ಬೇಂದ್ರೆಯವರು ಈ ಕಾವ್ಯದಲ್ಲಿ 'ಆನೆಯ ವಿಭಾಗ ಮೊದಲನೆಯದರ ಧ್ವನಿಗೆ ವಾಗರ್ಥ ದಾಂಪತ್ಯವನ್ನು ಕಿಂಚಿತ್ ಒಡದೇ ಹೇಳುತ್ತದೆ' ಎಂದು ಭಾವ ಸಂದರ್ಭದಲ್ಲಿ ನುಡಿದಿರುವುದನ್ನು ಗಮನಿಸಿ ಅದನ್ನು ತಿಳಿಯಲು ಪ್ರಯತ್ನಿಸಬೇಕಾಗುತ್ತದೆ. ಬೇಂದ್ರೆಯವರು 'ಓಂ' ಮಂತ್ರಕ್ಕೆ ಸಮನಾದ ನಾಕುತಂತಿಯನ್ನು ಕನ್ನಡದಲ್ಲಿ ನೀಡಿರುವುದನ್ನು ತಿಳಿಯುವ ಮೊದಲು 'ಔ ಓಂ ದಂತಿ! ಗಣನಾಯಕ' ಎಂಬುದರ ವಾಗರ್ಥ ತಿಳಿಯಲು ಪ್ರಯತ್ನಿಸೋಣ. "ಪದ ಅಥವಾ ಪದಾರ್ಥ ಎರಡೂ ಸೃಷ್ಟಿಗಳಿಗೆ ಅತೀತನಾಗಿರುವ ಈಶ್ವರನನ್ನು ಪದಸೃಷ್ಟಿಯಲ್ಲಿ ತರುವ

೫. ವಿನೋಬ,'ಉಪನಿಷತ್ತುಗಳ ಅಧ್ಯಯನ', ಸರ್ವಸೇವಾಸಂಘ ಪ್ರಕಾಶನ, ಬೆಂಗಳೂರು-೩ ಪು. ೮.

ಮೊಟ್ಟಮೊದಲಿನ ಕೆಲಸವನ್ನು ಮಾಡಿದುದು ಓಂಕಾರ. ಆಮೇಲೆ ಅದನ್ನು ಪದಾರ್ಥ ಸೃಷ್ಟಿಯಲ್ಲಿ ತರುವ ಕೆಲಸವನ್ನು ಗಣಪತಿಯ ವಿಗ್ರಹ ಮಾಡಿರಬೇಕೆಂದು ಕೆಲವರ ತರ್ಕ. ಓಂಕಾರದಲ್ಲಿ 'ಆಕಾರ' ಸೂಚಕ (3) ಅಂಶದ ಸ್ಥಾನದಲ್ಲಿ ಮಸ್ತಕದ ಕಲ್ಪನೆ, ಮುಂದೆ ವಜ್ರಾಕೃತಿಯ(ೂ) ಸ್ಥಾನದಲ್ಲಿ ಸೊಂಡಿಲಿನ ಕಲ್ಪನೆ ಮಾಡಿ, ಅಥವಾ ಇಂಥವೇ ಬೇರೆ ಕಲ್ಪನೆ ಮಾಡಿ ಗಣಪತಿಯ ಅವತಾರವಾಗಿರಬೇಕು ಎಂದು ಕೆಲವರ ಮಾತು. ಇದರ ತರುವಾಯ ಸಮಸ್ತ ಕಾರ್ಯಗಳ ಆರಂಭದಲ್ಲಿ ಈ ನವೀನ ಅವತಾರದ ಸ್ಮರಣೆ ನಡೆಯುವುದು ಸ್ವಾಭಾವಿಕ, ಜ್ಞಾನೇಶ್ವರರು ಇಂಥ ಕಲ್ಪನೆಯನ್ನೇ ಜ್ಞಾನೇಶ್ವರಿಯಲ್ಲಿ ಕೊಟ್ಟಿದ್ದಾರೆ. ಓಂಕಾರವನ್ನು ಅ, ಉ, ಮ್ ಎಂದು ಮೂರು ವಿಭಾಗ ಮಾಡಿ 'ಅ' ಕಾರದ ಸ್ಥಳದಲ್ಲಿ ಪದ್ಮಾಸನ, 'ಉ'ಕಾರದ ಸ್ಥಳದಲ್ಲಿ ದೊಡ್ಡ ಹೊಟ್ಟೆ, 'ಮ್'ಕಾರದ ಸ್ಥಳದಲ್ಲಿ ವಕ್ರತುಂಡ, ಹೀಗಿದೆ ಅವರ ರಸಮಯ ಕಲ್ಪನೆ.

> ಅಕಾರ ಚರಣಯುಗಲ / ಉಕಾರ ಉದರ ವಿಶಾಲ
> ಮಕಾರ ಮಹಾಮಂಡಲ / ಮಸ್ತಕಾಕಾರೇ//[೬] (ಜ್ಞಾ ೧, ೧೯)

ಎಂದು ವಿನೋಬಾ ಅವರು ತಿಳಿಸಿದ್ದಾರೆ.

ಗೀತೆಯು ಓಂಕಾರವನ್ನು ಕುರಿತು:

> 'ತಸ್ಮಾದೋ ಮಿತ್ಯುದಾ ಹೃತ್ಯಯಜ್ಞದಾನ ತತಃ ಕ್ರಿಯಾಃ
> ಪ್ರವರ್ತಂತೆ ವಿಧಾನೋಕ್ತಾಃ ಸತತಂ ಬ್ರಹ್ಮವಾದಿನಾಂ'
>
> (ಗೀತೆ ೧೭, ೨೪)

'ಓಂ' ಎಂಬುದು ಭಗವಂತನ ಮಹಿಮೆಯನ್ನು ಬೋಧಿಸುವ ಉತ್ಕೃಷ್ಟ ನಾಮಧೇಯವಾದ ಕಾರಣ ಬ್ರಹ್ಮ ಜ್ಞಾನಿಗಳು ಕರ್ಮಗಳನ್ನು ಮಾಡುವಾಗಲೆಲ್ಲಾ 'ಓಂ' ಎಂದು ಹೇಳಿ ವಿದ್ಯುಕ್ತಗಳಾದ ಯಾಗ, ದಾನ ತಪಸ್ಸು ಸಂಧ್ಯಾವಂದನಾದಿ ಕ್ರಿಯೆ ಇವುಗಳನ್ನೆಲ್ಲಾ ನಡೆಯಿಸುವರು. ಅರ್ಥಾನುಸಂಧಾನ ಪೂರ್ವಕವಾಗಿ

---

೬. ಅದೇ ಪು. ೩.

ಆರಂಭದಲ್ಲಿ ಓಂಕಾರವನ್ನುಚ್ಛರಿಸಿ ಮಾಡುವ ವಿಹಿತ ಕರ್ಮವು ಸಾತ್ವಿಕ ವಾಗುವುದೆಂಬ ಭಾವ'[೭] ಎಂದಿದೆ.

ವೇದಗಳಲ್ಲಿರುವ 'ಬ್ರಹ್ಮಣಸ್-ಪತಿ' ಅಥವಾ 'ಗಣ-ಪತಿ' ಉಪ ನಿಷತ್ತುಗಳಲ್ಲಿ 'ಬೃಹಸ್-ಪತಿ'ಯಾಗಿದೆ. "ಬೃಹಸ್ಪತಿ" ಎಂದರೆ ಓಂಕಾರವನ್ನು ಸ್ತುತಿಸುತ್ತ 'ಸುನೀತಿರ್ಭಿನಯಾಸಿ ತ್ರಾಯಸೇಜನಂ' (ಋ ೨-೨೨-೪) ಸುನೀತಿಯ ದಾರಿ ತೋರಿಸಿ ಎಲ್ಲರನ್ನೂ ಕಾಪಾಡುತ್ತೀಯೆ ನೀನು- ಎನ್ನುತ್ತಾನೆ ವೈದಿಕ ಋಷಿ".[೮] ಓಂಕಾರೋಪಾಸನೆಯು ಸಾತ್ವಿಕ ಭಾವದ, ಸುನೀತಿಯ ಸತ್ಯದ ಮಾರ್ಗವಾಗಿದೆ.

ನಾಕುತಂತಿ ಕಾವ್ಯದ 'ಗಣನಾಯಕ' ಸಮೂಹವನ್ನು ಪ್ರತಿಬಿಂಬಿಸುವ ಸಮಷ್ಟಿಯ ಮೂಲವಸ್ತು ಪರಬ್ರಹ್ಮವಾಗಿ 'ಆನು'ವಾಗಿದ್ದಾನೆ. 'ಮೈಮಾಯಕ' ಮಾಯಾಪೂರ್ಣವಾದ ಅಶಾಶ್ವತವಾದ 'ನೀನು' ಎಂಬ ದೇಹಧಾರಿ. ಇವನು 'ತಾನು', ಎಂಬ ಜೀವಾತ್ಮನನ್ನು 'ಸೈಸಾಯಕಮಾಡಿ' ಎಂದರೆ ಬಾಣವನ್ನಾಗಿ ಮಾಡಿಕೊಂಡು ಪರಮಾರ್ಥಕ್ಕೆ ('ಆನು'ವಿಗೆ) ಗುರಿಯಿಟ್ಟು ಹೊಡೆಯಲು 'ಓಂ' ಕಾರವೆಂಬ ಧ್ಯಾನಯೋಗದ ಬಾಣವನ್ನು ಉಪಯೋಗಿಸಿದ್ದಾನೆ. ಹೀಗೆ ಕುರಿತಾದುದರ ಕಣ್ಣಿಗೆ ಗುರಿಯಿಟ್ಟಾಗ 'ಧಾತು'ವಾದ ಮೂಲವಸ್ತು ಪರಮಾತ್ಮ ಮತ್ತು 'ಮಾತು' ಆದ ಪ್ರತಿಬಿಂಬ ಜೀವಾತ್ಮ ಎರಡೂ ಕೂಡಿ ಒಂದಾದವು ಎಂಬ ಭಾವವಿದೆ.

ಮನುಷ್ಯನಿಗೆ ಇಂದ್ರಿಯಗೋಚರವಾದುದೇ ಸತ್ಯವಲ್ಲ. ತನ್ನ ತಿಳಿವಿನ ಲೋಕವೇ ಹಿರಿದಾದುದು ಎಂಬುದು ಅಹಂಕಾರವನ್ನು ಸೂಚಿಸುವ ಕೂಪ ಮಂಡೂಕದ ರೀತಿಯಾಗಿದೆ. ಆದ ಕಾರಣ ಆ ಮಿತಿಯನ್ನು ಅರಿತು ಅಖಂಡ ವಿಶ್ವವನ್ನು ತಿಳಿಯಲು ವೇದ ಉಪನಿಷತ್ ಕಾಲದ ಋಷಿಗಳು 'ಓಂ' ನನ್ನು ತಿಳಿಯಲು ಪ್ರಯತ್ನಿಸಿದಂತೆ ಕಾವ್ಯರ್ಷಿಯಾಗಿ ಕಾವ್ಯದ ಉತ್‌ಯೋಗ

೭. ಡಿ. ವಾಸುದೇವಾಚಾರ್ಯ, ಪೂರ್ವೋಕ್ತ ಪು. ೨೫೦

೮. ವಿನೋಬ, ಪೂರ್ವೋಕ್ತ, ಪು. ೬೪

(ಕಾವ್ಯೋದ್ಯೋಗ)ವನ್ನು ಸಾಧಿಸಿದ ಬೇಂದ್ರೆಯವರು 'ವಿಶ್ವದೊಳನುಡಿಯಾಗಿ ಕನ್ನಡಿಸುತಿಹನಿಲ್ಲಿ ಅಂಬಿಕಾತನಯನಿವನು' ಎಂಬ ಅರಿವಿದ್ದು 'ಓಂ'ಗೆ ಸರಿಸಮನಾದ ನಾಕುತಂತಿಯನ್ನು ಕನ್ನಡದಲ್ಲಿ ನೀಡಿದ್ದಾರೆ. ಅದು 'ನಾನು, ನೀನು, ಆನು, ತಾನು'. ಈ ಚತುರಸ್ವನದಲ್ಲಿ ಅಖಂಡ ವಿಶ್ವವನ್ನು ತಿಳಿಯಲು ಸಾಧ್ಯವಾಗಿಸಿದ್ದಾರೆ. ವರಕವಿ ಬೇಂದ್ರೆಯವರು 'ಶ್ರೀ ಶಂಕರ ಮಹಾಮನನ' ಕೃತಿಯನ್ನು ಓದುತ್ತಾ ಅದರ ಪುಟ ೯ರಲ್ಲಿ ತಮ್ಮ ಸ್ವಹಸ್ತದಿಂದ **'ನಾನು, ನೀನು, ಆನು, ತಾನು'**ವಿಗೆ ಅನುಕ್ರಮವಾಗಿ **'ಅಹಂನ ವಿಶೇಷ, ದೇಹ, ಬ್ರಹ್ಮ, ಆತ್ಮ'** ಎಂದು ಬರೆದಿದ್ದಾರೆ*. ಬೇಂದ್ರೆಯವರ ವಿಚಾರಸರಣಿ ಶಬ್ದದಲ್ಲಿ ಅಭಿವ್ಯಕ್ತವಾಗಿರುವ ರೀತಿಗೆ ಇದೊಂದು ಅನನ್ಯ ಉದಾಹರಣೆಯಾಗಿದೆ.

ಈ 'ನೀನು' ಎಂಬ 'ಶರೀರ'ದಲ್ಲಿರುವ 'ನಾನು' ಎಂಬ 'ಅಹಂಕಾರ' ಸಂಕುಚಿತ ಸ್ವಾರ್ಥವನ್ನು ಹೊಂದಿದೆ. ಅದನ್ನು ನುಡಿಸುತ್ತ ಅದರ ಮಿತಿಯನ್ನು ಅರಿತು ಅದನ್ನು ತಹಬದಿಗೆ ತಂದುಕೊಂಡಾಗ ಮನಸ್ಸಿನ ಆಲೋಚನೆ ವಿಶಾಲವಾಗಿ ಕುಟುಂಬ, ದೇಶ, ಕಾಲದ ಮಿತಿಯನ್ನು ಮೀರಿ ವಿಶ್ವವ್ಯಾಪಿಯಾಗಿ ವಿಶ್ವಸಂಗ್ರಹಾತ್ಮಕವಾಗುತ್ತದೆ. ಇಂದ್ರಿಯ ಸೇವಕನಾಗಿದ್ದ 'ನೀನು' ಎಂಬ ಶರೀರ ಹೊಂದಿದ ವ್ಯಕ್ತಿ ಬುದ್ಧಿಯ ಉಪಾಸಕನಾಗಿ 'ತಾನು' ಎಂಬ 'ಆತ್ಮ'ದ ಆಧಾರದಿಂದ 'ಆನು' ಎಂಬ ಪರಮಾತ್ಮನ ಶೋಧಕ್ಕೆ ತೊಡಗುತ್ತಾನೆ. ಆಗ ಅದು ಲೋಕ ಸಂಗ್ರಹಾತ್ಮಕವಾಗಿ 'ಆನು'ವಿನ ನಿಜರೂಪದ ಅನುಭವವಾಗಿ ಆ ಅನುಭಾವದ ನೆಲೆಯಲ್ಲಿ ಶಾಂತಿಯನ್ನು ಕಾಣುತ್ತಾ ಆನಂದಮಯವಾಗುತ್ತಾನೆ. ಆ ಆನಂದವೇ 'ಆನು'. ವ್ಯಕ್ತಿ ಸತ್ಯಶೋಧಕನಾಗಿ, ನಿರ್ಭಯದ ಆಯುಧವಿಡಿದು ಹೊರಟು ಸಮಷ್ಟಿಯ ಶಾಂತಿ ಸುಖವನ್ನು ವ್ಯಷ್ಟಿಯ ನೆಲೆಯಿಂದ ಸಾಧಿಸುತ್ತಾನೆ.

---

* ನಾನು ವಾಮನ ಬೇಂದ್ರೆಯವರ ಮಾರ್ಗದರ್ಶನದಲ್ಲಿ ಬೇಂದ್ರೆಯವರ ಗ್ರಂಥ ಭಂಡಾರದಲ್ಲಿ ಕನ್ನಡ ಪುಸ್ತಕಗಳನ್ನು ಗ್ರಂಥಕರ್ತರನ್ನು ಆಧರಿಸಿ ವಿಂಗಡಣೆ ಮಾಡುವಾಗ; ಸಂಗ್ರಹಾಲಯದ ಕೃತಿಗಳನ್ನು ಪಿ.ಎಚ್.ಡಿ.ಗಾಗಿ ಅಧ್ಯಯನ ಮಾಡುವಾಗ ಶೋಧಿತವಾದುದು ಇದು.

ಬೇಕಲ್ಲವೆ?–ಎಂದರೆ ನಿದ್ರೆಯಲ್ಲಿ ತನಗಿಂತ ಎರಡನೆಯದಾದ ವಸ್ತು ವಿಲ್ಲದ್ದರಿಂದ ವಿಶೇಷಜ್ಞಾನವಿಲ್ಲವೇ ಹೊರತು ತಾನು ಇಲ್ಲದ್ದ ರಿಂದಲ್ಲ. (ಬೃ. ೪-೩-೨೩) 'ನಾನು' ಎಂಬ ಜ್ಞಾನವೂ ಇಲ್ಲದ್ದರಿಂದ ಆಗ ಆತ್ಮನೂ ಇಲ್ಲವೆಂಬುದೇ ಸರಿಯೆಂದು ತೋರುವದಲ್ಲ! –ಎಂಧರೆ 'ಸುಷುಪ್ತಿಯಲ್ಲಿ ಏನೂ ತೋರುವದಿಲ್ಲ' ಎಂಬುದೂ ಒಂದು ಅನುಭವವೇ. ಆ ಅನುಭವವೇ ಚೈತನ್ಯರೂಪವಾದ ಆತ್ಮನು. 'ನಾನು', 'ಇದು'– ಎಂಬ ರೀತಿಯ ತಿಳಿವಳಿಕೆಗೆ ವಿಶೇಷ ಜ್ಞಾನವೆಂದು ಹೆಸರು. ಅದು ಆತ್ಮನಿಗಿಂತ ಬೇರೆಯಾದ ವಸ್ತುಗಳು ಇರುವಾಗ ಮಟ್ಟಿಗೆ ತೋರುವದು. ಆದ್ದರಿಂದ 'ನಿದ್ರೆಯಲ್ಲಿ ನನಗೆ ಏನೂ ತಿಳಿಯಲಿಲ್ಲ' ಎಂಬ ಅನುಭವದಿಂದ ಆಗ ಎರಡನೆಯ ವಸ್ತುವೇ ಇರಲಿಲ್ಲವೆಂದು ಸಿದ್ಧವಾಗುವದು. ಹಾಗಿಲ್ಲದೆ ನಿದ್ರೆಯಲ್ಲಿ ತಾನೇ ಇರಲಿಲ್ಲವೆಂದೇ ಪಟ್ಟುಹಿಡಿಯುವದಾದರೆ ನಿದ್ರೆಯೆಂಬ ಅವಸ್ಥೆಯೇ ಇಲ್ಲವೆಂದು ಹೇಳಿದಂತಾಗುವದು ; ಇದು ಲೋಕಾನುಭವಕ್ಕೆ ವಿರುದ್ಧವಾಗುವದು. **ಆದ್ದರಿಂದ ಆತ್ಮನು ದೇಹ, ಇಂದ್ರಿಯಗಳು, ಮನಸ್ಸು, ಬುದ್ಧಿ, ಅಹಂಕಾರ– ಇವುಗಳೆಲ್ಲಕ್ಕಿಂತಲೂ ಬೇರೆಯಾದ** ಚೈತನ್ಯಸ್ವರೂಪವುಳ್ಳವನೆಂದು ಗಾಢ ನಿದ್ರೆಯ ಅನುಭವದಿಂದ ನಿರ್ಣಯಿಸಬೇಕಾಗುತ್ತದೆ. (ಉಪ.ಗ. ೨, ಭಾ. ೫೬)

೧೫. ಆತ್ಮನು ಕರ್ತೃಭೋಕ್ತೃರೂಪವಾಗಿರುವನೊ, ಇಲ್ಲವೊ? ಕರ್ಮಗಳನ್ನು ಮಾಡಿ ಫಲವನ್ನು ಪಡೆದು ಅನುಭವಿಸುವದೆಂಬುದು ನಮ್ಮಗಳ ಆತ್ಮನ ಸ್ವಭಾವವೊ ಅಲ್ಲವೊ? –ಎಂದರೆ ಇದಕ್ಕೆ ಎರಡು ಉತ್ತರವಿರುವದು: ಒಂದು ದೃಷ್ಟಿಯಿಂದ ಕರ್ತೃತ್ವವೂ ಭೋಕ್ತೃತ್ವವೂ ಆತ್ಮನಿಗೆ ಉಂಟು, ಮತ್ತೊಂದು

'ಶ್ರೀ ಶಂಕರ ಮಹಾಮನನ' ಎಂಬ ಪುಸ್ತಕದಲ್ಲಿ ಬೇಂದ್ರೆಯವರು ನೀಡಿರುವ ವಿವರಣೆ.

ಈ ರೀತಿ ಮರ್ತ್ಯಜೀವಿ ಎಂಬ ವೀಣೆಗೆ ನಾಕೇ ನಾಕು ತಂತಿ. ಅದನ್ನು 'ಸೊಲ್ಲಿಸಿದರು' ಎಂದರೆ ನುಡಿಸಿದರು; 'ನಿಲ್ಲಿಸಿದರು' ಅಂದರೆ ನುಡಿಸುವುದನ್ನು ಬಿಟ್ಟರು; ಆ ನಾಕುತಂತಿ 'ಌ ಓಂ ದಂತಿ'ಯನ್ನು ನೆನಪಿಸುವ 'ಓಂ'ಕಾರವಾಗಿದೆ. ಪ್ರಣವನಾದವಾಗಿದೆ. ಅದು ಕನ್ನಡದ ನಾಕು ತಂತಿ. ವಿಶ್ವದ ನೆಲೆಗೆ ಕೊಂಡೊಯ್ಯುವ ಶಾಂತಿ ಸಾಧಕ ಮಂತ್ರ. ಅದು ಅಂಬಿಕಾತನಯನ ತಪಸ್ಸಿನ ಫಲ.

'ನಾನು' 'ನೀನು'
'ಆನು' 'ತಾನು'
ನಾಕೆ ನಾಕು ತಂತಿ.
ಸೊಲ್ಲಿಸಿದರು ನಿಲ್ಲಿಸಿದರು ಌ ಓಂ ದಂತಿ!

* * *

## ೫. ಶ್ರೀ ವಿವೇಕಾನಂದ ಶಿಖರ-ಪ್ರಗಾಥಾ

೧

ಗೌರಿಶಂಕರ ಇತ್ತ । ಇತ್ತ ಕಾಂಚನಗಂಗೆ । ಅತ್ತತ್ತ ಪರಮಹಂಸರ ಸವಾರಿ
ಆತ್ಮಕ್ರೀಡಃ, ಆತ್ಮರತಿಃ, ಸಚ್ಚಿದಾತ್ಮವಿಹಾರಿ, ಹೆಜ್ಜೆಮೂಡದ ದಾರಿ
ಅದೋ । ವಿವೇಕಾನಂದ ನೀಡಿದನು ದಾರಿ, ಉದಾರಿ । ಶಿಖರದಿಂ ಶಿಖರಕ್ಕೆ ಹಾರಿ
ಈ ಹಾದಿ, ಅನಾದಿ, ಹೃದಯ ಸಂವಾದಿ
ಸುನಾದಿ, ಸರಿಗಮ ಸನಾದಿ, ವಿಜ್ಞಾನ-ಬೋಧಿ
ಸಂಜ್ಞಾನ ಸಂಬೋಧಿ;

"ಸಹವೀರ್ಯಂ ಕರವಾವಹೈ
ತೇಜಸ್ವಿನಾವಧೀತಮಸ್ತು, ಮಾವಿದ್ವಿಷಾವಹೈ"
"ಸಮಾನೀ ವ ಆಕೂತಿಃ । ಸಮಾನಾ ಹೃದಯಾನಿ ವಃ"
ನಿಃ ಪಕ್ಷ ವೇದಾಂತ, ಪೂರ್ಣ ಬೋಧಾಂತ; ಇದು ಸ್ವಯಂ ಸಿದ್ಧಾಂತ
ಪರಮಾಮೃತಾಂಬೋಧಿ.

೨

"ನಂದಿ ನಾನು । ಆ - ।ನಂದಿ ನಾನು । ಆ ಋಷಭಧ್ವಜ, ಎತ್ತೂಽಽ
ಬಂದೆ ನಾ ಶಿವಶಕ್ತಿಯ ಹೊತ್ತು
ಎತ್ತೋ? ಎತ್ತು ಅಲ್ಲ ಇದು ಹಂಡಹೋರಿ । ತಾ । ಮುಗದಾಣವ ಮೀರಿ
ನಂದಿ ಕೋಲದಲಿ, ಮಂದಿ ಮಂದಿ ತುರುಮಂದಿ ಸಂಧಿ, ಸಂಧೀ
ಮುಕ್ತರ ಸಂಬಂಧೀ.
ಆ - ವಿವೇಕ ಲಹರಿ ಅದು, ಪ್ರತಿ ಪ್ರಹರಿ, ಪ್ರಹರೀ

ಗಳಿಗೆ ಗಳಿಗೆ ಘುಟ ಘುಟ ಪ್ರಸ್ತರೀ, ಇದು ಮಲಾಪಹಾರೀ
ನಂದ ಕಂದ ಲಹರೀ। ಸ್ಕಂದ ಶಿಲಾಲಹರೀ। ಸ್ವಾsನಂದ ಲಹರಿ।
ನಿಃಸ್ವಾನಂದ ಲಹರಿ।

೩

ಒಗಟು ರೆಂಡಿನಲಿ ಮೂಡುತಿದ್ದೆ, ನಾ ಮುಳುಗುತಿದ್ದೆ, ನಿದ್ದೆ
ನಿದ್ದೆ-ಸ್ವಪ್ನ ಹಾರಿ
ನಲಿವು ನನ್ನಿಯಲಿ, ಒಲಿವ ಸನ್ನಿಯಲಿ ರಂಗ ರಂಗ ಹೂಡಿ
ಶ್ರೀsರಂಗದಲಿ, ಪಾಂಡುರಂಗದಲಿ, ನಾಲ್ಕರ ನುಡಿ ಹಾಡಿ
ಮೌನ ಮುದ್ರೆ ಒತ್ತಿ, ಶ್ರೀಚರಣಕ್ಕೆತ್ತಿ
ಋಭುವು ಇದ್ದೆ. ಆ ಭೂಽ ಎಂದು ನಾ ಪ್ರಭುವೂ ಆಗಿದ್ದೆ
ವಿಭುವು ಆಗಿ, ಸಂಭವಿಸಲಿದ್ದೆ. ಹೋ। ಅತಿ ಭೂಮಿಗೆ ಪ್ರತಿ
ನಾ ಉದ್ಭವಿಸಿದ್ದೆ.
ನರ-ನಾರಾಯಣರಾ ವಿದ್ಯೆ ಶೃಂಗೇರಿಯ ಅಂಗಾಂಗದಲಿss
ಶ್ರೀಶೈಲವನೂ ಮುಟ್ಟಿದ್ದೆ, ಕಲ್ಯಾಣವನೂ ಕಟ್ಟಿದ್ದೆ
ತಿರುಮಲೆಯನ್ನೂ ಮುಟ್ಟಿದ್ದೆ, ಉಡುಪಿಯನ್ನು ನಾ ಕಟ್ಟಿದ್ದೆ
ಹೃದಯದಳಂದೆಯ ಮುಟ್ಟಿದ್ದೆ, ಪಂಢರಾಪುರಾ ಕಟ್ಟಿದ್ದೆ
ಭರತಖಂಡದಾ ಉತ್ತರವನ್ನು, ಧ್ರುವಮಂಡಲದಾ ಎತ್ತರವನ್ನು
ಗೊಮ್ಮಟನಾಗಿ ತಟ್ಟಿದ್ದೆ
ಕನ್ಯಾsಕುಮಾರಿಯಲಿ ಮುಳುಗಿದ್ದೆ -। ಕಾಶ್ಮೀರದ ಒಳಗಿದ್ದೆ ! ಶ್ರೀ-
ಗುರುವಿನ ಬಳಿಗಿದ್ದೆ
ನಂದಿ ನಾನು! ಆ-। ನಂದಿ ನಾನು, ಆ ಋಷಭಧ್ವಜ ಎತ್ತೂ
ಬಂದೆ ನಾ ಶಿವಶಕ್ತಿಯ ಹೊತ್ತು.

ಳ

ಸ್ವಯಂಭೂ, ಸ್ವಯಂಭೂ, ಸ್ವಯಂಭೂ ಹೇ
ಪರಿಭಾವಿಸೆ ಕವಿ - ಮನೀಷಿಯೋ
ಈಶಾವಾಸಕೆ ಶೇಷನು ಆಗಿ । ಬಲರಾಮನೊಳೇ ಅಭಯವು ಮಾಗಿ
ಫಡಫಡಿಸುತ್ತ ಅಗ್ನಿಜ್ವಾಲೆ । ಶ್ರೀಕಂಠದ ಶಂಖಿಕ್ಕನುಕೂಲೆ
ಓಂ, ಓಂ; ಅಂ, ಅಃ; ಸೋಹಂ ಹಂಸಃ
ಬ್ರಹ್ಮರಂಧ್ರದಲಿ, ಸಹಸ್ರಾರದಲಿ, ಮಾತೆಯ ಘೋಷದ ಸಂತೋಷ
ಆs ಆs ಆs ನಂದಿ । ಊರ್ಧ್ವಗತಿಯ ಹೊಂದಿ
ಈಯೆ ಕಾಮಧೇನು । ನಂದಿಯಾದೆ ನಾನು
ಚಿಂತಾಮಣಿಗೋ ಹಣೆ ತಿಕ್ಕಿದ್ದೆ
ಕಲ್ಪವೃಕ್ಷಗಳ  ಬನ ಹೊಕ್ಕಿದ್ದೆ
ಅಪ್ಸರೆಯರ ವೃಂದದಿ ಸಿಕ್ಕಿದ್ದೆ
'ಶ್ರೀಗುರುವೇ ಶರಣು ಎಂದೆ' । ಆ ಹಿಮಾಲಯಕೆ ಬಂದೆ
ಉಮಾ-ಯಕ್ಷಿಯೂ ಸಾಕ್ಷಿಯಾಗಿ । ಆ । ಶ್ರಮದೊಳಗಿಂಗಿದ್ದೆ
ನದಿಯ ಹಾಗೆ ತಾ ನಿನದಿಸುವುದು ಆ ದಿವ್ಯ ಧ್ವನಿ ಕೇಳಿ । ಏಳಿ, ಏಳಿ, ಏಳಿ
ಎತ್ತರಕೇಳೀ, ಉತ್ತರಕೇಳೀ ಆ ಬಿತ್ತರ ಕೇಳಿ.

ೞ

ಅಹಂ ಎಂದು ನಾ ಉರಿಯುತ್ತಿದ್ದೆ । ನಂದಿ ನಾನು ಆಗರಿಯುತ್ತಿದ್ದೆ
ಆನಂದೀ । ಆನಂದೀ
ಶಿವನಿಲ್ಲದಾ ಆ ಶಕ್ತಿ ಯಾವುದೋ? ಭಗವನ್ಮಹಿಮೆಯ ಭಕ್ತಿ ಈವುದೋ?
ದೇಹದಲ್ಲಿ ನಿಃಸಂದೇಹಿಯು ನಾ । ದೇಹದಲಿ ದೀಪದ ಸುಸ್ನೇಹಿಯು ನಾ
ಬತ್ತಿಯಾದೆ! ಈ - ಬತ್ತಿಯಾದೆ । ಹೂ - । ಬತ್ತಿಯಾದೆ ನಾ
ನಂದಾದೀಪದ ಕುಡಿs । ನಿರ್ವಾಣದ ಕೈಪಿಡಿs

ಉರಿ ಉರಿ, ಉರಿ, ದಿಕ್ಕರೀಽಽ
ಶೇಷ ಫಣಾ ಮಂಡಲ ಸಂಚಾರಿ । ಕೂರ್ಮದ ಬೆನ್ನಲಿ ಕುಣಿಯುವ ನಾರಿ
ಯಾರೀಕೆ? ಯಾರೀಕೆ? ಹಂಸನ ಹಾರಿಕೆ ! ಶುಕನ ಸಾರಿಕೆ
ಬಾಂಬೊಳೆಯೊಳು ಹೊಳೆಯುವ ನೀಹಾರಿಕೆ
ಭಕ್ತಿ - ಹೃದಯ ಕುವಲಯ ಸುವಿಹಾರೀ । ರಾಸ ಲೀಲೆಯಲಿ -
ಮೆಟ್ಟುವ ಚಾರಿ

ಬಾರಿ ಬಾರಿ, ಅವತಾರಿಯಾಗಿ । ಉದ್ಧಾರಕೆ ಇದು ದಾರಿ
ಸೋಪಾನ ಕಟ್ಟಿ, ಹೊಕ್ಕರಣೆ ಹೊಕ್ಕು, ಹೃತ್ ಪುಂಡರೀಕ ಸೇರಿ.
ಅರಳಿಸುವ ಪ್ರಭಾತದ 'ಫೇರಿ'
ಭೃಂಗ ಭೃಂಗಗಳ ಗುಂಗಿನಲ್ಲಿ, ತಂಗಿರುವೀ ಪ್ರವಿವೇಕೀ
ಶ್ರೀರಾಮಕೃಷ್ಣ ಹರಿ, ರಾಮಕೃಷ್ಣ ಹರಿ; ಬಿಲಹರಿ ಸಾವೇರೀ
ಕಾವೇಽರಿ ಅಸಾವೇರೀ
ನಿರ್ವಿತರ್ಕ ಮೀರಿ, ನಿರ್ವಿಚಾರ ಸೂರಿ, ಅಸ್ಮಿತಾನುಸಾರೀ
(ಆನಂದ ಲಹರಿ)
ಕಂಠಸೂತ್ರಕಾರಿ, ಓಲೆ ತಂದ ಭಾರಿ
ಶಾರದಾಮಣೀ-ಕಂಽ । ಕಣಣ ಝಣತ್ಕಾರಿ । ಕುಂಽಕುಮಿತ
ಪತಾಕಾಚಾಽರೀ
ಶ್ರೀರಾಮಕೃಷ್ಣ ಹರಿ, ರಾಮಕೃಷ್ಣ ಹರಿ
ಜಂಽ । ಗಮಿತ ನಿರಾಧಾರೀ

೬

ಮೊನ್ನೆ ಮೊನ್ನೆ ಇದ್ದ, ಪಂಚಾಗ್ನಿ ಸಿದ್ಧ, ಸಭ್ಯತೆಗೇ ಇವ ಬದ್ಧ
'ಓಂಽ ಭವತಿ' ಎಂದು ಸಾರಿ

ಮಾs । ನವತೆಯ ಮೈಸೇರಿ । ಪರಾಕು । ದೈವದ ಪಡಿಹಾರೀ
ಓಂ ತತ್ ಗತ್ತಿನಲಿ ನಡೆದನು ಸಂನ್ಯಾಸಿ
ನವಯುಗದ ಹಡದಿ ಹಾಸೀ
ಸ್ವಚ್ಛಂದ ಉಪನ್ಯಾಸೀ
"ಸಂಗಚ್ಛಧ್ವಂ ಸಂವದಧ್ವಂ ಸಂವೋಮನಾಂಸಿ ಜಾನತಾಂ
ದೇವಾಭಾಗಂ ಯಥಾ ಪೂರ್ವೇ ಸಂಜಾನಾನಾ ಉಪಾಸತೇ"
ಇದು ವೃಷೋ ಧರ್ಮ; ಅಧಿಯಜ್ಞ ಕರ್ಮ
ಇದು ಶಾಂತವೀರ - ಗಾಥಾs । ಪ್ರಗಾಥಾ । ದಂಡಕಾನುಕಾರೀ
ಸದು ಹೃದಯ ಹಾರಿ । ಸಂವಿತ್ ಚಕೋರಿ । ಇದು ಸಾಮ ಏಕತಾರಿ.
ಓಂ ಮನನ ತನನ ಶ್ರೀ ಗುರುಧ್ಯಾನಾ । ಅಂಬಿಕಾತನಯ ತಾನಾ
ಇದಕೇನಿದೆ ಅನುಮಾನಾ?
ಎದೆ ಉಸಿರ ತುತ್ತು, ಮೂರೂ ಹೊತ್ತು
ಆನಂದಿ ನಾನು, ಆನಂದಿ ನಾನು ಆ ವೃಷಭಧ್ವಜ ಎತ್ತು
ಬಂದೆ ನಾ ಶಿವಶಕ್ತಿಯ ಹೊತ್ತು
ಈ ಹೊತ್ತು.

---

ಆಕರ: ದ.ರಾ.ಬೇಂದ್ರೆ, **ನಾಕುತಂತಿ**, ಡಾ|| ವಾಮನಬೇಂದ್ರೆ (ಸಂ.), ಅಂಬಿಕಾತನಯದತ್ತ ವೇದಿಕೆ, ಶ್ರೀ ಮಾತಾ ಪ್ರಕಾಶನ ಧಾರವಾಡ, ೧೯೬೭, ಪು. ೧೯-೨೩,

# ಶ್ರೀ ವಿವೇಕಾನಂದ ಶಿಖರ ಪ್ರಗಾಥ

ಬೇಂದ್ರೆಯವರು ಉದಾತ್ತ ವ್ಯಕ್ತಿತ್ವದ ವಿವೇಕಾನಂದರನ್ನು ತಿಳಿದು ಅವರ ಅಧ್ಯಾತ್ಮದ ಔನ್ನತ್ಯವನ್ನು ಜಗತ್ತಿಗೆ ಸಾರಿ ಹೇಳುವ, ಉತ್ಸಾಹದ ಭಾವೋಜ್ವಲ ರಸಾಸ್ಯಂದಿ ಕಾವ್ಯ 'ಶ್ರೀ ವಿವೇಕಾನಂದ ಶಿಖರ ಪ್ರಗಾಥ'. ಕವಿ ತನ್ನ ಕಾವ್ಯ ನಾಯಕನನ್ನು ಪರಿಚಯಿಸುವ ರೀತಿಯೇ ಅನನ್ಯವಾಗಿದೆ. ಕವನದ ಪ್ರಾರಂಭದಲ್ಲಿ ವಿವೇಕಾನಂದರ ಗುರು ಶ್ರೀ ರಾಮಕೃಷ್ಣ ಪರಮಹಂಸರನ್ನು ಪರಿಚಯಿಸಿ ಅವರ ಶ್ರೇಷ್ಠತೆಯನ್ನು ಓದುಗನ ಅನುಭವವಾಗಿಸಿ -ಅಂತಹ ಯೋಗಿಯ ಶಿಷ್ಯ ಇವರು ಎಂಬ ಭಾವದ ಕಾವನ್ನು ಸೃಷ್ಟಿಸಿದ್ದಾರೆ. 'ಗೌರಿಶಂಕರ ಇತ್ತ I ಇತ್ತ ಕಾಂಚನಗಂಗೆ I ಅತ್ತತ್ತ ಪರಮಹಂಸರ ಸವಾರಿ' ಎಂಬ ನುಡಿಯಲ್ಲಿ ಗೌರಿಶಂಕರ ಮತ್ತು ಕಾಂಚನಗಂಗೆಯ ಸಂಕೇತದಿಂದ ಸ್ಥಾವರ ಇರುವ ಕಡೆ ಸಾಂಸಾರಿಕ ಹಾಗೂ ಹಣಕಾಸಿನ ಪ್ರಪಂಚವಿದ್ದು ಅದರ ಕಡೆ ಎಲ್ಲರ ಮನಸ್ಸಿದೆ. ಸಿದ್ಧಿಪುರುಷ ಪರಮಹಂಸರದು ಅಲೌಕಿಕತೆಯತ್ತ ಗಗನಗಾಮಿಯಾಗಿದೆ ಎಂಬ ಸ್ಪಷ್ಟ ಚಿತ್ರಣ ಕೊಟ್ಟು, ಕವಿ ಕಾವ್ಯದ ಒಡಲಿನಲ್ಲಿ ಚಿಂತಿಸಹೊರಟ ಅಧ್ಯಾತ್ಮಿಕ ಸುಳಿವನ್ನು ನೀಡಿದ್ದಾರೆ. ಹಾಗೆ ಪರಮಹಂಸರು ಹೊರಟ ಸವಾರಿಯಲ್ಲಿ ಆತ್ಮ ಕ್ರೀಡೆ, ಆತ್ಮರತಿ ಇದ್ದು ಅದು ಸತ್ ಚಿತ್ ಆತ್ಮ ವಿಹಾರಿಯಾಗಿದೆ - ಅದು ಹೆಜ್ಜೆ ಮೂಡದ ಹಾದಿ - ಅಧ್ಯಾತ್ಮ ಪಾರಮಾರ್ಥಿಕತೆಯಲ್ಲಿ ತಲ್ಲೀನವಾದಾಗಿನ ಸ್ಥಿತಿ. ಸಾಧನೆಯಿಂದ ಯಾವ ಸಿದ್ಧಿ ಪಡೆದರೂ ಅದನ್ನು ಶಕ್ತ ಸಮರ್ಥನಾದವನಿಗೆ ಧಾರೆ ಎರೆದು ಅವನ ಮುಖಾಂತರ ಜಗತ್ತಿನಲ್ಲಿ ಅದು ಅನುಷ್ಠಾನಕ್ಕೆ ಬರುವ ಹಾಗೆ ಮಾಡಬೇಕಾಗಿದೆ. ಹಾಗೆ ಮಾಡಲು ಅವರಿಗೆ ದಕ್ಷ ವಿವೇಕಾನಂದರು ಸಿಕ್ಕಾಕ್ಷಣ ಆನಂದದಿಂದ ನುಡಿಯುತ್ತಾರೆ; 'ಅದೊ! ವಿವೇಕಾನಂದ ನೀಡಿದನು ದಾರಿ, ಉದಾರಿ!'

ವಿವೇಕಾನಂದರು ಆಲೋಡನೆ ಮಾಡದ ವಿಷಯವೇ ಇಲ್ಲ. ಅವರು ಎಲ್ಲವನ್ನೂ ಸಮರ್ಥವಾಗಿ ಸಾಧಿಸಿ ಹಂತ ಹಂತವಾಗಿ ಶಿಖರದಿಂದ ಶಿಖರಕ್ಕೆ

ಹಾರಿ ಹಾದಿಯನ್ನು ಹುಡುಕಲು ತೊಡಗಿದರು. ಗುರು ಶಿಷ್ಯರ ಪರಂಪರೆಯಂತೆ ಪರಮಹಂಸ ಮತ್ತು ವಿವೇಕಾನಂದರು ಜೊತೆ ಜೊತೆಗೆ ಸಾಗಿ 'ಹೃದಯ ಸಂವಾದಿ'ಯಾದರು. ಗುರು ಶಿಷ್ಯರು ಒಮ್ಮನದವರಾಗಿ ಸುನಾದದ ಸುಶ್ರಾವ್ಯ 'ಸುನಾದಿ' ಒಳ್ಳೆಯ ನಾದವಾದರು. ಶಾಸ್ತ್ರಬದ್ಧ ದನಿ ಹೊರಟಾಗ ತಾವೇ 'ಸನಾದಿ'ಯಾದರು. ಅವರು ಭಾರತೀಯ ಪರಂಪರೆಯ ಹಾದಿಯಲ್ಲಿ ಸಾಗಿ ಆ ಶಾಸ್ತ್ರವು 'ವಿಜ್ಞಾನ ಬೋಧೆ'ಯಾಗಿರುವುದನ್ನು ಕಂಡುಕೊಂಡರು. ಅವರು ಪರಿಪೂರ್ಣ ಜ್ಞಾನ - 'ಸಂಜ್ಞಾನ'ವನ್ನು ಹೊಂದಿ- ಅದನ್ನು ಬೋಧಿಸುತ್ತ ಸಾಗಿದರು.

ಉಪನಿಷತ್ ಕಾಲದ ಋಷಿಗಳು ಶಿಷ್ಯರಿಗೆ ಬೋಧಿಸಿದ್ದು; ಅವರು ಕೂಡಿ ದೇವರನ್ನು ಧ್ಯಾನಿಸಿದ್ದು ಲೋಕ ಕಲ್ಯಾಣಕ್ಕಾಗಿಯೇ ಆಗಿತ್ತು.

"ಸಹವೀರ್ಯಂ ಕರವಾವಹೈ
ತೇಜಸ್ವಿನಾವಧೀತಮಸ್ತು, ಮಾವಿದ್ವಿಷಾವಹೈ"
"ಸಮಾನೀ ವ ಆಕೂತಿಃ । ಸಮಾನಾ ಹೃದಯಾನಿ ವಃ"
ನಿಃ ಪಕ್ಷ ವೇದಾಂತ, ಪೂರ್ಣ ಬೋಧಾಂತ; ಇದು ಸ್ವಯಂ ಸಿದ್ಧಾಂತ
ಪರಮಾಮೃತಾಂಬೋಧಿ.

'ಆತನ ಕೃಪೆಯಿಂದ ನಮ್ಮ ಕೆಲಸವು ವೀರ್ಯವತ್ತಾಗಿ ನಡೆಯಲಿ, ನಮ್ಮ ಅಧ್ಯಯನವು ತೇಜಸ್ವಿಯಾಗಿರಲಿ, ನಮ್ಮಲ್ಲಿ ಶಾಂತಿಯೂ, ಸೌಹಾರ್ದವೂ ನೆಲಸಿರಲಿ.'[1] ಸಮಾನವಾದ ಇಚ್ಛೆ, ಸಮಾನವಾದ ಹೃದ್ಯಭಾವ ನಮ್ಮಲ್ಲಿ ಉಂಟಾಗಲಿ. ಇದೇ ವೇದಾಂತ, ಸ್ವಯಂ ಸಿದ್ಧಾಂತ, ಪರಮಾಮೃತ ಬೋಧೆ. ಹೀಗೆ ಕವಿಯು ಪ್ರಾರಂಭದಿಂದಲೇ ರಸಾವೇಶಭರಿತರಾಗಿ, ನಾದಮಯ ನುಡಿಗಳಿಂದ, ಲಯದ ಗೆಜ್ಜೆ ಕುಣಿತದ ಮುಕ್ತ ಭಾವದಲ್ಲಿ, ಭಕ್ತಿಯ ಆವೇಶದಲ್ಲಿ ಉಪನಿಷತ್ ಮಂತ್ರಗಳನ್ನುಚ್ಚರಿಸುತ್ತ ಪ್ರಗಾಥವನ್ನು ಕುಣಿಸಿದ್ದಾರೆ. ಏರು ಕಂಠದಲ್ಲಿ ಆವೇಶಭರಿತರಾಗಿ ಶ್ರೀ ವಿವೇಕಾನಂದರ ಪ್ರಶಂಸೆ ಮಾಡುತ್ತ ಸಹೃದಯರ ಮನದುಂಬುವಂತೆ ಹಾಡಿದ್ದಾರೆ.

---

1. 'ಆರತಿ' ಶ್ರೀರಾಮಕೃಷ್ಣಾಶ್ರಮ, ಮೈಸೂರು, ೧೯೬೨, ಪು. ೧೪.

೨

ಬೇಂದ್ರೆಯವರು ಎರಡನೆಯ ಭಾಗದಲ್ಲಿ ವಿವೇಕಾನಂದರನ್ನು ನಂದಿಗೂ ರಾಮಕೃಷ್ಣ ಪರಮಹಂಸರನ್ನು ಶಿವಶಕ್ತಿಗೂ ಹೋಲಿಸಿ - ಅದನ್ನು ಹೊರುವ ಎತ್ತು; ಋಷಭ[2]ಧ್ವಜನಾದ ನಂದಿ ನಾನು; ಆ ಸೇವೆಯಲ್ಲಿಯೇ ಸಂತೋಷಪಡುವ ಆನಂದಿ ನಾನು ಎಂದು ವಿವೇಕಾನಂದರೇ ನುಡಿದಂತೆ ರಚಿಸಿದ್ದಾರೆ. ಬೇಂದ್ರೆಯವರ ಪ್ರೀತಿಯ ಶ್ಲೇಷೆಯಲ್ಲಿ 'ಎತ್ತು' ಪದವನ್ನು ನೋಡಿದಾಗ ನಂದಿ ಎಂಬ ಅರ್ಥದ ಜೊತೆಗೆ ಮೇಲಕ್ಕೆತ್ತುವ ಅರ್ಥವನ್ನೂ ಹೊಂದಿ ಕಲ್ಯಾಣಕಾರಕನಾದವನು ಎಂಬ ಭಾವವನ್ನು ಹೊಮ್ಮಿಸುತ್ತದೆ.

ವಿವೇಕಾನಂದರು-ತಾನು ಮೂಗುದಾರದ ಮಿತಿಗೆ ಅಂದರೆ ಅಂಕೆಗೆ ಒಳಪಟ್ಟವನಲ್ಲ; ಧೈರ್ಯ ಸಾಹಸದ ಗಂಡು 'ಹಂಡಹೋರಿ' ಎಂದಿದ್ದಾರೆ. ತಾನು ಮುಕ್ತವಾಗಿ 'ನಂದಿಕೋಲ' ಜನಪದ ಕುಣಿತದಲ್ಲಿ ಭಾವಲೀಲಾಮಯವಾಗಿ ನೆಲದಲ್ಲಿ ನಿಂತು ಮೇಲ್ಮುಖದವನಾಗಿ ಏರು ಚಿಂತನೆಯ ಸಾಧನೆ ಮಾಡುವಂತವನು. ನೇರ ನಿಲುವಿನ 'ನಂದಿಕೋಲ' ಹೊತ್ತು ತೋಲ ತಪ್ಪದಂತೆ ಕುಣಿದು ಆನಂದಿಸುವವನು, ಯತೇಚ್ಛ ಜನಸಮೂಹದ ಸಂಧಿ ಸಂಧಿಯಲ್ಲಿ

---

2. 'ವೃಷಭ-ನಂದಿ, ಶಿವನವಾಹನ, ಸಕಲ ಬ್ರಹ್ಮಾಂಡದ ಭಾರವನ್ನು ಧರಿಸಿದ ತನ್ನನ್ನು ಧರಿಸುವವರಾರೆಂದು ಒಮ್ಮೆ ಪರಶಿವನು ತನ್ನ ಹೃದಯದೊಳಗಿನ ಧರ್ಮವನ್ನು ನೆನೆಯಲು ಆ ಸದ್ಧರ್ಮವೇ ತೇಜೋಮೂರ್ತಿಯಾಗಿ ಅಡಿಗೆರಗಿ ನಿಂತಿರಲು ತನಗೆ ಭಿನ್ನವಿಲ್ಲದುದರಿಂದ ಶಿವನು ಇದನ್ನು ವಾಹನವನ್ನಾಗಿ ಮಾಡಿಕೊಂಡನು. ಈ ಸದ್ಧರ್ಮ ಮೂರ್ತಿಯೇ ಆದಿವೃಷಭನು. ಇವನಿಗೆ ವೇದಗಳೇ ನಾಲ್ಕು ಪಾದಗಳು; ಷಟ್ ಶಾಸ್ತ್ರಗಳೇ ಶರೀರವು; ನಾದ ಬಿಂದು ಕಳೆಗಳೇ ತನುತ್ರಯವು; ಆದಿ-ಅನಾದಿಗಳೇ ಎರಡು ಕೊಂಬುಗಳು; ಪ್ರಣವವೇ ಶಿರಸ್ಸು; ಪಂಚಾಕ್ಷರಿಯೇ ಮುಖ; ವೇದಾಂತವೇ ಹಿಣಿಲು; ತೀರ್ಥಸ್ಮೃತಿ ಮಂತ್ರಗಳೇ ಕೂದಲು; ಶಿವಾಗಮಗಳೇ ಪ್ರಾಣವು. ಶಿವನು ಉಮೆಯೊಡನೆ ಈ ವೃಷಭವನ್ನು ಏರಿದುದಕ್ಕೆ 'ವೃಷಭ ವಾಹನ ಲೀಲೆ' ಎನ್ನುತ್ತಾರೆ.

ಯಜ್ಞನಾರಾಯಣಉಡುಪ-'ಪುರಾಣಭಾರತಕೋಶ', ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ೧೯೭೭, ಪು. ೫೯೬.

ಒಂದಾಗಿ ಮಿಳಿತಗೊಂಡು ಹೆಜ್ಜೆ ಹಾಕುತ್ತ; ಮೋಕ್ಷಾಕಾಂಕ್ಷಿಗಳಾದ ಮುಮುಕ್ಷುಗಳ ಸಂಬಂಧಿಯಾದವನು, ತಾನು ಸ್ವಂತ ವ್ಯಕ್ತಿತ್ವ ಹೊಂದಿದ, ತನ್ನದೇ ಆಲೋಚನೆಯ 'ನಂದಿಕೋಲ' ಹೊತ್ತ ನಂದಿ ಎಂದಿದ್ದಾರೆ. ತನ್ಮಯವಾಗಿ `ನಂದಿಕೋಲ'ದಲ್ಲಿ ಕುಣಿಯುತ್ತ ಜಗದಲ್ಲಿ ಒಂದಾಗಿದ್ದೂ ತಾನು ಪ್ರತ್ಯೇಕವಾಗಿ ತನ್ನ ಅಸ್ತಿತ್ವವನ್ನುಳಿಸಿಕೊಳ್ಳುತ್ತ ಜನರ ಆನಂದಕ್ಕೆ ಕಾರಣನಾದವನು. ಆ ಸಂತೋಷದ ನೆಲೆ ತಾನೇ ಆಗಿದ್ದರೂ ಅದರ ಸಮಸ್ಥಿತಿ ಕಾಪಾಡಿಕೊಳ್ಳುತ್ತ ಸಾಗುವ ಸ್ಥಿತ ಪ್ರಜ್ಞತೆಯ ಸಮತೋಲ ಕುಣಿತದ ಆನಂದಲಹರಿಯ ತನ್ಮಯತೆ ಇರುವುದೇ ತನ್ನ ವಿವೇಕಲಹರಿ ಎಂದಿದ್ದಾರೆ. ಜನಪದ ಕಲಾಪ್ರಕಾರಗಳಲ್ಲಿ ಎತ್ತರಕ್ಕೇರುವ ಹಿನ್ನೆಲೆಯಲ್ಲಿ ಅಥವಾ ಏರಿಸುವ ಹಿನ್ನೆಲೆಯಲ್ಲಿ 'ನಂದಿಧ್ವಜ' ಕುಣಿತಕ್ಕಿಂತ ಸಮುನ್ನತವಾದುದು ಬೇರಾವುದೂ ಇಲ್ಲ; ಅದು ಆ ಕಲೆಯ ಎತ್ತರದ ಪರಾಕಾಷ್ಠೆ. ವಿವೇಕಾನಂದರು ಅಧ್ಯಾತ್ಮಿಕ ಹಿನ್ನೆಲೆಯಲ್ಲಿ ಏರಿದ ಎತ್ತರವೂ ಹಾಗೆಯೇ ಮಹೋನ್ನತವಾದುದು ಎಂಬುದನ್ನಿಲ್ಲಿ ಸೂಚಿಸಲಾಗಿದೆ. ಅದಕ್ಕೆ 'ನಂದಿಕೋಲು' ಪ್ರತೀಕವಾಗಿದೆ. ವಿವೇಕಾನಂದರ ಎತ್ತರವೆಂದರೆ ಅದು 'ನಂದಿಧ್ವಜ'ದ ಎತ್ತರವೆಂದರೂ ಸರಿಯೆ.

ಬೇಂದ್ರೆಯವರು ಜನಪದ ಕುಣಿತ 'ನಂದಿಕೋಲ'ವನ್ನು ವಿವೇಕಾನಂದರ ಏರು ವ್ಯಕ್ತಿತ್ವ ಚಿತ್ರಣಕ್ಕೆ ರೂಪಕವಾಗಿ ಬಳಸಿರುವುದು ಅವರ ಜನಪದ ಜೀವದ್ರವ್ಯಾನುಭವಕ್ಕೆ ಸಾಕ್ಷಿಯಾಗಿದೆ. ಅವರ ರೂಪಕ ಸೃಷ್ಟಿಯ ಅನನ್ಯ ಉದಾಹರಣೆಯಾಗಿದೆ.

ಆ ವಿವೇಕ ಲಹರಿ ಎಂಬುವುದು ಎಚ್ಚರಿಕೆಯ ಕಾವಲುಗಾರನ ರೀತಿ ಕಾಯುತ್ತ; ಪ್ರತಿಗಳಿಗೆಯೂ ಈ ಶರೀರರೂಪಿ ವ್ಯಕ್ತಿಗಳನ್ನು ಶುದ್ಧಗೊಳಿಸುತ್ತ 'ಮಲಾಪಹಾರೀ'-ಅಂದರೆ ಕೊಳೆತೊಳೆಯುವ ಅಧ್ಯಾತ್ಮದ ಗಂಗೆಯಾಗಿದೆ. ಆ ಚಿಂತನೆಯ ಗುಂಗು - ನಂದಕುವರ ಕೃಷ್ಣನ ಆನಂದವೂ, ಸನತ್ಕುಮಾರನಿಂದ ನಾರದನು ಪಡೆದ 'ಸ್ಕಂದ ಶಿಲಾಲಹರಿ' ಉಪದೇಶದಂತಹ ತುತ್ತ ತುದಿಯ (ನಿಃಸ್ವಾನಂದ) ಆನಂದವೂ ಆಗಿದೆ.

ಬೇಂದ್ರೆಯವರ ವೇದ, ಉಪನಿಷತ್ತು, ಕಾವ್ಯ, ಪುರಾಣಗಳ ವಿಶಾಲ ಓದಿನ ಜೊತೆಗೆ; ಜನಪದ ಜೀವನಾನುಭವ, ಯೌಗಿಕಾನುಭವ; ಬದುಕಿನ ನೂರಾರು ದೃಷ್ಟಾಂತಗಳು ಮುಗಿಬಿದ್ದು - ಅವು ಓತಪ್ರೋತವಾಗಿ ಹರಿದು ಶ್ರೇಷ್ಠ ವ್ಯಕ್ತಿ ವಿವೇಕಾನಂದರನ್ನು ಈ ಪ್ರಗಾಥದಲ್ಲಿ ಚಿತ್ರಿಸಿದೆ.

೩

ಈ ಪ್ರಗಾಥದ ಮೂರನೆಯ ಭಾಗದಲ್ಲಿ ವಿವೇಕಾನಂದರ ಅನಿಕೇತನ ವ್ಯಕ್ತಿತ್ವವಿದೆ. ಅದು ಅಧ್ಯಾತ್ಮದ ಚಿಂತನೆಯಲ್ಲಿ ವಿಕಾಸಶೀಲವಾಗುವುದನ್ನು ತೆಲುಗು ಸಂಖ್ಯೆಯ 'ಒಗಟುರೆಂಡಿನಲ್ಲಿ' ಬೇಂದ್ರೆಯವರು ಬಣ್ಣಿಸಿದ್ದಾರೆ. ಮೂಲದಲ್ಲಿ ಒಂದಾದ ಪರಬ್ರಹ್ಮವಸ್ತು ಜೀವಾತ್ಮ-ಪರಮಾತ್ಮವಾಗಿ ಎರಡಾದ ಬಗ್ಗೆಯ ಆಲೋಚನೆಯಲ್ಲಿ ಮೂಡಿ ಮುಳುಗುತ್ತಿದ್ದುದನ್ನು; ದ್ವೈತ -ಅದ್ವೈತದ, ವಾದ- ವಿವಾದದ ಗುಂಗಿನಲ್ಲಿ ವಿವೇಕಾನಂದರಿದ್ದುದನ್ನು `ನಿದ್ದೆ ನಿದ್ದೆ' ಎಂದು ಬಣ್ಣಿಸಿದ್ದಾರೆ. ಅಧ್ಯಾತ್ಮದ ಆಲೋಚನೆಯಲ್ಲಿಯೇ ಇರುವಾಗ ತನ್ನನ್ನು ಆವರಿಸಿದ ಭಾವವನ್ನು ನಿದ್ದೆ ಕೆಡಿಸಿದ ರೀತಿಯನ್ನು 'ಸ್ವಪ್ನ ವಿಹಾರಿ' ಎಂಬ ರೂಪಕದಿಂದ ಚಿತ್ರಿಸಿದ್ದಾರೆ. ಬ್ರಹ್ಮನನ್ನು ನೆನೆಯುತ್ತ, ಸಂತೋಷಪಡುತ್ತ ಅದನ್ನೇ ಪ್ರೀತಿಸುವ ಭ್ರಮಾವಸ್ಥೆಯನ್ನು, ಆ ಚಿಂತನೆಯ ವಿವಿಧ ಭಾವದ ರಂಗ ಪ್ರಯೋಗಾವಸ್ಥೆಯ ಸ್ಥಿತಿಯನ್ನು ಕವಿ 'ನಲಿವು ನನ್ನಿಯಲಿ, ಒಲಿವ ಸನ್ನಿಯಲಿ ರಂಗ ರಂಗ ಹೂಡಿ' ಎಂದಿದ್ದಾರೆ. ಆ ಭಾವದಲ್ಲಿ ವಿವೇಕಾನಂದರು ಆ ಆನಂದವೆಂಬ ಸಿರಿಯ ಶ್ವೇತ ಪ್ರಕಾಶದ ನೆಲೆಯಲ್ಲಿ 'ನಾನು, ನೀನು, ಆನು, ತಾನು' ಎಂಬ ನಾಲ್ಕು ತಂತಿಯನ್ನು ಮೀಟಿ ಹಾಡಿದ್ದಾರೆ. ಆ ನಾದ ಬಿಟ್ಟು ಇನ್ನೊಂದಕ್ಕೆ ಮನಸ್ಸು ಕೊಡದೆ ತನ್ಮಯತೆಯ 'ಮೌನಮುದ್ರೆ ಒತ್ತಿ' ಬ್ರಹ್ಮದ ಶ್ರೀ ಚರಣವನ್ನು ಧ್ಯಾನಿಸಿದ್ದಾರೆ. ತನ್ನನ್ನು ತಾನು ತಿಳಿಯತೊಡಗಿದ್ದಾರೆ. ನಾನು ಬ್ರಹ್ಮನ ಮಾನಸಪುತ್ರ (ಋಭು)ನಾಗಿದ್ದವನು. ಆ ಬ್ರಹ್ಮವನ್ನು ಪೂರ್ಣವಾಗಿ ಅರಿತು, ಅದರ ಪ್ರಭು (ವಿಭು) ಆಗಿದ್ದೆ ಎಂದು ಹೇಳಿಕೊಂಡಿದ್ದಾರೆ.

ಆ ರೀತಿಯ ಆಲೋಚನೆಯ ನೆಲೆಗೆ ತಲುಪಿದ ವಿವೇಕಾನಂದ ತನ್ನ ಮೃಣ್ಮಯ ಸಾಧನೆಯನ್ನು ಕಂಡು ಅಚ್ಚರಿಯಿಂದ ನುಡಿದಿದ್ದಾರೆ; 'ಹೋ! ಅತಿ ಭೂಮಿಗೆ ಪ್ರತಿ ನಾ ಉದ್ಭವಿಸಿದ್ದೆ.'

ನರ-ಅರ್ಜುನ, ನಾರಾಯಣ-ಶ್ರೀಕೃಷ್ಣನಿದ್ದಂತೆ; ನರ-ವಿವೇಕಾನಂದ, ನಾರಾಯಣ-ಶ್ರೀರಾಮಕೃಷ್ಣ ಪರಮಹಂಸ ಎಂಬ ಭಾವವಿದೆ. ಆ ನರ ನಾರಾಯಣರ ಲೋಕ ಕಲ್ಯಾಣದ ವಿದ್ಯೆ ನರನಿಂದ ಇಡೀ ಭರತಖಂಡವನ್ನು ವ್ಯಾಪಿಸಿ ವಿಶ್ವವ್ಯಾಪಿಯಾಯಿತು ಎಂಬ ಭಾವವನ್ನು ಬೇಂದ್ರೆಯವರು ಗೊಮ್ಮಟನ ಸಂಕೇತದಿಂದ 'ಧ್ರುವ ಮಂಡಲದಾ ಎತ್ತರವನ್ನು ಗೊಮ್ಮಟನಾಗಿ ತಟ್ಟಿದ್ದೆ' ಎಂದು ಬಣ್ಣಿಸಿದ್ದಾರೆ.

ಅನುಭೂತಿ ಪಡೆಯಬೇಕಾದ ಸ್ಥಳಗಳ ಸೂಚನೆಯಲ್ಲಿ ಶೈವ, ವೀರಶೈವ, ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಜೈನಧರ್ಮಗಳ ಪವಿತ್ರ ಕ್ಷೇತ್ರಗಳಿವೆ. ಅವು ವಿವೇಕಾನಂದರು ಭೌಗೋಳಿಕ ಸೀಮೋಲ್ಲಂಘನೆ ಮಾಡುತ್ತ, ಧರ್ಮಗಳ ಸೀಮೋಲ್ಲಂಘನೆಯನ್ನೂ ಮಾಡಿ ಅವುಗಳೆಲ್ಲದರ ಸಾರವನ್ನು ಅರಿತು ಉಲ್ಲಾಸಮಯವಾಗಿರುವ ಚಿತ್ರ ಇಲ್ಲಿದೆ. ಅಷ್ಟು ಮಾತ್ರವಲ್ಲದೆ ಒಬ್ಬ ಪರಿವ್ರಾಜಕರಾಗಿ, ಜ್ಞಾನಭಿಕ್ಷುವಾಗಿ ಭರತಖಂಡದ ದಿವ್ಯಧಾಮಗಳನ್ನು ಪಾದ ಯಾತ್ರೆಯ ಮೂಲಕ ಸಂದರ್ಶಿಸಿದ ಸನ್ನಿವೇಶದ ಸೂಚನೆಯೂ ಇಲ್ಲಿದೆ. ಕನ್ಯಾಕುಮಾರಿಯಿಂದ ಕಾಶ್ಮೀರದವರೆಗಿನ ಹಿಂದೂಸ್ಥಾನದ ಉದ್ದಗಲಗಳಲ್ಲಿ ಸಂಚರಿಸಿದ ಧೀಮಂತಿಕೆ ಅವರದು. 'ಚರನ್ ವೈ ಮಧು ವಿಂದತಿ'- ಸಂಚರಿಸುವವನು ಜೇನನ್ನು ಸಂಗ್ರಹಿಸುತ್ತಾನೆ ಎಂಬ ಮಾತಿನಂತೆ ವಿವೇಕಾನಂದರು ತಮ್ಮ ಪಾದಯಾತ್ರೆಯ ಮೂಲಕ ಅಧ್ಯಾತ್ಮದ ಜೇನನ್ನು ಸಂಗ್ರಹಿಸಿದರು.

ಕನ್ಯಾಕುಮಾರಿಯಲ್ಲಿ ಮುಳುಗಿದ್ದು; ಸಾಗರವನ್ನೇ ಈಜಿ ನಡು ಬಂಡೆಯ ಮೇಲೆ ಹೋಗಿ ಕುಳಿತು ಧ್ಯಾನಮಗ್ನರಾದುದು, ತಮ್ಮ ಅಧ್ಯಾತ್ಮಿಕ ಸಾಧನೆಯಲ್ಲಿ ವಿಶಿಷ್ಟ ನೆಲೆಯೊಂದನ್ನು ಮುಟ್ಟಿದ್ದು - 'ಕನ್ಯಾಕುಮಾರಿಯಲಿ ಮುಳುಗಿದ್ದೆ- । ಕಾಶ್ಮೀರದ ಒಳಗಿದ್ದೆ' ಎಂಬ ಮಾತಿನ ಮೂಲಕ ಸಶಕ್ತವಾಗಿ

ಧ್ವನಿತವಾಗಿದೆ. ಈ ಹಿನ್ನೆಲೆಯನ್ನು ಅರಿಯದ ಮೂಲಭೂತವಾದಿಗಳಿಗೆ ಜಗದ ಕಲ್ಯಾಣ ಹಾಗೂ ಆನಂದ ಅಲಭ್ಯ. ವಿಶ್ವಧರ್ಮದ ಮಾನವತಾವಾದಿಗೆ ಶಿವಶಕ್ತಿಯನ್ನು ಅಂದರೆ ಜಗದ ಕಲ್ಯಾಣವನ್ನು ಸಂತಸದಿಂದ ಹೊರಲು ಸಾಧ್ಯ. ಆದಕಾರಣ 'ನಂದಿ ನಾನು । ಆ-। ನಂದಿ ನಾನು, ಆ ಋಷಭಧ್ವಜ ಎತ್ತೂ । ಬಂದೆ ನಾ ಶಿವಶಕ್ತಿಯ ಹೊತ್ತು' ಎಂದು ಅನಿಕೇತನ ವ್ಯಕ್ತಿತ್ವದ ವಿವೇಕಾನಂದರು ನುಡಿದಿದ್ದಾರೆ.

ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ವ್ಯಾಪಿಸಿರುವ ವಿಸ್ತಾರ ಭಾರತದ ಧಾರ್ಮಿಕ, ಸಾಮಾಜಿಕ, ರಾಜಕೀಯ, ಆರ್ಥಿಕ, ತಾತ್ವಿಕ ಅಂತರಾಳವನ್ನು ತಿಳಿದಿದ್ದರೂ - ಅದು ಶ್ರೀಗುರುವಿನ ಕೃಪೆ ಎಂಬಂತೆ ವಿವೇಕಾನಂದರಿದ್ದರು ಎಂಬುದು 'ಶ್ರೀಗುರುವಿನ ಒಳಗಿದ್ದೆ' ಎಂಬ ನುಡಿ ಧ್ವನಿಸುತ್ತಿದೆ. ತಾನು ನಂದಿ, ಆನಂದಿ, ಶಿವಶಕ್ತಿಯನ್ನು ಹೊರುವ ಋಷಭಧ್ವಜ ಎತ್ತು ಎಂಬ ವಿನಯ, ಸೇವಾಮನೋಭಾವದ ನುಡಿ ಪಲ್ಲವಿಯಾಗಿ ಹೊಮ್ಮಿ ವಿವೇಕದ ಆನಂದವನ್ನು ಸಾರುತ್ತಿದೆ.

೪

ಬೇಂದ್ರೆಯವರ ಪ್ರಕಾರ ವಿವೇಕ ಉದಯಿಸುವುದು ಮತ್ತು ಅದರಿಂದ ಆನಂದಮಯವಾಗುವುದು ವ್ಯಕ್ತಿಯಲ್ಲಿಯೇ ಇರುವ ಚೇತನದಿಂದ ಸಾಧ್ಯ. ವಿವೇಕಾನಂದ ಎಂಬ ಹೆಸರೇ ಒಂದರ್ಥದಲ್ಲಿ ಈ ವಿಚಾರವನ್ನು ಅರ್ಥ ಪೂರ್ಣವಾಗಿ ಧ್ವನಿಸುತ್ತದೆ. ಅದು 'ಸ್ವಯಂಭೂ' ಯಾರ ಅಂಕೆಗೂ ಒಳಪಡದ ತನ್ನಿಂದ ತಾನೇ ಮೂಡಿದುದಾಗಿ ತನ್ನ ಆಲೋಚನಾ ಶಕ್ತಿಯಿಂದ ಕವಿಯಾಗಿ ವಿದ್ವಾಂಸನಾದಂತೆ. 'ಕವಿರ್ಮನೀಷೀ ಪರಿಭೂಸ್ಸ್ವಯಂಭೂ'[1] ಕವಿಯು ಮನೀಷಿಯು, ಸರ್ವೋತ್ತಮನು, ಸ್ವಯಂಭೂ, ಅಂದರೆ ಕವಿಯು ಕ್ರಾಂತಿದರ್ಶಿಯಾಗಿ - ಆಚೆ ಇರುವುದನ್ನು ನೋಡಬಲ್ಲವನು; ಮನಸ್ಸನ್ನು

---

1. ಈಶಾವಾಸ್ಯೋಪನಿಷತ್, ಶ್ರೀರಾಮಕೃಷ್ಣಾಶ್ರಮ, ಮೈಸೂರು ೧೯೫೬, ಪುಟ - ೧೭.

ಆಳುವವನು. ಸರ್ವಜ್ಞ, ಈಶ್ವರ ಎಂದರ್ಥ. ಅವನು ಎಲ್ಲಕ್ಕೂ ಮೇಲೆ ಇರುವವನು, ತನ್ನಿಂದ ತಾನೇ ಆಗಿರುವವನು. ಅವನು `ಶುಕ್ಲಯಜುರ್ವೇದದ ಒಂದು ಉಪನಿಷತ್ತಾದ ಈಶಾವಾಸ್ಯ'[1] ಕ್ಕೆ ಶೇಷನಿದ್ದಂತೆ. ಶೇಷನು `ಕದ್ರು ಪುತ್ರನಾದ ನಾಗನೊಬ್ಬ. ಈತನು ತಪಸ್ಸಿನಿಂದ ಬ್ರಹ್ಮನನ್ನು ಒಲಿಸಿಕೊಂಡು ಭೂಮಿಯನ್ನು ಧರಿಸುವ ಶಕ್ತಿಯನ್ನು ಪಡೆದನು. ಇವನಿಗೆ ಸಾವಿರ ಹೆಡೆಗಳು. ಇವನು ತನ್ನ ಸಹೋದರರ ಗುಣಗಳನ್ನು ಮೆಚ್ಚದೆ ಅವರನ್ನು ತ್ಯಜಿಸಿದ್ದನು. ಈತನು ಶ್ರೀಮನ್ನಾರಾಯಣನ ಹಾಸಿಗೆ, ಲಕ್ಷ್ಮಣ ಮತ್ತು ಬಲರಾಮರು ಶೇಷನ ಅವತಾರ. ಈತನು ಮಹಾಜ್ಞಾನಿ'[2] ಅಂತಹ **ಶೇಷನಾದವನಲ್ಲಿ ನಿರ್ಭಯತೆ ಮತ್ತು ಸುರಕ್ಷಿತತೆ ಎಂಬುದು ಮಾಗಿ ಅದು ಜ್ಞಾನದ ಜ್ವಾಲೆಯಾಗಿ ಫಡಫಡಿಸುತ್ತಿದೆ. ಅಂತಹದೇ ಜ್ಞಾನತೇಜದ ಮಹಾಜ್ಞಾನಿಯಾದ ವಿವೇಕಾನಂದರು ಶ್ರೀರಾಮಕೃಷ್ಣ ಪರಮಹಂಸರ ಶೇಷನಾದರು. ಅವರು ರಾಮರಾದರೆ ಇವರು ರಾಮಶೇಷರಾದರು.**

ವಿವೇಕಾನಂದರು ತಮ್ಮ ಶ್ರೀಕಂಠದ ಶಂಖನಾದಕ್ಕೆ ತನ್ನ ದೇಹವನ್ನೇ ಆಧರಿಸಿ 'ಓಂ', 'ಸೋಹಂ ಹಂಸಃ' ವೆಂಬ ಪ್ರಾಣಾಯಾಮದ ಸಾಧಕರಾದರು. 'ಶ್ರೀಕಂಠದ ಶಂಖಕ್ಕನುಕೂಲೆ । ಓಂ, ಓಂ; ಅಂ ಅಃ; ಸೋಹಂ, ಹಂಸಃ' ಎಂಬ ನುಡಿಯಲ್ಲಿ ಪ್ರಾಣಾಯಾಮಕ್ಕೆ ಸಾಧನವಾದ 'ಓಂ' ಮಂತ್ರಕ್ಕೆ ಸಮನಾದ `ಅಂ, ಅಃ' ವನ್ನು ಬೇಂದ್ರೆಯವರೇ ಸಂಶೋಧಿಸಿ ಪ್ರಯೋಗಿಸಿದ್ದಾರೆ.[3]

ವಿವೇಕಾನಂದರು ಪ್ರಾಣಾಯಾಮದ ಮುಂದಿನ ಹಂತವಾಗಿ ಕುಂಡಲಿನೀ ಯೋಗದ ಸಾಧಕರಾಗಿ 'ಬ್ರಹ್ಮರಂಧ್ರದಲಿ, ಸಹಸ್ರಾರದಲಿ, ಮಾತೆ ಘೋಷದ

---

1. ಯಜ್ಞ ನಾರಾಯಣ ಉಡುಪ, ಪುರಾಣ ಭಾರತಕೋಶ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ೧೯೯೭ ಪುಟ - ೬೩

2. ಅದೇ, ಪುಟ - ೬೩೩

3. ಈ ಕಾವ್ಯವನ್ನು ಕುರಿತು ಚರ್ಚಿಸುವಾಗ ಡಾ. ಶಂಕರ ಮೊಕಾಶಿ ಪುಣೇಕರ ಅವರು ಬೇಂದ್ರೆಯವರೇ ಆ ಗುಟ್ಟನ್ನು ತಮಗೆ ತಿಳಿಸಿದುದಾಗಿ ಹೇಳಿದರು.

ಸಂತೋಷ'ವನ್ನು ಅನುಭವಿಸಿದರು. 'ಮಾತೆ' ಎಂಬುವುದು ಇಲ್ಲಿ ಬೇಂದ್ರೆಯವರ ಪ್ರಕಾರ ಹಲವು ಅರ್ಥಗಳನ್ನು ಹೊಂದಿದೆ. ಮಾತೆಯು ಮಾತು ಆಗಿ ಚಿಂತನೆಯನ್ನು; ತಾಯಿಯಾಗಿ ಜಗತ್ ಶಕ್ತಿಯನ್ನು; ಅರವಿಂದಾಶ್ರಮದ ಶ್ರೀಮಾತೆಯೂ ಆಗಿದೆ. 'ಘೋಷ' ಅರವಿಂದ ಘೋಷರಿಂದ ಅವರು ಪಡೆದ ಪ್ರೇರಣೆಯನ್ನು ಧ್ವನಿಸುತ್ತದೆ.

ಆನಂದಿಯಾಗಿ ಆ ಶಕ್ತಿ ಕಾಮಧೇನು ಈಯಲು ಅಂದರೆ ಕರು ಹಾಕಲು ನಾನು ನಂದಿಯಾದೆ. ಶಿವಶಕ್ತಿಯನ್ನು ಹೊರುವ ವೃಷಭನಾದೆ. ಬಯಸಿದ್ದನ್ನು ಕೊಡಬಲ್ಲ ದೇವಲೋಕದ ದಿವ್ಯರತ್ನ ಚಿಂತಾಮಣಿಗೆ ಹಣೆ ತಿಕ್ಕುತ್ತ ಜ್ಞಾನಿಯಾದೆ. ಕಲ್ಪವೃಕ್ಷಗಳ ಬನ ಹೊಕ್ಕು ಅಪ್ಸರೆಯರ ವೃಂದದಲ್ಲಿ ಸಿಕ್ಕಿದರೂ -ಎಲ್ಲ ಪ್ರಲೋಭನೆಗಳಿಂದ ಮುಕ್ತನಾಗಿ 'ಶ್ರೀಗುರುವೆ ಶರಣು' ಎಂದು ತಮ್ಮ ಆಶೀರ್ವಾದದಿಂದ ಹಿಮಾಲಯಕ್ಕೆ ಬಂದೆ ಎಂದಿದ್ದಾರೆ. ಅತ್ಯುನ್ನತಿಯಲ್ಲಿ ಹಿಮಾಲಯದ ಶಿಖರವನ್ನು ಮೀರಿಸುವುದು ಮತ್ತಾವುದೂ ಜಗತ್ತಿನಲ್ಲಿಲ್ಲ. ಗುರು ಕೃಪೆಯಿಂದ ವಿವೇಕಾನಂದರು ಏರಿದ ಎತ್ತರ ಅಂತಹದು. ಅದು ನಿರ್ಮಲವಾದುದು. ಶ್ವೇತ ಶುಭ್ರವಾದುದು, ಅಧ್ಯಾತ್ಮಿಕ ಗಂಗೆಯ ಉದಯಕ್ಕೆ ಕಾರಣವಾದುದು ಎಂಬೆಲ್ಲ ಅರ್ಥಗಳೂ ಇಲ್ಲಿ ಸ್ಫುಟಗೊಂಡಿವೆ.

ಹಿಮಾಲಯದ ಆಶ್ರಮದೊಳಗಿದ್ದು-ತಾನು ಈ ನೆಲದಲ್ಲಿ ಹರಿಯುವ ಮಂಜುಳರವವಾದ ಪಾವನ ನದಿಯಾದೆ. ಜನರನ್ನು ಎಚ್ಚರಿಸಿದೆ. 'ನದಿಯು ಹಾಗೆ ನಿನದಿಸುವುದು ಆ ದಿವ್ಯ ಧ್ವನಿ ಕೇಳಿ!' ಎಂದು ಕೂಗಿ ಹೇಳಿದೆ. ನಿಮ್ಮ ಜೀವನದ ಎಲ್ಲ ಪ್ರಶ್ನೆಗಳಿಗೆ ಉತ್ತರವನ್ನು ಕೇಳಿಸಿಕೊಳ್ಳುವುದರ ಜೊತೆಗೆ ಸಾಧಾರಣ ಸ್ತರದಿಂದ ಮೇಲೆದ್ದು; ಸಾಧನೆಯಿಂದ ಸಾಧಕರಾಗಿ; ಉನ್ನತ ನೆಲೆಗೆ ಏರುವಂತವರಾಗಿ; ಬಿತ್ತರಕ್ಕೆ, ವೈಶಾಲ್ಯಕ್ಕೆ ಕಿವಿಗೊಡುತ್ತ ನೀವು ವಿಶಾಲ ಹಂತಕ್ಕೆ ಏಳಿ-ಎಂದು ಜನಗಳನ್ನುದ್ದೇಶಿಸಿ ಘರ್ಜಿಸಿದೆ ಎಂಬ ವಿವೇಕಾನಂದರ ನುಡಿಯಲ್ಲಿ ಜಗತ್ತಿನ ಉದ್ಧಾರಕ್ಕೆ ಸಂಭ್ರಮಿಸಿದ ದೊಡ್ಡ ದನಿ ಇದೆ.

ಜ಼

ಈ ಕಾವ್ಯದ ಐದನೆಯ ಹಾಗೂ ಕೊನೆಯ ಭಾಗದಲ್ಲಿ ವಿವೇಕಾನಂದರು ಆತ್ಮಶೋಧ ಮಾಡಿಕೊಳ್ಳುತ್ತ ಅಹಂ ಅನ್ನು ವಿಸರ್ಜಿಸಿಕೊಂಡು ಶಿವನಿಗೆ ಶರಣಾದ ಭಾವವನ್ನು ಬೇಂದ್ರೆಯವರು ಚಿತ್ರಿಸಿದ್ದಾರೆ. ತಾನು ಸಾಧಕನಾದೆ ಎಂಬ ಭಾವದಲ್ಲಿ ವಿವೇಕಾನಂದರು ಆಗರೆಯುತ್ತಿದ್ದಾಗ ಅಂದರೆ ಹಂಬಲಿಸುತ್ತಿದ್ದಾಗ, ಕಳವಳದಲ್ಲಿದ್ದಾಗ ಅವರಲ್ಲಿ ಅಹಂಭಾವ ಉಂಟಾಗುತ್ತದೆ. `ನಾನು' ಎಂಬ ಆ ಭಾವದಲ್ಲಿ ಉರಿಯುತ್ತಿದ್ದಾಗ ಅವರು ತನ್ನ ಮಿತಿಯನ್ನು ಅರಿತು ಚಿಂತಿಸುವ, ಆತ್ಮಶೋಧದಲ್ಲಿ ತೊಡಗುವ ಚಿಂತನೆ ಇಲ್ಲಿದೆ.

ತನ್ನ ಶಕ್ತಿಗೆ ಶಿವನಿಲ್ಲದೆ, ಕಲ್ಯಾಣ ಗುಣವಿಲ್ಲದೆ ಇದ್ದರೆ ಅದು ವ್ಯರ್ಥ. ಅದು ಭಗವಂತನ ಮಹಿಮೆಯನ್ನು ನೀಡುವುದಿಲ್ಲ. ನಾನು ಈ ದೇಹದಲ್ಲಿ ಸಂದೇಹ ರಹಿತನಾಗಬೇಕು; ನಂಬಿಕೆಯನ್ನು ಮೂಡಿಸಿಕೊಳ್ಳಬೇಕು ಎಂಬ ಭಾವ ಅಂಕುರಿಸಿದಾಗ - ನಾನು ಅಂತರಾತ್ಮವೆಂಬ ದೀಪದ ಉತ್ತಮ ಸ್ನೇಹಿತನಾದ ಬತ್ತಿಯಾದೆ. ಬೆಳಕನ್ನು, ಜ್ಞಾನವನ್ನು ಕೊಡುವ 'ಈ-ಬತ್ತಿ' ಅಂದರೆ ವಿಭೂತಿಯಾದೆ. ಆ ಬೆಳಕಿನಲ್ಲಿ, ಜ್ಞಾನದಲ್ಲಿ ಅರಳುವ `ಹೂ-ಬತ್ತಿಯಾದೆ'. ಆ ಜ್ಞಾನವೆಂಬ ಸ್ನೇಹದ ಎಣ್ಣೆಗೆ ಬತ್ತಿಯಾದೆ. ಹೀಗಾಗಿ ಹೂಬತ್ತಿಯಾಗಿ ಎಂದೆಂದೂ ಆರದ- ನಂದಾದೀಪದ ಕುಡಿಯಾದೆ. ಶಾಂತತೆಯ ಮೋಕ್ಷದ ಕೈಪಿಡಿಯಾದೆ. ಆ ಶಾಂತ ತೇಜದ ಉರಿಯಲ್ಲಿ 'ದಿಕ್ಕರಿ' ಅಂದರೆ `ದಿಗ್ಗಜ'ನಾದೆ ಎಂದಿದ್ದಾರೆ.

ಅಧ್ಯಾತ್ಮಿಕ ನಾಯಕತ್ವವನ್ನು ವಹಿಸಿಕೊಂಡ ವಿವೇಕಾನಂದರನ್ನು ಬೇಂದ್ರೆಯವರು 'ದಿಗ್ಗಜ', 'ಕೂರ್ಮ', 'ಆದಿಶೇಷ' ಮೊದಲಾದವರ ಮೂಲಕ ವರ್ಣಿಸಿದ್ದಾರೆ. ಅವರೆಲ್ಲರೂ ಭೂಭಾರವನ್ನು ಹೊತ್ತವರು. ಇಲ್ಲಿ ವಿವೇಕಾನಂದರಾದರೋ ಗುರುವಿನ ಅನುಗ್ರಹದಿಂದ ಲಭಿಸಿದ ಜ್ಞಾನ ಭಾರವನ್ನು ಹೊತ್ತು ಅದನ್ನು ವಿತರಿಸಲೆಂದೇ ಜ್ಞಾನ ಯಾತ್ರಿಕನಾಗಿ ತಮ್ಮ ಬಾಳನ್ನು ಸವೆಸಿದರು.

'ಶೇಷಪಣಾಮಂಡಲ ಸಂಚಾರಿ'-ಶೇಷನ ಎಡೆಯಲ್ಲಿ ಸಂಚಾರ ಮಾಡುವ ಕುಂಡಲಿನೀ ಸರ್ಪ ಸಹಸ್ರಾರಕ್ಕೆ ಬಂದಾಗ ಅದರ ಎಡೆಯಲ್ಲಿ ಸಂಚರಿಸುವವಳು ಜ್ಞಾನಕನ್ಯೆ. ಕೂರ್ಮದ ಬೆನ್ನಲಿ ಕುಣಿಯುವ ನಾರಿ-ಶಕ್ತಿ ಕನ್ಯೆ. ಇವರು ಯಾರು? ಯಾರು? ಎಂದು ಪ್ರಶ್ನಿಸುವಷ್ಟರಲ್ಲಿ ಅವರು ಹಂಸನ ಹಾರಿಕೆ, ಶುಕನ ಸಾರಿಕೆಯಂತೆ ಈ ದೇಹದ ಹಂಸ ತತ್ವದಲ್ಲಿ ಮೂಡಿ ಬಾಂಬೊಳೆಯೊಳು ಹೊಳೆಯುವ ನೀಹಾರಿಕೆಯಂತಿರುವರು. ಅವರು ಆಕಾಶ ಗಂಗೆಯೊಳು ಹೊಳೆಯುವ ಬೆಳಕಿನ ಪುಂಜವಾದ ಜ್ಞಾನ. ಅದು ಭಕ್ತಿ ಹೃದಯವೆಂಬ ನೈದಿಲೆಯಲ್ಲಿ ವಿಹಾರಿಸುತ್ತ ರಾಸಲೀಲೆಯ ಭಂಗಿಯಲ್ಲಿದ್ದು ತನ್ನದೇ ರೂಪಾಂತರದ ಆನಂದದಲ್ಲಿರುವುದು. ಅದು ಜ್ಞಾನತೇಜದ ಬೆಳಕು. ಆ ಬೆಳಕೆ ವಿವೇಕಾನಂದ.

'ಬಾಂಬೊಳೆಯೊಳು ನೀ ಹಾರಿ' ಮುಂತಾದ ಮಾತುಗಳು ವಿವೇಕಾನಂದರು ಅವತಾರ ಪುರುಷರೆಂಬುದನ್ನು ಸೂಚಿಸುತ್ತವೆ. ಅವರು ಜ್ಯೋತಿ ಸ್ವರೂಪರಾಗಿ ಬಾಂಬೊಳೆಯಿಂದ ಇಳಿದು ಬಂದ ಚಿತ್ರ, ಅವರನ್ನು ಕುರಿತ ಜೀವನ ಚರಿತ್ರೆಗಳಲ್ಲಿ ಭವ್ಯವಾಗಿ ಚಿತ್ರಿತವಾಗಿದೆ.

ಆ ಬೆಳಕು ಹೃದಯವೆಂಬ ಕಮಲವನ್ನು ಸೇರಿ ('ಹೃತ್ ಪುಂಡರೀಕ ಸೇರಿ') ಅರಳಿಸುವ ಕ್ರಿಯೆಯಲ್ಲಿ ತೊಡಗಿದ ಶಾಂತ ನಿರ್ಮಲ ತೇಜದ ಪ್ರಭಾತ ಕಿರಣ. ಅಂತಹ ಆನಂದದ ಸಮಯದಲ್ಲಿ ಭೃಂಗಗಳು ಆ ಕಮಲದ ಮಧುವನ್ನು ಸೇವಿಸಲು ಬರುವ ನಾದದಲ್ಲಿ ಆ ಮಧು ಹೀರುವಿಕೆಯೇ ಆನಂದ, ಶ್ರೀರಾಮಕೃಷ್ಣ ಹರಿಯ ಧ್ಯಾನದಲ್ಲಿ ಬಿಲಹರಿ, ಸಾವೇರಿ, ಅಸಾವೇರಿ ರಾಗಗಳಂತೆ ಗುಂಗಿನಲ್ಲಿದ್ದು ತರ್ಕಗಳನ್ನು ಮೀರಿದ ವಿದ್ವಾಂಸನ ರೀತಿಯು ಅಸ್ಮಿತಾನುಸಾರಿಯಾದುದು. ಬುದ್ಧಿವಂತರೆನ್ನುವವರು ವಿಚಾರವಂತರಾಗಿರಬೇಕು ಎನ್ನುವುದು ವಾದ. ಮೊದಲಿನಿಂದ ಬಂದ ವಿಚಾರಗಳ ಸಂದೋಹವನ್ನು ಕಳಚಿ ಒಗೆಯಬೇಕು; ಆನಂದಕ್ಕೆ ವಿಚಾರವಿರಬಾರದು; ಅದು ವಿಚಾರ ರಹಿತವಾಗಿ ಸಾಗಬೇಕು. ಕೆಟ್ಟ ತರ್ಕಗಳನ್ನು ಕಳೆದೊಗೆದು ನಿರ್ವಿಚಾರ ಸೂರಿಯಾಗಬೇಕು.

ಅದು ಅಸ್ಮಿತಾನುಸಾರಿ. ಅದು ಆನಂದಲಹರಿ. ಆ ಆನಂದಲಹರಿಯೇ ವಿವೇಕಾನಂದ.

* * * *

ಶ್ರೀ ಶಾರದಾದೇವಿಯವರು ಶ್ರೀ ರಾಮಕೃಷ್ಣರ ನಿರ್ವಾಣದ ಅನಂತರ ಅವರ ಚಿಂತನೆಗಳನ್ನು ಸಾಕಾರಗೊಳಿಸಲು ಅವರ ಶಿಷ್ಯರ ಪಡೆಯೊಂದಿಗೆ ಸಂಘಟನೆಗೆ ತೊಡಗಿದರು. ಅವರು ಸಾಧನಾಮಾರ್ಗದಲ್ಲಿ ಸಾಗಿ, ತನಗೆ ದೊರಕಿದ ಪತಿಯ ಮಹತ್ವವರಿತು ಅವರ ಅಧ್ಯಾತ್ಮ ಧ್ವನಿಯ ಪ್ರಚಾರದಲ್ಲಿ ತೊಡಗಿದರು. ಭಾರತೀಯ ಸಂಪ್ರದಾಯದ ಕಂಕಣ ಭಾಗ್ಯ, ಕುಂಕುಮ ಪತಿಯ ಸಂಕೇತ. ಶ್ರೀ ರಾಮಕೃಷ್ಣರ ನಿರ್ವಾಣದ ನಂತರವೂ ಅವರು ಕುಂಕುಮ, ಕಂಕಣ ತ್ಯಜಿಸದೆ ಉಳಿಸಿಕೊಂಡರು. ಆ ಹೊಸ ಹಾದಿಯು ಭಾರತೀಯ ಮಹಿಳೆಯರೆಲ್ಲರೂ ಅನುಸರಿಸುವುದಕ್ಕೆ ನಾಂದಿಯಾಯಿತು. ಶ್ರೀ ಶಾರದಾದೇವಿಯವರು ಶ್ರೇಷ್ಠ ಅಧ್ಯಾತ್ಮ ಮಾರ್ಗವನ್ನು ಅನುಸರಿಸುತ್ತ ಅದನ್ನು ಜಗತ್ತಿಗೆ ಸಾರಲು ಶ್ರೀರಾಮಕೃಷ್ಣ ಮಠದ ಪತಾಕೆಯನ್ನು ಹಾರಿಸಿದರು. ಆ ಹಾದಿಯನ್ನು ಹಿಡಿದು ಸಾಗಿದ ವಿವೇಕಾನಂದರು 'ಶ್ರೀ ರಾಮಕೃಷ್ಣ ಹರಿ ಓಂ' ಎಂಬ ಧ್ಯಾನದಲ್ಲಿ ಅದನ್ನೇ ಆಧರಿಸಿ ನಡೆದರು.

ಪಂಚಾಗ್ನಿಗಳ ಮಧ್ಯೆ ಭಕ್ತನಾದವನು ಭಕ್ತಿಯಿಂದ ತಪಸ್ಸನ್ನು ಮಾಡುತ್ತಾನೆ. ದಕ್ಷಿಣ, ಗಾರ್ಹಪತ್ಯ, ಅಹವನೀಯ, ಸಭ್ಯ, ಅವಸತ್ಯ ಎಂಬುವು ಪಂಚಾಗ್ನಿಗಳು. ಅಂತಹ ತಪದಿಂದ ಸಿದ್ಧಿಯನ್ನು ಪಡೆದವನು 'ಪಂಚಾಗ್ನಿ ಸಿದ್ಧ'. ಈ ಪಂಚಾಗ್ನಿಯ ವಿಷಯವನ್ನು ವಿವೇಕಾನಂದರಿಗೆ ವಿಸ್ತರಿಸುವಾಗ ಮತ್ತಷ್ಟು ವಿವರಗಳನ್ನು ನೀಡಬೇಕು. ನಾಲ್ಕು ದಿಕ್ಕಿಗೆ ಅಗ್ನಿಯನ್ನು ಒಟ್ಟಿಕೊಂಡು, ಉರಿಯುವ ಐದನೆಯ ಅಗ್ನಿಯಾದ ಸೂರ್ಯನ ತಾಪವನ್ನು ಲೆಕ್ಕಿಸದೆ ಮಾಡುವ ತಪಸ್ಸಿಗೆ ಪಂಚಾಗ್ನಿ ತಪಸ್ಸು ಎಂದು ಹೆಸರು. ಶಿವನನ್ನು ಪಡೆಯಲು ಗಿರಿಜೆಯು ಈ ಬಗೆಯ ಪಂಚಾಗ್ನಿ ತಪಸ್ಸನ್ನು ಮಾಡಿದಳೆಂದು ಕಾವ್ಯಗಳಲ್ಲಿ ವರ್ಣನೆಯಿದೆ.

ವಿವೇಕಾನಂದರು ಮಳೆಗಾಳಿ ಬಿಸಿಲುಗಳಿಗೆ ಜಗ್ಗದೆ ಅಧ್ಯಾತ್ಮ ಸಾಧನೆಯನ್ನು ಮಾಡಿದರೆಂಬುದು ಈ ಪಂಚಾಗ್ನಿ ಎಂಬ ಮಾತಿನ ಮೂಲಕ ಸೂಚಿತವಾಗಿದೆ.

ಸಭ್ಯತೆ ಎಂಬುವುದು ಪಂಚಾಗ್ನಿಗಳಲ್ಲಿ ಒಂದು. ಅದು ಸುಲಭವಾಗಿ ಸಿದ್ಧಿಸುವುದಿಲ್ಲ. ಸಾಧನೆಯಿಂದ ಅದನ್ನು ಪಡೆಯಬೇಕು. ಅಂತಹದನ್ನು ಸಾಧಿಸಿ 'ಪಂಚಾಗ್ನಿ ಸಿದ್ಧ, ಸಭ್ಯತೆಗೆ ಇವ ಬದ್ಧ' ಎಂಬಂತೆ ರೂಪುಗೊಂಡವರು ವಿವೇಕಾನಂದ. ಅವರು - ನೀವು ದೊಡ್ಡವರು, ಉಳ್ಳವರು ನಮಗೆ ಸ್ವಲ್ಪ ನೀಡಿ - ಎಂದು ಗೌರವ ಪೂರ್ವಕವಾಗಿ ಬೇಡುತ್ತ ಜ್ಞಾನಾರ್ಜನೆ ಮಾಡಿ ಎಂದು ಸಾರಿದರು. ಅವರು ಮಾನವತೆಯ ಮೈಸೇರಿ ಪರಾಕು ಹಾಡಿದಂತಹ ದೇವದೂತ ಎಂಬುದನ್ನು ಬೇಂದ್ರೆಯವರು 'ಪಡಿಹಾರೀ' ಎಂಬ ವ್ಯಂಗ್ಯಾರ್ಥದಲ್ಲಿ ಸೂಚಿಸಿದ್ದಾರೆ.

ಯಾವುದೇ ಪೂರ್ವಯೋಜಿತ ಟಿಪ್ಪಣಿಗಳಿಲ್ಲದೆ, ತನ್ನ ಜ್ಞಾನದ ತೇಜದಿಂದ ಆಗ ಹೊಳೆದ ಸತ್ಯವನ್ನು ಸ್ಫೂರ್ತಿಯಿಂದ ಉಚ್ಚರಿಸುವ ಜ್ಞಾನಿ 'ಸ್ವಚ್ಛಂದ ಉಪನ್ಯಾಸಿ'. 'ಸ್ವಚ್ಛಂದ ಉಪನ್ಯಾಸಿ' ಎಂಬ ಮಾತು ಇಲ್ಲಿ ಗಮನಾರ್ಹ. ಅಮೇರಿಕಾದಲ್ಲಿ ಜಗತ್ತೇ ಕರತಾಡನ ಮಾಡುವಂತೆ ವಿವೇಕಾನಂದರು ಉಪನ್ಯಾಸ ಮಾಡಿದ್ದು ಪ್ರಸಿದ್ಧವಾದ ವಿಚಾರ. ಆ ಹೊತ್ತಿನಲ್ಲೆಲ್ಲ ಅವರು ತಮ್ಮ ಶ್ರೀಗುರುವಿಗೆ ಹತ್ತಿರವಾಗಿದ್ದರು; ತನ್ಮೂಲಕ ಪರಮಾತ್ಮನ ಸಮೀಪದಲ್ಲಿಯೆ ನೆಲೆಸಿದ್ದರು. ಆ ಪರಮಾತ್ಮನಿಗೆ ತನ್ನನ್ನು ಸಮರ್ಪಿಸಿಕೊಂಡಿದ್ದರು. 'ಉಪ' ಎಂದರೆ 'ಸಮೀಪ', 'ನ್ಯಾಸಿ' ಎಂದರೆ 'ಸಮರ್ಪಿಸಿಕೊಂಡವನು' ಎಂಬ ಅರ್ಥಗಳನ್ನಿಲ್ಲಿ ಸ್ವೀಕರಿಸಬೇಕು. ಅಂತಹ ಸ್ವಚ್ಛಂದ ಉಪನ್ಯಾಸಿಯಾದ ವಿವೇಕಾನಂದರು ಅಧ್ಯಾತ್ಮದ ಅರಿವಿನಲ್ಲಿ 'ಓಂ ತತ್' ನ ಗತ್ತಿನಲ್ಲಿ ನಡೆದು ಈ ನವಯುಗದಲ್ಲಿ ಮಾನವೀಯ ಧರ್ಮಕ್ಕಾಗಿ ನಡೆಮಡಿ ಹಾಸಿದರು.

"ಸಂಗಚ್ಛಧ್ವಂ ಸಂವದಧ್ವಂ ಸಂವೋಮನಾಂಸಿ ಜಾನತಾಂ
ದೇವಾಭಾಗಂ ಯಥಾ ಪೂರ್ವೇ ಸಂಜಾನಾನಾ ಉಪಾಸತೇ"

ಋಗ್ವೇದದ 'ಜೊತೆ ಜೊತೆಗೆ ನಡೆಯಿರಿ ಜೊತೆಗೆ ಪಾಠ ಮಾಡಿರಿ, ಒಬ್ಬರೊಬ್ಬರ ಮನಸ್ಸನ್ನು ತಿಳಿದುಕೊಳ್ಳಿ, ಮೊದಲಿನಿಂದ ನಡೆದಂತೆಯೇ ಧ್ಯಾನಿಗಳಾಗಿ' ಎಂಬುದೇ ವಿಶ್ವದ ಒಳಿತಿನ ಮಾನವಧರ್ಮ. ಈ ಚಿಂತನೆ ಕನ್ನಡದ ಮಕ್ಕಳ ನಾಲಗೆಯಲ್ಲಿ ನಲಿಯಲಿ, ಅವರ ಮನದುಂಬಿ ಅವರು ಬೆಳಗಲಿ ಎಂದು ಬೇಂದ್ರೆಯವರು ಅದನ್ನು ಸರಳವಾಗಿ ಹೀಗೆ ಕನ್ನಡಿಸಿದ್ದಾರೆ:

'ಕೂಡಿ ಓದಿ ಕೂಡಾಡಿ ಅರಿಯೋಣ ಕೂಡಿ ಕೂಡಿ
ಕೂಡಿ ತಿಂದು ಕೂಡುಂಡು ಕುಡಿದು ದುಡಿಯೋಣ ಕೂಡಿ ಕೂಡಿ
ಕೂಡಿ ನಡೆದು ಒಡಗೂಡಿ ಪಡೆದು ನುಡಿ ಹೇಳಿ ಕೇಳಿ ಕೂಡಿ
ಕೂಡಿ ಬೆಳೆದು ಬೆಳಗೋಣ ದೇವರೊಲು ಕೂಡಿ ಕೂಡಿ ಕೂಡಿ.'[1]

ಆ ಆಲೋಚನೆಯನ್ನು ಯಜ್ಞದ ಭಾಗವಾದ ಕರ್ಮ 'ಅಧಿಯಜ್ಞ' ಕರ್ಮದಂತೆ ಅನುಸರಿಸಿ ಇಡೀ ವಿಶ್ವವೇ ಒಂದಾಗಿ ನಡೆಯಲಿ ಎಂದು ಅದನ್ನು `ಶಿವಶಕ್ತಿ'ಯನ್ನು ಹೊರುವ ವೃಷಭ ಧರ್ಮವೆಂದು ನಡೆದವರು ವಿವೇಕಾನಂದ. ಹೀಗಾಗಿ ಇದು ಶಾಂತ ವೀರನ ಕಥೆ, ಪ್ರಗಾಥೆ. ಸಹೃದಯನನ್ನು ಸೂರೆಗೊಳ್ಳುವ ಛಂದಸ್ಸನ್ನು ಹೊಂದಿದ ಅಂತಃಕರಣದ ಹಾಡು. ಇದು ಜ್ಞಾನದ ಜೊನ್ನವಕ್ಕಿಯಾದ ಚಕೋರಿಯ ಗಾನ. ಇದು ಸಾಮವೇದದ ಋಕ್ಕುಗಳ ಗಾಯನ. ನಮ್ಮ ಭಾರತೀಯ ಪರಂಪರೆಯಲ್ಲಿ ರೂಪಕಗಳ ನಾಯಕರನ್ನು ವರ್ಣಿಸುವಲ್ಲಿ 'ಧೀರಶಾಂತ' ಎಂಬೊಂದು ಪ್ರಭೇದದ ಉಲ್ಲೇಖವಿದೆ. ಅವನು ಧೀರನೂ ಶಾಂತನೂ ಆಗಿರುತ್ತಾನೆ. ಅಧ್ಯಾತ್ಮ ಜ್ಞಾನ ಪ್ರಾಪ್ತಿಗೆ ಈ ಧೀರ ಶಾಂತತ್ವ ಅತ್ಯಂತ ಅಗತ್ಯವಾದುದು. ವಿವೇಕಾನಂದರು ಅಧ್ಯಾತ್ಮ ಕ್ಷೇತ್ರದ ಧೀರ ಶಾಂತನಾಯಕರಾಗಿ ಮುನ್ನಡೆದರೆಂಬುದು ಬೇಂದ್ರೆಯವರು ಹೇಳುವ 'ಶಾಂತವೀರ -ಗಾಥಾs' ಎಂಬ ಮಾತಿನ ಮೂಲಕ ಪ್ರಕಟವಾಗಿದೆ.

**ಕಠೋಪನಿಷತ್ತಿನಲ್ಲಿ:**

---

1. ದ.ರಾ. ಬೇಂದ್ರೆ, ಗಂಗಾವತರಣ, ಶ್ರೀಮಾತಾ ಪ್ರಕಾಶನ, ಧಾರವಾಡ ೧೯೫೧, ಪು. ೯೭.

'ಕಶ್ಚಿದ್ಧೀರಃ ಪ್ರತ್ಯಗಾತ್ಮಾನ ಮೈಕ್ಷ-
ದಾವೃತ್ತ ಚಕ್ಷುರ ಮೃತತ್ವ ಮಿಚ್ಛನ್'[1]

-ಯಾವನೊ ಒಬ್ಬ ವಿವೇಕಿಯು ಅಮೃತತತ್ವವನ್ನು ಬಯಸುತ್ತ ಚಕ್ಷುಸ್ಸನ್ನು ಹಿಂತಿರುಗಿಸಿ ಪ್ರತ್ಯಗಾತ್ಮನನ್ನು ನೋಡುತ್ತಾನೆ -ಎಂಬ ಮಾತು ಈ ಹಿನ್ನೆಲೆಯಲ್ಲಿಯೇ ಬಂದಿದೆ.

ಅಂತಹ ಶಾಂತವೀರ ಜ್ಞಾನಯೋಗಿ ವಿವೇಕಾನಂದರನ್ನು 'ಓಂ'ನ ಧ್ಯಾನದಂತೆ ಮನನ ಮಾಡುತ್ತ ಅವರಲ್ಲಿಯೇ ತನ್ನ ಉಸಿರು ಲೀನವಾಗಿದೆಯೆಂದು ಅಂಬಿಕಾತನಯರು ನುಡಿದಿದ್ದಾರೆ. ಹೀಗೆ ನುಡಿಯುತ್ತ ಆ ವಿವೇಕಾನಂದದ ಪ್ರಣವನಾದದಲ್ಲಿ ತಾನು ಒಂದಾಗಿರುವುದನ್ನು 'ಇದಕೇನಿದೆ ಅನುಮಾನ?' ಎಂದು ಪ್ರಶ್ನಿಸಿ, ಆ ಆನಂದ ನಂದಿಯ ಧ್ಯಾನವೇ ಸಾರ್ಥಕ ಎಂಬ ಭಾವದಲ್ಲಿ ಬೇಂದ್ರೆಯವರು-ತಾವು ಆ ಧ್ಯಾನದಲ್ಲಿ ಒಂದಾದುದನ್ನು ಪ್ರಶ್ನಿಸುವುದಕ್ಕೆ ತೆರೆ ಎಳೆದಿದ್ದಾರೆ.

'ಶ್ರೀ ವಿವೇಕಾನಂದ ಶಿಖರ-ಪ್ರಗಾಥಾ'ವು ವಿವೇಕಾನಂದತ್ವವನ್ನು ಹೊಂದುವುದರ ಹಾಡಾಗಿದೆ. ಅಂಬಿಕಾತನಯರೂ ಸಹ ಆ ವಿವೇಕಾನಂದತ್ವವನ್ನು ಪಡೆಯಲು ಮನಃಪೂರ್ವಕವಾಗಿ 'ಎದೆ ಉಸಿರ ತುತ್ತು, ಮೂರೂ ಹೊತ್ತು' ಆನಂದಮಯವಾಗಿ ಶಿವಶಕ್ತಿಯನ್ನು ಹೊರುವ ವೃಷಭಧ್ವಜ ಎತ್ತು ಆಗಲು ಸದಾಸಿದ್ಧನಿರುವೆ ಎಂದಿದ್ದಾರೆ. ಈ ಕಾವ್ಯದಲ್ಲಿ ವಿವೇಕಾನಂದರ ಜೊತೆ ಕವಿಯ ಒಂದು ಸಮ್ಮಿಲನ, ಸಮೀಕರಣದ ಭಾವಲಹರಿ ಇದೆ.

* * *

1. ಕಠೋಪನಿಷತ್, ಶ್ರೀರಾಮಕೃಷ್ಣಾಶ್ರಮ, ಮೈಸೂರು ೧೯೯೬, ಪುಟ - ೫೫

# ೬. ಬ್ಯಾಬೆಲ್

ಕಳಘುಮೋ? ಕಾಳಗವೋ? ತ್ರಿಕುಳ ಸಂಘದ ಕೂಟ ?
ಹರಿ-ಹರೀ! ಹರ-ಹರಾ! ಭಕ್ತಿಮೋಕ್ಷದ ಯುದ್ಧ?
ಕಾದಾಡುವಿಬ್ಬರಲಿ ಯಾರು ಎಚ್ಚರ ಇದ್ದ ?
ರಾಮ ರಾವಣಗಾಗಿ ವಾನರರ ಕಾದಾಟ.

ಕೇರಳಕು ಕುಂತಳಕು ದುಷ್ಟ ಬುದ್ಧಿಯ ಗಂಟು;
ಕಮ್ಮೆ, ಅದಕೊಮ್ಮೆ, ಇದಕೊಮ್ಮೆ, ಎರುಮ್ಮೆ ನಾಥು
ಶಬರ-ಆಂದ್ರ-ಪುಂಡ್ರ-ಪುಲ್ಕಸ ಜೋಡು
ಆದಿ ಆ ಹಾದಿ ದ್ರಾವಿಡಕೆ ಎಲ್ಲೂ ಉಂಟು.

ಬಂಗಾರ ಲಂಕೆಗೂ ಇಲ್ಲದಾಯಿತೆ ಬಾಯಿ ?
ಮಂಡೋದರಿಯ ಮಾಯೆ ಮಾಯವಾಯಿತೆ ಮಾಗಿ ?
ಕಿಂಕ್ರಾಂತಿಕಾಗಿ ಪೌಲಸ್ತ್ಯ ಪಿಂಡಕ್ಕಾಗಿ-
ರಾವಣನ ತೋಟದಲಿ ಮಂಗಮೋತಿಯ ಕಾಯಿ !

ಬ್ಯಾಬೆಲ್ಲ ಗೋಪುರದ ಒಳಗೆ ಸದ್ದೋ ಸದ್ದು
ಬೇಡುವೇಡರ ಬೇಂಟೆ ಇದು 'ವಾಂಡು' ಅದು 'ಒದ್ದು'.

ಆಕರ: ದ.ರಾ.ಬೇಂದ್ರೆ, ನಾಕುತಂತಿ, ಡಾ|| ವಾಮನ ಬೇಂದ್ರೆ, (ಸಂ.) ಅಂಬಿಕಾತನಯದತ್ತ ವೇದಿಕೆ, ಶ್ರೀಮಾತಾ ಪ್ರಕಾಶನ, ಧಾರವಾಡ ೧೯೯೭, ಪು. ೩೭

# ಬ್ಯಾಬೆಲ್

'ಬ್ಯಾಬೆಲ್' ಒಂದು ವ್ಯಂಗ್ಯಾತ್ಮಕವಾದ, ಹಾಸ್ಯ ಪ್ರಜ್ಞೆಯಿಂದ ಕೂಡಿದ ಕಾವ್ಯ. ಬೈಬಲ್‌ನ ಪ್ರಕಾರ ಬ್ಯಾಬೆಲ್ ಒಂದು ಪುರಾತನ ನಗರವಾಗಿದ್ದು, ಅದು ಈಗಿನ ಬ್ಯಾಬಿಲೋನ್ ಆಗಿದ್ದಿರಬಹುದು ಎಂಬ ಅಭಿಪ್ರಾಯವಿದೆ. ಬ್ಯಾಬೆಲ್ ನಗರದ ಜನ ಒಂದು ಗೋಪುರವನ್ನು ಕಟ್ಟಿ ಅದನ್ನು ಏರಿ ಸ್ವರ್ಗದ ದೇವರನ್ನು ಕಾಣುವ ಯೋಚನೆ ಹೊಂದಿದ್ದರು. ಅಂತಹ ಕಲ್ಪನಾ ಭಾವವನ್ನು ಶಿಕ್ಷಿಸಲು ದೇವರು ಆ ಗೋಪುರದ ಕೆಲಸಗಾರರು ಒಬ್ಬರು ಇನ್ನೊಬ್ಬರನ್ನು ಅರ್ಥಮಾಡಿಕೊಳ್ಳದಂತೆ ಮಾಡಿದ. ಹಾಗಾಗಿ ಅವರು ಅದನ್ನು ಪೂರ್ಣಗೊಳಿಸಲಾಗಲಿಲ್ಲ ಎಂಬ ನಂಬಿಕೆಯ ಕಥೆ ಇದೆ.

ಆ 'ಬ್ಯಾಬೆಲ್ ಗೋಪುರ'ವನ್ನು ರೂಪಕವಾಗಿಟ್ಟುಕೊಂಡು ಒಬ್ಬರು ಇನ್ನೊಬ್ಬರನ್ನು ಅರ್ಥಮಾಡಿಕೊಳ್ಳದಂತೆ ಕಾದಾಡುತ್ತಿರುವ ದ್ರಾವಿಡರನ್ನು ಕುರಿತು ಬೇಂದ್ರೆ ಈ ಕವನ ರಚಿಸಿದ್ದಾರೆ. ದ್ರಾವಿಡ ಪಂಚಕಗಳಾದ ತಮಿಳು, ಕನ್ನಡ, ತೆಲುಗು, ಮಲೆಯಾಳಂ ಮತ್ತು ತುಳು ಭಾಷೆಯನ್ನಾಡುವ ಜನರಲ್ಲಿ ಐಕ್ಯತೆಯಿಲ್ಲ. ಒಬ್ಬರು ಆಡುವ ಭಾಷೆ ಇನ್ನೊಬ್ಬರಿಗೆ ಅರ್ಥವಾಗುವುದಿಲ್ಲ. ಅವರು ದ್ರಾವಿಡಮೂಲದವರು ತಾವೆಂದು, ಭಾವನಾತ್ಮಕವಾಗಿಯಾದರೂ ತಾವು ಒಂದು ಎಂದು ತಿಳಿದು ನಡೆಯದೆ 'ಅಹಂ' ಭಾವದಲ್ಲಿ ಮೆರೆಯುತ್ತಿರುವರು. ಅವರ ಪರಸ್ಪರ ಅಪಾರ್ಥ ಭಾವವೇ ಅವರ ಪ್ರಗತಿಗೆ ಮುಳುವಾಗಿದೆ ಎಂಬುದನ್ನು ಬೇಂದ್ರೆಯವರು ಹಾಸ್ಯದ ಲೇಪದೊಡನೆ ಬಣ್ಣಿಸಿದ್ದಾರೆ.

**ಈ ಕಾವ್ಯದ ಮೊದಲ ಸಾಲಿನ 'ಕಳಘಮೋ?ಕಾಳಗವೋ? ತ್ರಿಕುಳ ಸಂಘದ ಕೂಟ?'** ಎಂಬ ನುಡಿಗಳು ಅರ್ಥವಾಗದ್ದರ, ಅತಿ ಪ್ರಶ್ನೆಗೆ ಒಳಗಾಗುವ, ಹಲವು ಅರ್ಥಗಳನ್ನು ಒಳಗೊಂಡದ್ದರ ಸೂಚನೆ. ಅದು ಈ ಕಾವ್ಯದ 'ಬ್ಯಾಬೆಲ್' ನ ಧ್ವನಿ. ಈಗ 'ಕಳಘ' ಪದಕ್ಕೆ ತಮಿಳಿನಲ್ಲಿ ಸಂಘ ಎಂಬ ಅರ್ಥವಿದ್ದರೂ, ತಿರುಕ್ಕುರಳ್ ಸಾಹಿತ್ಯದಲ್ಲಿ 'ಪುಂಡರು ಸೇರುವ ಸ್ಥಳ' ಎಂಬ ಅರ್ಥವನ್ನು

ಹೊಂದಿತ್ತು. ತ್ರಿಕುಳ ಸಂಘ ಮೂಲದಲ್ಲಿ 'ಮುಕ್ಕುಲತ್ತಾರ್' ಎಂಬ ಮೂರು ಕುಲವಾದ ದೇವರ್, ಮರವರ್, ಕಳ್ಳರ್ ಎಂಬ ಕಾದಾಡುವವರ ಗುಂಪಾಗಿತ್ತು. ಆ ಬಗೆಯ ದ್ರಾವಿಡ ಸಂಘಟನೆಯೆ ಈ ಕಳಗ? ಎಂದು ಹಾಸ್ಯದ ಲಹರಿಯನ್ನು ಬೇಂದ್ರೆ ಹರಿಸುತ್ತ - ಪದದ ಅರ್ಥದ ಮೂಲಕ್ಕೆ ಹೋಗಿ ನಕ್ಕು - ತಮ್ಮ ಪದಗಳನ್ನು ಪರಸ್ಪರರು ತಿಳಿಯದೆ ಕಾದಾಡುವ ದ್ರಾವಿಡರನ್ನು ಚಿತ್ರಿಸಿದ್ದಾರೆ.

ಕನ್ನಡದಲ್ಲಿರುವ ಕ, ಖ, ಗ, ಘ, ನಾಲ್ಕೂ ಅಕ್ಷರಗಳಿಗೆ ತಮಿಳಿನಲ್ಲಿ 'ಕ' ಎಂಬ ಒಂದೇ ಅಕ್ಷರ ಬರಹದಲ್ಲಿ ಬಳಕೆಯಾಗುತ್ತದೆ. ಎರಡು ಸ್ವರ ದನಿಗಳ ನಡುವೆ ಬರುವ 'ಕ' ವನ್ನು 'ಗ'ವಾಗಿಯೂ, ಅಥವಾ 'ಹ' ಆಗಿಯೂ ಉಪಯೋಗಿಸುತ್ತಾರೆ. ಇಲ್ಲಿಯ 'ಕಳಘ' ಪದವೇ ತನ್ನಲ್ಲಿ ಕಳ-ಯುದ್ಧ ಭೂಮಿಯನ್ನು ಕಾಳಗವನ್ನು ಹುದುಗಿಸಿಕೊಂಡು ಅದೇ ಗುಂಪುಗಳಾಗಿ ಕಾದಾಟಕ್ಕೆ ಕಾರಣವಾಗುವುದು - ಪ್ರಶ್ನೆಗಳನ್ನು ಹೊತ್ತ ಈ ಪದಗಳ ವ್ಯಂಗ್ಯಾರ್ಥ. ಅದೇ 'ಕಳಘ' ಪದ ಕನ್ನಡಿಗರ ಉಚ್ಚಾರಣೆಯಲ್ಲಿ 'ಕಳಗ'. ನಮ್ಮ ಜನಪದರಲ್ಲಿ 'ಕಳಗ ಕಿತ್ಕೊಂಡು ತಲೆಗ್ಹೊಡೀತೀನಿ' ಎಂಬ ನುಡಿಗಟ್ಟಿದೆ. ಎತ್ತಿನ ಗಾಡಿಯ ಎರಡು ಪಕ್ಕದಲ್ಲೂ ಇರುವ ಪಾರಿಗಳಿಗೆ ಮೊಳದ ಅಂತರದಲ್ಲಿ ಎಜ್ಜ (ರಂಧ್ರ) ಗಳನ್ನು ಮಾಡಿ, ಅದಕ್ಕೆ ತೋಳುದ್ದದ ಬಿದಿರು ಗೂಟಗಳನ್ನು ಹಾಕುತ್ತಾರೆ. ಅದರ ಆಧಾರಕ್ಕೆ ಎರಡೂ ಪಕ್ಕದಲ್ಲಿ ಹಲಗೆಗಳನ್ನು ಒರಗಿಸಿ ಕಟ್ಟುತ್ತಾರೆ. ಆಗ ಗೋಡು ಗೊಬ್ಬರ ಹೊರಚೆಲ್ಲುವುದಿಲ್ಲ. ಹೀಗೆ ಸಿಕ್ಕಿಸಿದ ಗೂಟವೇ 'ಕಳಗ'. ಜನಪದ ಭಾಷೆಯ ಒಳಭಾವ ಮತ್ತು ಸತ್ವ ಅರಿತ ಬೇಂದ್ರೆಯವರು ಕಾಳಗಕ್ಕೆ ಪ್ರತಿಮೆಯಾಗಿ 'ಕಳಗ'ವನ್ನು ಸಮರ್ಥವಾಗಿ ಬಳಸಿದ್ದಾರೆ. 'ಕಳಗ'ವೇ 'ಕಾಳಗ'ಕ್ಕೆ ಮೂಲವಾಗಿರುವುದನ್ನು ಕಂಡಾಗ 'ಕಾಳಗ' ಪದದ ವ್ಯುತ್ಪತ್ತಿಯ ಬಗ್ಗೆ ಭಾಷಾ ಪಂಡಿತರು ಆಲೋಚನೆಗೆ ತೊಡಗಬೇಕಾಗುತ್ತದೆ.

'ಮುನ್ನೇತ್ರ' ಎಂಬ ಸಂಘಟನೆಯ ಹೆಸರು ಬೇಂದ್ರೆಯವರಿಗೆ 'ತ್ರಿಕುಳ'ವೆನಿಸಿದೆ. ಮುನ್ನೇತ್ರವು ಏಳಿಗೆಗಾಗಿರುವ ಎಂಬ ಅರ್ಥವನ್ನು ಹೊಂದಿದೆ.

ಅದೇ ಪದ ಒಂದೊಂದು ಗುಂಪಿನ ಏಳಿಗೆಯೆಂದು ತೀವ್ರವಾಗಿ ಪರಿಭಾವಿಸಿಕೊಂಡು ಕಾದಾಟಕ್ಕೆ ಕಾರಣವಾಗುವುದು 'ಕಳಗಂ'ನ ದೋಷ. ಆ 'ಮುನ್ನೇತ್ರ' ಪದ ಬೇಂದ್ರೆಯವರನ್ನು ತ್ರಿನೇತ್ರ ಮತ್ತು ವಿಷ್ಣುವಿನ ಬಗ್ಗೆ ಯೋಚಿಸುವಂತೆ ಮಾಡಿದೆ. ಭಾರತೀಯ ಕಲ್ಪನೆಯ ಹರಿಹರ ದೇವತೆಗಳನ್ನು ಕುರಿತ ಹಗರಣ ನಮ್ಮಲ್ಲಿ ದ್ವೇಷದ ಬೀಜಕ್ಕೆ ಕಾರಣವಾಗಿದೆ. 'ಇ'ಕಾರ ಮತ್ತು 'ಅ'ಕಾರದ ಬೆನ್ನು ಹತ್ತಿ ನಿಜದೇವರನ್ನು ತಿಳಿಯಲಾಗದೆ, ಧರ್ಮದ ವಿಂಗಡಣೆ ಮಾಡಿಕೊಂಡು ಕಚ್ಚಾಡುವ ಜನರನ್ನು ಕಂಡು ಕವಿ ನೊಂದಿದ್ದಾರೆ.

'ಹರಿ ಮೇಲು, ಹರ ಮೇಲು
ಬರಿಯ ಬರಹದ ಸಾಲು,
ಕಾಗುಣಿತ ತಿದ್ದಿಡಲು - ಬಳ್ಳಿ ಬದುಕೇ?
ಎರಡೆಂದು - ಅದು ಒಂದು,
ಎರಡೊಂದು - ಎಂದೆಂದು,
ಅಂಕಿಮಗ್ಗೆಯ ಕುಣಿತ ಬೇಕೆ ಇದಕೆ?'[1]

'ಶಿವನೆ ಹೆಚ್ಚಿನ ದೈವವೆಂದು, ನಾರಾಯಣನೇ ಹೆಚ್ಚಿನ ದೈವವೆಂದು ಒಂದು ತಿಕ್ಕಾಟವು ದಕ್ಷಿಣದ ಇತಿಹಾಸದಲ್ಲಿ ಬಹು ಪ್ರಾಚೀನ ಕಾಲದಿಂದ ಬಂದಿದೆ'[2] ಎಂದು ಅವರು ನುಡಿದಿದ್ದಾರೆ. ಆ ಹರಿಹರದ ಪ್ರತಿಷ್ಠೆಯ ಕಾರಣದಿಂದ `ಭಕ್ತಿ ಮೋಕ್ಷದ ಯುದ್ಧ'ವಾಡಿದ್ದಾರೆ. ಮೋಕ್ಷ ಎಂಬುವುದು ಬಿಡುಗಡೆಯ, ವಿಮೋಚನೆಯ ಮುಕ್ತ ಭಾವ. ಅದಕ್ಕೆ ಭಕ್ತಿಯೊಂದೇ ಊರುಗೋಲು. ಭಕ್ತಿ ಪ್ರತಿಯೊಬ್ಬರ ಅಂತರಂಗದ ನಂಬಿಕೆಗೆ ಸೇರಿದ್ದು. ಅದಕ್ಕಾಗಿ ಯುದ್ಧ ಸಲ್ಲದು. ಆ ಎಚ್ಚರ ಎರಡು ಗುಂಪಿಗೂ ಇಲ್ಲ. ಎಚ್ಚರ ಸ್ನೇಹದ ಸೂಕ್ಷ್ಮವಾದ ಪ್ರೀತಿಯ

---

1. ದ.ರಾ. ಬೇಂದ್ರೆ, 'ಮೂರ್ತಿ ಮತ್ತು ಕಾಮಕಸ್ತೂರಿ', ಪ್ರತಿಭಾ ಮುದ್ರಣ, ಧಾರವಾಡ ೧೯೫೫, ಪುಟ - ೧೨.
2. ದ.ರಾ. ಬೇಂದ್ರೆ, 'ಸಾಹಿತ್ಯದ ವಿರಾಟ್ ಸ್ವರೂಪ', ಸಮಾಜ ಪುಸ್ತಕಾಲಯ, ಧಾರವಾಡ ೧೯೭೪ ಪುಟ - ೮೨೯.

ಸೆಲೆ. ಅಂತಹ ಎಚ್ಚರ ಎರಡು ಗುಂಪಿಗೂ ಇಲ್ಲ. ಆ ಬಗೆಯ ಅರ್ಥರಹಿತ ಕಾದಾಟದಲ್ಲಿ ಮುಖ್ಯರಾದ ನಾಯಕರಿಗೋಸ್ಕರ ಶ್ರೀಸಾಮಾನ್ಯ-ಅಮಾಯಕರು ಬಲಿಯಾಗುವರು ಎಂಬುದನ್ನು ಬೇಂದ್ರೆಯವರು 'ರಾಮರಾವಣಗಾಗಿ ವಾನರರ ಕಾದಾಟ' ಎಂದು ಬಣ್ಣಿಸಿದ್ದಾರೆ.x

ಬೇಂದ್ರೆಯವರು ಎರಡನೆಯ ನುಡಿಯಲ್ಲಿ ದ್ರಾವಿಡರು ತಮ್ಮ ತಮ್ಮ ಪ್ರಾಂತ್ಯ ಮತ್ತು ಭಾಷೆಯನ್ನು ಪ್ರತ್ಯೇಕವೆಂದು ತಿಳಿದು ವ್ಯರ್ಥವಾಗಿ ಬಡಿದಾಡುವ ರೀತಿಯನ್ನು ಹಲವು ಬಗೆಯಲ್ಲಿ ಹಾಸ್ಯಲೇಪದೊಡನೆ ವರ್ಣಿಸಿದ್ದಾರೆ.

---

x ಬೇಂದ್ರೆಯವರು ಹರಿಹರ ಹಗರಣದ ನೋವಿನಿಂದ ಬಳಲಿದವರಾಗಿ ದೈವದ ನಿಜ ಅರಿವನ್ನು ಕಾವ್ಯಮುಖೇನ ಜನರಿಗೆ ತಿಳಿಯ ಹೇಳಲು ಪ್ರಯತ್ನಿಸಿದ್ದಾರೆ. ಪ್ರಕೃತಿಯಿಂದ ದೈವದ ಕಲ್ಪನೆಯನ್ನು ಮೂಡಿಸಿಕೊಂಡ ಮಾನವನಿಗೆ ಅದು ತಿಳಿಯಲೆಂದು ಕಾವ್ಯಧಾರೆ ಹರಿಸಿದ್ದಾರೆ.

'ಹರ ಪ್ರಸ್ತರ ಗುಡ್ಡಾ
ನಿಂತಿರತಽದ - ಹಿಮಾಲಯ!
ಹರಿ-ನೀರು-ಹೊಳೀ-ಹೋಳ ಹೋಳು
ನಡೆದಿರತಽದ - ಗಂಗಾ ಯಮುನಾ'
('ಅ-ಉ-ಮ ಸಂವಾದ' - ಇದು ನಭೋವಾಣಿ)

'ಹರಿ' ಎನ್ನುತ್ತಿದೆ ಹೃದಯದ ಒಲವು
'ಪ್ರಸ್ತರ' ಆಗಿದೆ ಗುಡ್ಡದ ನಿಲವು.
ಹೊಳೆ ತುಂಬುತ್ತಿದೆ ಕಡಲಿನ ಒಡಲು
ಗುಡ್ಡವ ನೆರೆವುದು ಇಳಿಮಳೆ ಸಿಡಿಲು.
('ಹರಿಹರ ಸಾಮರಸ್ಯ' - ಇದು ನಭೋವಾಣಿ)

ಪ್ರಕೃತಿಯನ್ನು ದೇವರಾಗಿ ಕಂಡ ಒಂದೊಂದು ಉನ್ನತ ಭಾವವೂ ತನ್ನ ಕಲ್ಪನೆಯಲ್ಲಿ ಹರಿಯೆಂದು, ಹರನೆಂದು ರೂಪಿಸಿಕೊಂಡಿದೆ. ನಿಸರ್ಗದಲ್ಲಿರುವ ಸಾಮರಸ್ಯದಿಂದ ದೈವವನ್ನು ತನಗೆ ಕಂಡಂತೆ ರೂಪಿಸಿಕೊಂಡ ಮನುಷ್ಯರು ಶಾಂತವಾಗಿ ಯೋಚಿಸಿ ಅದರ ಮೂಲವನ್ನು ಅರಿತು ಸಮರಸಭಾವದಿಂದಿರಬೇಕು. ಸ್ನೇಹ, ಸಹಿಷ್ಣುತೆಯ ಸೆಲೆಯಲ್ಲಿ ಸಮರಸ ಭಾವವಿದೆ. ಜೀವಪೋಷಕ ಪ್ರಕೃತಿಯನ್ನು, ಹರ, ಹರಿ, ಎನ್ನಬಹುದು ಎಂಬುದು ಬೇಂದ್ರೆಯವರ ದೈವದ ಬಗೆಗಿನ ಸ್ಪಷ್ಟ ನಿಲುವು.

'ಹರ' ಅನ್ನು 'ಹರಿ' ಅನ್ನು ಅನ್ನಬಹುದಲ್ಲಾ.
(ಅರಳು ಮರಳು)

ಕಾಸರಗೋಡಿನ ಸಮಸ್ಯೆ ಕರ್ನಾಟಕ ಮತ್ತು ಕೇರಳ ರಾಜ್ಯಗಳ ನಡುವೆ ಇದೆ. ಅದನ್ನು ಅವರು 'ಕೇರಳಕು ಕುಂತಳಕು ದುಷ್ಟ ಬುದ್ಧಿಯ ಗಂಟು' ಎಂದಿದ್ದಾರೆ.

ದ್ರಾವಿಡರ ಒಂದೊಂದು ಭಾಷೆಯಲ್ಲಿಯೂ ಕೆಲವು ಪದಗಳು ಹಲವು ಅರ್ಥಗಳನ್ನು ಒಳಗೊಂಡಿರುತ್ತವೆ. ಒಂದೇ ಪದ ಒಬ್ಬರನ್ನು ಪ್ರತಿಷ್ಠಿತರೆಂದು ಮತ್ತೊಬ್ಬರನ್ನು ಸಾಧಾರಣವೆಂದು ವರ್ಗೀಕರಿಸಿ ತೊಡಕನ್ನುಂಟು ಮಾಡುವುದನ್ನು ಬೇಂದ್ರೆಯವರು ಹಾಸ್ಯಮಯವಾಗಿ ಬಣ್ಣಿಸಿ ಕಚಗುಳಿ ಇಡುತ್ತಾರೆ. ತೆಲುಗಿನಲ್ಲಿ `ಕಮ್ಮ' ಪದ ಒಂದು ಅರ್ಥದಲ್ಲಿ ಬ್ರಾಹ್ಮಣರಲ್ಲಿರುವ ಎಂಟು ಕುಲದಲ್ಲಿ ಒಂದು ಎಂದು, ಇನ್ನೊಂದು ಅರ್ಥದಲ್ಲಿ ಬೇಸಾಯವನ್ನೇ ಅವಲಂಭಿಸಿದ ತೆಲುಗು ಶೂದ್ರರಾದ ರೈತಾಪಿ ಜನರನ್ನು ಉದ್ದೇಶಿಸಿ ಬಳಕೆಯಾಗುತ್ತಿದೆ. ಹೀಗಾಗಿ ಆ ಪದ 'ಅದಕೊಮ್ಮ ಇದಕೊಮ್ಮ' ತನ್ನ ಅರ್ಥವನ್ನು ಹೊಮ್ಮಿಸುತ್ತಿರುತ್ತದೆ. ಅದು ವಿವೇಚನಾರಹಿತವಾದ ಒರಟು ಜಗಳಕ್ಕೂ ಕಾರಣವಾದರೆ, ಆಗ ಆ ಜನ ಆ ಪದದಲ್ಲಿಯೇ ಅಡಗಿರುವ 'ಎಮ್ಮ'ಯಂತಾಗುವರು!

ಅದೇ 'ಎಮ್ಮೆ' ಪದವನ್ನು ಹೊಂದಿದ ಮೈಸೂರು ಮಹಿಷಮರ್ಧಿನಿಯ ಊರೆಂದು ತನ್ನ ಹೆಸರನ್ನು ರೂಪಾಂತರಿಸಿಕೊಂಡು ಹೆಮ್ಮೆ ಪಟ್ಟರೂ - ತಮಿಳಿನವರು 'ಎರುಮೈನಾಡು' ಅರ್ಥಾತ್ 'ಎಮ್ಮೆಯ ನಾಡು' ಎಂದು ಕರೆದರೆ - ಜಗಳಕ್ಕೆ ಅಷ್ಟೆ ಸಾಕಾಗುತ್ತದೆ. ಹೀಗೆ ಪ್ರತ್ಯೇಕ ಪ್ರಾಂತ್ಯ ಮತ್ತು ಭಾಷೆಯ ಜನ ತನ್ನ ಮೂಲ ಭಾಷಾರೂಪದಲ್ಲಿ ಭಾವವನ್ನು ಅಭಿವ್ಯಕ್ತಿಸಿದರೂ ಅದು ಇನ್ನೊಬ್ಬರಿಗೆ ಕೀಳೆನಿಸಿ ಅಪಾರ್ಥವಾಗುವ ಗೌಜು ಇದೆ. ಈ ಬಗೆಯ ಗಲಿಬಿಲಿಯನ್ನು ಹೊರತುಪಡಿಸಿ ನೋಡಿದರೆ ಮೂಲದಲ್ಲಿ ದ್ರಾವಿಡ ಭಾಷೆಯ ಜನಾಂಗ ಎಲ್ಲ ಒಂದೇ ಎಂಬುದು ಸ್ಪಷ್ಟ. ಆದಿಯಲ್ಲಿದ್ದ ಬೇಡ ಮತ್ತು ಪುಲ್ಕಸ[x] ಜನಾಂಗದಿಂದಲೇ ನಾಗರಿಕತೆಯ ಆಂದ್ರ ಮತ್ತು ಪುಂಡ್ರ[xx] ರಾಜ್ಯವಾಗಿದೆ. 'ಆದಿ

x. ಪುಲ್ಕಸ -(ನಾ) ಹೊಲೆಯ, ಚಂಡಾಲ.

xx. ಪುಂಡ್ರ -(ರ) ಒಂದು ದೇಶ. ಈ ದೇಶಕ್ಕೆ ಪೌಂಡ್ರಕ ವಾಸುದೇವನು ರಾಜನಾಗಿದ್ದನು.

ಈ ಆಹಾದಿ ದ್ರಾವಿಡಕೆ ಎಲ್ಲೂ ಉಂಟು', ಎಂದು ಮೂಲದ ಶಬರ, ಪುಲ್ಕಸರಾಗಿದ್ದವರೇ ಇಂದು ಪ್ರತ್ಯೇಕವೆಂದು ಹೇಳಿಕೊಳ್ಳುತ್ತ, ವೈಶಿಷ್ಟ್ಯತೆ ಮೆರೆಯುವುದನ್ನು ವ್ಯಂಗ್ಯಾತ್ಮಕವಾಗಿ ಖಂಡಿಸಿದ್ದಾರೆ. ದ್ವಂದ್ವ ಒಡಕು ಹುಟ್ಟಿಸಿದರೆ, ಪಂಗಡ ಮಾಡುವ ಹಾದಿಯು ಜಗಳಕ್ಕೆ ಕಾರಣವಾಗುತ್ತದೆ. ಅದನ್ನು ತ್ಯಜಿಸಿ ಎಂದಿದ್ದಾರೆ.

ಮೂರನೆಯ ನುಡಿಯಲ್ಲಿ ಬೇಂದ್ರೆಯವರು ದ್ರಾವಿಡ ಜನ ಪರಸ್ಪರರು ಅರಿತು ನಡೆಯದೆ ನಾಶವಾದುದನ್ನು ರಾಮಾಯಣದ ಪೌರಾಣಿಕ ಹಿನ್ನೆಲೆಯಲ್ಲಿ ಚಿತ್ರಿಸಿದ್ದಾರೆ. ದ್ರಾವಿಡರ ಸಾಮ್ರಾಜ್ಯಾಧಿಪತಿ ರಾವಣನದು ಬಂಗಾರ ಲಂಕೆಯಾಗಿತ್ತು. ಆತನ ಹೆಂಡತಿ ಮಂಡೋದರಿ ಮಹಾಪತಿವ್ರತೆ. ಅವಳು ಗಂಡನ ಒಳಿತಿಗೋಸ್ಕರವಾಗಿ ಜನಮನದ ಹೃದಯ ಗೆದ್ದವಳು. ಅವಳು ಅವರಿಗೆ ಗಾರುಡಿಗಳಂತಿದ್ದಳು. ದ್ರಾವಿಡರಲ್ಲಿ ಐಕ್ಯತೆ ಇಲ್ಲದ್ದರಿಂದ ದ್ರಾವಿಡ ಚಕ್ರಾಧಿಪತ್ಯದ ಪೌಲಸ್ತ್ಯನಾದ ರಾವಣನ ನಾಶವಾಯಿತು. ಹಾಗೆ ಅವನ ನಾಶಕ್ಕೆ ಕಾರಣವಾದವರು ಅವನ ವಂಶಸ್ಥರು. ಅವರ ಉದ್ದೇಶ 'ಕಿಂಕ್ರಾಂತಿಕಾಗಿ' ಯದಂತಾಗಿತ್ತು. ಅವರು ಕ್ರಾಂತಿ ಹೂಡಿ ರಾವಣ ಸತ್ತರೆ ಅವನ ಪಿಂಡವನ್ನು ಭಕ್ಷಿಸುವುದಕ್ಕೆ ಕಾಗೆಯ ಹಾಗೆ ಕಾದು ಕುಳಿತರು - 'ಕಿಂಕ್ರಾಂತಿಕಾಗಿ ಪೌಲಸ್ತ್ಯನ ಪಿಂಡಕ್ಕಾಗಿ'. ಆ ಸ್ವಜನ ದ್ರೋಹದಲ್ಲಿ ಮಂಡೋದರಿಯ ಮಾಯೆ ಕಳಿತು ಪಕ್ವವಾದುದು - ಆ ಜನಕ್ಕೆ ದೊರೆಯದ ಫಲವಾಗಿ ಮಾಯವಾಗಿ ಹೋಯಿತು. ('ಮಂಡೋದರಿಯ ಮಾಯೆ ಮಾಯವಾಯಿತೆ ಮಾಗಿ?') ದ್ರಾವಿಡರು ಅವರ

---

ಈ ದೇಶವನ್ನು ಕರೂಶ ದೇಶವೆನ್ನುವುದೂ ಉಂಟು. ಈ ವಾಸುದೇವನು ಕೃಷ್ಣನನ್ನು ದ್ವೇಷಿಸಿ ಆತನೊಡನೆ ಯುದ್ಧ ಮಾಡಿ ಆತನಿಂದ ಮೃತನಾದನು. (೨) ಬಲಿಯೆಂಬ ರಾಜನ ಪತ್ನಿಯಾದ ಸುದೇಷ್ಣೆಯಲ್ಲಿ ದೀರ್ಘತಮಸನೆಂಬ ಮುನಿಯಿಂದ ಹುಟ್ಟಿದ ಮಗ. ಅಂಗ, ವಂಗ ಮೊದಲಾದವರು ಈತನ ಸಹೋದರರು. - ಯಜ್ಞನಾರಾಯಣ ಉಡುಪ., ಪುರಾಣ ಭಾರತ ಕೋಶ,, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೭, ಪು - ೩೭೭.

ನಾಯಕ ರಾವಣನ ನಾಶದೊಡನೆ ತಮ್ಮ ನಾಶವನ್ನು ತಾವೇ ಆಹ್ವಾನಿಸಿ ಕೊಂಡರು.

ರಾವಣನ ತೋಟದಲ್ಲಿ ಅದೇ ಪ್ರದೇಶದ ಮತ್ತೊಂದು ಗುಂಪಿನ ವಾನರ ನಾಯಕ ಹನುಮಂತನಿಗೆ ಸಿಕ್ಕಿದ್ದು ತಿನ್ನಲಾಗದ 'ಮೋತಿಯ ಕಾಯಿ'. ಸೀತೆಯನ್ನು ಹುಡುಕುತ್ತ ಬಂದ ಹನುಮಂತ ಅಶೋಕವನದಲ್ಲಿ ಆಕೆಯನ್ನು ಕಂಡಾಗ - ಆಕೆ ನೀಡಿದ ಮುತ್ತಿನ ಸರವನ್ನು ಕಚ್ಚಿ ಕಚ್ಚಿ - ಅದರಲ್ಲಿ ರಾಮ ಎನ್ನುವ ಶಬ್ದ ಇಲ್ಲವೆಂದು ಕಿತ್ತೆಸೆಯುವ ಕಥೆ ಇದೆ. ಅದನ್ನು ಬೇಂದ್ರೆಯವರು ತುಂಬಾ ವಸ್ತುನಿಷ್ಠವಾಗಿ ದ್ರಾವಿಡರ ನೆಲೆಯಲ್ಲಿ ವಿಶ್ಲೇಷಿಸುತ್ತ ಆತನ ಸ್ಥಿತಿಯನ್ನು - 'ರಾವಣನ ತೋಟದಲಿ ಮಂಗ ಮೋತಿಯ ಕಾಯಿ!' ಎಂದು ಬಣ್ಣಿಸಿ- ರಾಮಾಯಣದ ಕಥೆಯ ಇನ್ನೊಂದು ಮುಖವನ್ನು ಅನಾವರಣಗೊಳಿಸಿದ್ದಾರೆ. ಇದು ಬೇಂದ್ರೆಯವರ ವೈದಿಕ ಸಂಪ್ರದಾಯಕ್ಕೆ ಕಟ್ಟುಬೀಳದ ವಸ್ತುನಿಷ್ಠ ವಿಮರ್ಶಾ ದೃಷ್ಟಿ. ಈ ನಿಟ್ಟಿನ ರಾಮಾಯಣ ವಿಮರ್ಶಾ ದೃಷ್ಟಿಯಲ್ಲಿಯೇ ದ್ರಾವಿಡರ ಐಕ್ಯತೆಯ ಸೂಕ್ಷ್ಮ ಹೊಳಹುಗಳ ಚಿಂತನೆಯಿದೆ.

ಈ ಕಾವ್ಯದಲ್ಲಿ ಬೇಂದ್ರೆಯವರು ದ್ರಾವಿಡರ ಸ್ವಾರ್ಥದ ಹೋರಾಟವನ್ನು ಚಿತ್ರಿಸುವಾಗ 'ಕಿಂಕ್ರಾಂತಿಕಾಗಿ' ಎಂದು; ಏನೂ ಫಲ ಪಡೆಯದ ವ್ಯರ್ಥ ರೀತಿಯನ್ನು 'ಮಂಗ ಮೋತಿಯ ಕಾಯಿ!' ಎಂದು ಪದಗಳನ್ನು ಟಂಕಿಸಿ, ದ್ರಾವಿಡರ 'ಬ್ಯಾಬಲ್'ನ ಸ್ಥಿತಿಯನ್ನು ವರ್ಣಿಸಿದ್ದಾರೆ.

ಹೀಗೆ 'ಬ್ಯಾಬಲ್ ಗೋಪುರ'ದ ದ್ರಾವಿಡರು -ಒಬ್ಬರು ಹೇಳುವ ಮಾತನ್ನು ಇನ್ನೊಬ್ಬರು ತಿಳಿಯದೆ ನಾಶವಾಗುತ್ತಿದ್ದಾರೆ. ಭಾಷೆಯ ಉಚ್ಚಾರಣೆಯಲ್ಲಿರುವ ತುಸು ಬದಲಾವಣೆಯನ್ನು ತಿಳಿಯಲಾಗದೆ 'ಭಾವದ ಹುಂಕಾರ ಹೆಚ್ಚಾಗಿ' ನಿಜಭಾವವನ್ನು ಸಂಪಾದಿಸದೆ ಸದ್ದಿನಲ್ಲಿದ್ದಾರೆ. ಇಲ್ಲಿ ಭಾಷೆಯ ಬೇಟೆ ನಡೆದಿದೆ. ಒಬ್ಬ 'ಬೇಕು' ಎಂದು ಇನ್ನೊಬ್ಬ 'ಬೇಡ' ಎಂದು ಜಗ್ಗಾಡುತ್ತ

ಹಾನಿಗೊಳಗಾಗುತ್ತಿದ್ದಾರೆ. ಈ 'ವಾಂಡು' 'ಒದ್ದು' ಎಂಬ ಭಾವ ಸಂವಹನದ ತೊಡಕಿನಲ್ಲಿ ದ್ರಾವಿಡರು ಅಳಿಯುತ್ತಿರುವುದನ್ನು - ಬೇಂದ್ರೆಯವರು ಸಮರ್ಥವಾಗಿ ಚಿತ್ರಿಸಿದ್ದಾರೆ. ಒಂದು ಜನಾಂಗ ಅಭಿವೃದ್ಧಿ ಹೊಂದಲು ಘರ್ಷಣೆಗಿಂತ ಅನುಸಂಧಾನ ಒಳಿತು ಎಂಬ ಭಾವವನ್ನು ಈ ಕಾವ್ಯ ವ್ಯಕ್ತಪಡಿಸುತ್ತದೆ.

* * *

## ೭. ಹೆಟರ - ಡಾಕ್ಸಿ

ಹಾಕು ಮಣೆ
ಘ್ರಾಯ್ಡು-ಆ್ಯಡ್ಲರು-ಯುಂಗು
ಹಚ್ಚು ಹಣೆ ಪಾದಕ್ಕೆ, ಬಂದ ಉಗುಳನು ನುಂಗು
ಪಿತಾ-ಪಿತಾಮಹಾ-ಪ್ರಪಿತಾಮಹಾ
          ಶ್ರದ್ಧೆಯಿಲ್ಲದ ಶ್ರಾದ್ಧ, ಸರ್ವತೋ ಭದ್ರ !

ಪೊಲಿಟಿಕ್ಸೆ ಮಿಸ್ಟಿಕ್ಸು ಮಿಕ್ಸು ಮಿಕ್ಸು
ಸೋಶಲ್ ಡಾಯನಾಮಿಕ್ಷು
ಡಾಯ್ನಾಮಾಯಿಟೀ ಭಿಕ್ಷು.
ಶ್ರೇಯಾಂಸೀ ನೀಡಿದಾ ಇಕ್ಷುರಸವಲ್ಲ-ಭೋ !
          ಪಾದರಸ, ಶ್ರೀಪಾದರಸ !

ಆಲ್‌ಕೆಮಿಸ್ಟ್ರಿ Transforms History
   into mere geography
   spirit does not matter
   mister ! silence is better.

ಶಬ್ದ ವೇಧವ ಮಾಡಿ, ಶ್ರಾವಣನ ಕೊಂದ
          ದಶರಥ ಪಡೆದ,
ದಶಮುಖಾಸುರನ ಕೊಲುವ ರಾಮನನು !
ಮರಮರನೆ ತಿರುಗಿ ಬರೆದನಾ ವಾಲ್ಮೀಕಿ
          ರಾಮಾಯಣವ

ಸೀತಾ ಬಾ ಈ ! ರಾಮಗಿದೆ ಅಗ್ನಿ ಪರೀಕ್ಷೆ
ಹೊಸ-ಪೊಸ-ದೀಕ್ಷೆ
ಹೃದಯಕ್ಕೆ ಹೃದಯವೇ ಸಾಕ್ಷಿ.
ಬೇರೆ ಇಲ್ಲ Proxy.

---

ಆಕರ: ದ.ರಾ.ಬೇಂದ್ರೆ, **ನಾಕುತಂತಿ**, ಡಾ|| ವಾಮನಬೇಂದ್ರೆ (ಸಂ), ಅಂಬಿಕಾತನಯದತ್ತ ವೇದಿಕೆ, ಶ್ರೀಮಾತಾ ಪ್ರಕಾಶನ, ಧಾರವಾಡ ೧೯೯೭, ಪು. ೫೪-೫೫

# ಹೆಟರ - ಡಾಕ್ಸೀ

ಈ ಕವನ ಬೇಂದ್ರೆಯವರು ಆಲೋಚಿಸುತ್ತಿದ್ದ ಸಂಪ್ರದಾಯ ವಿರುದ್ಧದ ದನಿ. ಅವರು ಜಗದಲ್ಲಿ ಹೊಮ್ಮಿ ಬಂದ ಸಾರ್ವಕಾಲಿಕ ಸತ್ಯದ ವೈಚಾರಿಕ ಚಿಂತಕರನ್ನು ಅವರ ಆಲೋಚನೆಯನ್ನು ಮೆಚ್ಚಿದ್ದರ ಭಾವಲಹರಿ. ಪಕ್ವ ಮನಸ್ಸಿನಲ್ಲಿ ಸುಸಂಬದ್ಧವಾಗಿ ಹರಿದ ಆತ್ಮಶೋಧ.

ಅತಿಥಿಗಳನ್ನು ನಮ್ಮ ಹಳ್ಳಿಗಾಡಿನವರು ಗೌರವಪೂರ್ವಕವಾಗಿ ಈಗಲೂ ಮಣೆ ಹಾಕಿ ಸ್ವಾಗತಿಸುವರು. ಆ ಸಂಸ್ಕೃತಿಯಂತೆ ಫ್ರಾಯ್ಡು, ಆ್ಯಡ್ಲರು, ಯುಂಗ್‌ನಂತಹ ಆಧುನಿಕ ಚಿಂತಕರನ್ನು ಸ್ವಾಗತಿಸಿ ಗೌರವಿಸಲು ಬೇಂದ್ರೆ ಯವರು 'ಹಾಕುಮಣೆ' ಎಂದಿದ್ದಾರೆ. ಸಂಪ್ರದಾಯ ವಿರುದ್ಧವಾದ ಆ ಮಹನೀಯರಿಗೆಲ್ಲ 'ಹಚ್ಚು ಹಣೆ ಪಾದಕ್ಕೆ' ಅಂದರೆ ಕಾಲಿಗೆ ಬೀಳು ಎಂದು ಶರಣಾಗಿದ್ದಾರೆ. ಹೀಗೆ ಕವಿ ನುಡಿಯುವಾಗ ಅವರಿರುವ ಸಮಾಜದ ವೈದಿಕ ಸಂಪ್ರದಾಯದ ಅರ್ಥ ರಹಿತ ರೂಢಿಗತ ಆಚರಣೆಗೆ ಒಳಗಾಗಬೇಕಾದ ಧರ್ಮಸಂಕಟದ ಅರಿವೂ ಇದೆ. ಆದಕಾರಣ ಅವರು 'ಬಂದ ಉಗುಳನು ನುಂಗು' ಎಂದು ನುಡಿಯುತ್ತ - ಶ್ರದ್ಧೆಯಿಲ್ಲದೆ ತಂದೆ, ಅಜ್ಜ, ಮುತ್ತಜ್ಜನಿಗೆ ಮಾಡುವ ಶ್ರಾದ್ಧವನ್ನು ವ್ಯಂಗ್ಯವಾಗಿ ಟೀಕಿಸಿದ್ದಾರೆ. ಶ್ರದ್ಧೆಯಿಲ್ಲದೆ ಆಚರಿಸುವ ಕಾಟಾಚಾರದ ರೂಢಿಗತ ಶ್ರಾದ್ಧವನ್ನು 'ಸರ್ವತೋಭದ್ರ'- ಚೆನ್ನಾಗಿ ಕಾಣುವುದಕ್ಕೆ, ಪ್ರದರ್ಶನಕ್ಕಿರುವುದು ಎಂದು ಸೂಕ್ಷ್ಮವಾಗಿ ಭೇಡಿಸಿದ್ದಾರೆ.

'ಅನುಭವಕ್ಕೂ ಅನುಭಾವಕ್ಕೂ ಒಂದು ದೊಡ್ಡ ಭೇದವಿದೆ. ಅನುಭವವು ಜಗತ್ತಿನ ಕಾರಣವನ್ನು ಹುಡುಕುತ್ತಿದೆ; ಅನುಭಾವವು ಜಗತ್ತಿನ ಕರ್ತೃವನ್ನೆ ಹುಡುಕುತ್ತಿದೆ.'[1] 'ಅನುಭಾವವು ಒಳಗಿನ ಭಾವಪರಿಪಾಕವು. ಅದರಿಂದ ಜೀವನ

---

1. ದ.ರಾ. ಬೇಂದ್ರೆ., 'ಸಾಹಿತ್ಯದ ವಿರಾಟ್ ಸ್ವರೂಪ', ಸಮಾಜ ಪುಸ್ತಕಾಲಯ, ಧಾರವಾಡ ೧೯೭೪ ಪುಟ - ೬೪.

ಸಾಕ್ಷಿಸ್ವರೂಪದ ಆಳವೇ ಬೇರೆ ನೆಲೆಗಾಣುವದು.[2] ಹೀಗಿರುವಾಗ ದೇಶವನ್ನೇ ವ್ಯಾಪಿಸಿರುವ ಪಾಲಿಟಿಕ್ಸ್ ಅಲ್ಲಿಯೂ ತನ್ನ ಮೂಗು ತೂರಿಸಿದಾಗ - ರಾಜಕೀಯ ಮಾಥುವುದೆ ಮಿಸ್ಟಿಕ್ಸ್-ಅನುಭಾವ ಎಂದುಕೊಂಡಾಗ ಈ ಬೆರಕೆಯಲ್ಲಿ; ವಿಚಿತ್ರ ಸೋಷಿಯಲ್ ಡೈಯನಾಮಿಕ್ಸ್‌ನಲ್ಲಿ Dynamighty ಆಗಿ ಉಳಿಯುವವರು ಫ್ರಾಯ್ಡ್, ಆ್ಯಡ್ಲರು, ಯುಂಗು ಭಿಕ್ಷುಗಳು ಮಾತ್ರ.

**ಇಡೀ ಮನುಕುಲದ ಶ್ರೇಯಸ್ಸನ್ನು ಬಯಸುವ ಆ ಚಿಂತಕರು ನೀಡಿದ ಇಕ್ಷುರಸವನ್ನು ಬಿಟ್ಟು, ಬೂಟಾಟಿಕೆಯ ಮಿಸ್ಟಿಕ್ಸನ್ನು ಪಾಲಿಟಿಕ್ಸ್‌ನಂತೆ ಬಳಸುವ ಶ್ರೀಪಾದ ಶ್ರೀಗಳ - ಪಾದ ತೊಳೆದ ನೀರಿಗೆ 'ಪಾದರಸ, ಶ್ರೀ ಪಾದರಸ'ಕ್ಕೆ ಬಾಯ್ಬಿಟ್ಟವರ ಗತಿ ಹೀನಾಯ ಎಂದು ನವ್ಯಕಾವ್ಯದ ಆಧುನಿಕ ಶೈಲಿಯಲ್ಲಿ ವ್ಯಂಗ್ಯಾತ್ಮಕವಾಗಿ ನುಡಿದಿದ್ದಾರೆ.**

ಆಲ್‌ಕೆಮಿಸ್ಟ್ರಿ ಎಂಬುದು ಮಧ್ಯಕಾಲೀನ ರಸಾಯನ ಶಾಸ್ತ್ರದ ಒಂದು ವಿಭಾಗ. ಅದರ ಮುಖ್ಯ ಉದ್ದೇಶವು ಸಾಧಾರಣ ಲೋಹವನ್ನು ಚಿನ್ನವಾಗಿ ಪರಿವರ್ತಿಸುವುದಾಗಿತ್ತು. ಹಾಗೇನಾದರೂ ಆಗಿದ್ದರೆ ಜಗತ್ತಿನಲ್ಲಿ ಚರಿತ್ರೆ ಎಂಬುವುದೇ ಉಳಿಯದೆ ಪೂರ್ಣ ಸ್ವರ್ಣಮಯ ಭೂಗೋಳವಿರುತ್ತಿತ್ತು. ಆದುದರಿಂದ ಎಲ್ಲವನ್ನೂ ತನ್ನ ಹಿಡಿತಕ್ಕೆ ತೆಗೆದುಕೊಳ್ಳುವ ಸ್ಪಿರಿಟ್ ಸರಿಯಲ್ಲ. ಈ ಜಗತ್ತಿನಲ್ಲಿ ಎಲ್ಲಕ್ಕೂ ತನ್ನದೇ ಆದ ಗುಣವೂ ಅಸ್ತಿತ್ವವೂ ಇದೆ. ಅದು ಅದರಂತೆ ಇದ್ದು ಎಲ್ಲದರ ಜೊತೆ ಒಂದಾಗಿ ತಾನು ಬಾಳಿ ಇನ್ನೊಂದನ್ನು ಬಾಳಿಸಬೇಕು. ಸುವರ್ಣವು ಒಳ್ಳೆಯ ಬಣ್ಣ ಮತ್ತು ಬೆಲೆಯಿಂದ ಶ್ರೇಷ್ಠ. ಜಡತ್ವಕ್ಕೆ ಬೆಲೆಕೊಟ್ಟು ಚೈತನ್ಯಕ್ಕೆ ಹೊರಳಲಾಗದ್ದು ಅದು. ಮೈಮೇಲೆ ಹಾಕಿಕೊಂಡಾಗ ಜಡ, ಔಷಧಿಯಾಗಿ ದೇಹಕ್ಕೆ ತೆಗೆದುಕೊಂಡರೆ ಅದು ಉತ್ತಮ. **ಬಂಗಾರ ಮಾಡಬೇಕು, ಚರಿತ್ರೆ ಸೃಷ್ಟಿಸಬೇಕೆಂದು ಹೊರಟಷ್ಟು- ಅದು ಕಾಲ ಕ್ರಮೇಣ ಆಕ್ರಮಣಕ್ಕೆ ಈಡಾಗಿ ಬರಿ geography ಆಗಿಬಿಡುತ್ತೆ. ಚಿನ್ನವನ್ನು**

---

2. ಅದೇ, ಪುಟ - ೬೫.

ತೂಗುತ್ತಿದ್ದ ವಿಜಯನಗರ ಹಾಳುಹಂಪೆಯಾಗಿದೆ. ನಮ್ಮ ಮಾತು ಹಾಗೂ ಕ್ರಿಯೆಯಿಂದ ಯುದ್ಧವಾಗಿ ಸ್ಮಶಾನಶಾಂತಿಯಾಗುವಂತಿದ್ದಲ್ಲಿ 'Silence is better'. ಭಾವಶಾಂತಿ ಯಾವಾಗಲೂ ಉತ್ತಮ, ಸ್ಮಶಾನಶಾಂತಿ ಅಲ್ಲ ಎಂಬುದನ್ನು 'Silence is better' ಎಂಬ ನುಡಿ ಧ್ವನಿಸುತ್ತದೆ.

ಬೇಂದ್ರೆಯವರು ಶ್ರವಣ ಪ್ರತಿಭೆಯ ಪ್ರಾಮುಖ್ಯತೆಯನ್ನು, ಅದರ ಅಗಾಧ ಶಕ್ತಿಯನ್ನು, ಅದರ ದುರುಪಯೋಗದಿಂದಾಗಬಹುದಾದ ಚಿತ್ರಣದಿಂದ ಓದುಗನ ಗಾಢ ಅನುಭವಕ್ಕೆ ಅದು ಸಿಗುವಂತೆ ಮಾಡಿದ್ದಾರೆ. ಶಬ್ದ ಅರಿವಿನ ಜ್ಞಾನದ ಭಂಡಾರ. ಅದು 'ಶ್ರಾವಣಾ ಬಂದಾ! ಕಿವಿತೆರಿ' ಎಂದ ಎಂಬ ಅನುಭವ. ಅದನ್ನು ಸದುಪಯೋಗಪಡಿಸಿಕೊಳ್ಳುವುದರಲ್ಲಿ ಮನುಷ್ಯನ ಅಳಿವು ಉಳಿವು ಇದೆ. ಎಷ್ಟೆ ಪ್ರಾಜ್ಞನಾದರೂ, ಹಿರಿಮೆಯ ಅಧಿಕಾರಸ್ಥನಾದರೂ ಅದರ ಸದುಪಯೋಗ ಪಡಿಸಿಕೊಳ್ಳದಿದ್ದರೆ ಅವನ ನಾಶ ಖಂಡಿತ. ಈ ಭಾವವನ್ನು ಮೂರು ಸಾಲುಗಳಲ್ಲಿ ಸಮರ್ಥವಾಗಿ ಚಿತ್ರಿಸಿರುವುದು ಬೇಂದ್ರೆಯವರ ಪ್ರತಿಭಾಶಕ್ತಿಗೆ ದ್ಯೋತಕವಾಗಿದೆ.

'ಶಬ್ದ ವೇಧವ ಮಾಡಿ, ಶ್ರಾವಣನ ಕೊಂದ
ದಶರಥ ಪಡೆದ,
ದಶಮುಖಾಸುರನ ಕೊಲುವ ರಾಮನನು !'

ಶಬ್ದವನ್ನು ಪ್ರತಿಭಾಪೂರ್ಣವಾಗಿ ಸದುಪಯೋಗಪಡಿಸಿಕೊಳ್ಳದೆ ಶಬ್ದ ವೇಧವ ಮಾಡಿ ದಶರಥನು ಶ್ರಾವಣನನ್ನು ಕೊಂದು ಪಡೆದದ್ದು ದಶಮುಖಾ ಸುರನಾದ ರಾವಣನನ್ನು ಕೊಲ್ಲುವ ರಾಮನನ್ನು. ಹೀಗೆ ದಶರಥನಾದ ವ್ಯಕ್ತಿ ಶಬ್ದ ವೇಧವ ಮಾಡಿ ತನ್ನ ಶ್ರಾವಣ ಪ್ರತಿಭಾಶಕ್ತಿಯನ್ನು ಕೊಂದರೆ ಅವನು ಪಡೆಯುವ ಫಲ: ದಶಮುಖದ - ಶಬ್ದವೇ ಆಕಾರವೆತ್ತಿದಂತಹ ಅರ್ಥರಹಿತ ಗೊಂದಲದ ನಾಶಕ್ಕಾಗಿ ಪಡೆಯಬೇಕಾದ ರಾಮನನ್ನು. ಶಬ್ದವನ್ನು ಸೂಕ್ಷ್ಮವಾಗಿ ತನ್ನ ಶ್ರವಣ ಪ್ರತಿಭೆಯಿಂದ ತಿಳಿಯದುದರ ಫಲವೇ ಶ್ರಾವಣನ ಕೊಲ್ಲುವಿಕೆಗೆ ಕಾರಣವಾಯಿತು. ಹೀಗೆ ಪೌರಾಣಿಕ ಪ್ರತಿಮೆಗಳ ಮೂಲಕ ಅಗಾಧ ಅನುಭವವನ್ನು ನುಡಿಯಲ್ಲಿ ಹೊಮ್ಮಿಸಿರುವುದು ಬೇಂದ್ರೆಯವರ ಪ್ರತಿಭಾಶಕ್ತಿ.

ಈ ಹಿನ್ನೆಲೆಯಲ್ಲಿ ಫ್ರಾಯ್ಡು, ಆ್ಯಡ್ಲರು, ಯುಂಗು ನೀಡಿದ ಹೊಸ ಚಿಂತನೆ ಅವರ ಶ್ರವಣ ಪ್ರತಿಭೆಗೆ ಸಾಕ್ಷಿ. ಶಬ್ದದ ಸದುಪಯೋಗದ ಅರ್ಥಪೂರ್ಣ ಆಲೋಚನೆಯನ್ನು ಅವರ ಹೊಸ ಅರಿವಿನಲ್ಲಿ ತಿಳಿದು - ಹೃದಯ ಭಾಷೆಯನ್ನು, ಜಗದ ಒಳಿತಿನ ನುಡಿಯನ್ನು ತಿಳಿಯಬೇಕು - ಎಂಬ ಚಿಂತನೆಯನ್ನು ಬೇಂದ್ರೆ ನೀಡಿದ್ದಾರೆ. ಬೇಂದ್ರೆಯವರು ಸ್ಪಷ್ಟ ಆಲೋಚನೆಯತ್ತ ಸಾಗುವಾಗ ಯಾವ ಧಾರ್ಮಿಕ ನಂಬಿಕೆಯ ಕಟ್ಟಿಗೂ ಬೀಳದೆ ಸತ್ಯದ ಆರಾಧನೆಗೆ ತೊಡಗಿ ಖಂಡ ತುಂಡವಾಗಿ ನುಡಿಯುತ್ತ ಕಾವ್ಯದ ಕತ್ತಿಯಿಂದ ಗೊಡ್ಡು ಸಂಪ್ರದಾಯವನ್ನು ಕತ್ತರಿಸಿ ಒಗೆದಿದ್ದಾರೆ.

ರಾಮಾಯಣ ಎಂಬುದರ ರಚನೆಯು 'ರಾಮ ' ಎನ್ನಲು ಬಾರದ ವಾಲ್ಮೀಕಿ 'ಮರಾ ಮರಾ' ಎಂದು, ಅದು ತಿರುಗಿ 'ರಾಮ' ಎಂದಾದಾಗ ರಚನೆಯಾದುದು ಎಂಬ ಕಥೆ ಇದೆ. ಅದರ ಹಿನ್ನೆಲೆಯಲ್ಲಿ ರಾಮಾಯಣವನ್ನು ಆಧುನಿಕ ಚಿಂತಕರಾದ ಫ್ರಾಯ್ಡು, ಆ್ಯಡ್ಲರು, ಯುಂಗ್‌ರ ಕಾಮದ ಎಳೆಎಳೆಯ ವಿಶ್ಲೇಷಣೆಯ ದೃಷ್ಟಿಕೋನದಲ್ಲಿ ಪರೀಕ್ಷಿಸಿ ಒರೆಹಚ್ಚಬೇಕಾಗಿದೆ. ಆಗ ಹೊಮ್ಮುವ ಚಿಂತನೆ:

'ಸೀತಾ ಬಾ ಈ ! ರಾಮಗಿದೆ ಅಗ್ನಿ ಪರೀಕ್ಷೆ
ಹೊಸ-ಪೊಸ-ದೀಕ್ಷೆ.'

**ಅಗ್ನಿ ಪರೀಕ್ಷೆ ಆದದ್ದು ಸೀತೆಗೆ, ಆದರೆ ಹೊಸ ಆಲೋಚನೆಯ ಪ್ರಕಾರ ಆಕೆಯನ್ನು ಅಗ್ನಿ ಪರೀಕ್ಷೆ ಮಾಡಿಸಿದ ರಾಮನಿಗೂ ಅಗ್ನಿ ಪರೀಕ್ಷೆ ಆಗಬೇಕಾಗಿದೆ. ಆದುದರಿಂದ ಕವಿ ನುಡಿದಿದ್ದಾರೆ: ಸೀತಾಬಾಯಿ ಬಾ, ಈ ರಾಮನಿಗೆ ಅಗ್ನಿ ಪರೀಕ್ಷೆ, ಹಾಗಾದಾಗಲೇ ಅದು 'ಹೊಸ-ಪೊಸ-ದೀಕ್ಷೆ'.**

ಈ ಆಧುನಿಕ ಚಿಂತಕರಿಗೆ ಗೌರವ ಸೂಚಿಸಿ, ಆದರಿಸಿ, ಸ್ವಾಗತಿಸಿ ಮಣೆ ಹಾಕಿದ್ದರಲ್ಲಿ ಅರ್ಥವಿದೆ. ಅವರ ಹೊಸ ಆಲೋಚನೆಯಡಿಯಲ್ಲಿ ನಮ್ಮ ಬದುಕಿನ ಹಾಗೂ ಧಾರ್ಮಿಕ ಆಚರಣೆಗಳನ್ನು ಪರೀಕ್ಷಿಸಬೇಕಾಗಿದೆ. ಹೀಗೆ ಮುಕ್ತವಾಗಿ ಸತ್ಯವನ್ನು ಆರಾಧಿಸುವಾಗ ಅದು 'ಹೃದಯಕ್ಕೆ ಹೃದಯವೇ ಸಾಕ್ಷಿ' ಎಂಬುವಂತಹದಾಗಿ ಅಲ್ಲಿ ಬೇರೆ ಬದಲಿ ಪ್ರತಿನಿಧಿತ್ವದ ಇತರ Proxy ಯೋಚನೆಯೇ ಇಲ್ಲ.

# ೮. ಶ್ರೀ ಗುರುವರೇಣ್ಯ

ಶ್ರೀ ಗುರುವರೇಣ್ಯ । ನೀನೇ ಶರಣ್ಯ
ಮತ್ತೊಮ್ಮೆ ಬಂತೂ ಶ್ರಾವಣಾ
ಮಾಡಬೇಕು ನಾಽವೂ ಶ್ರವಣಾ ।।ಪಲ್ಲವಿ।।

ಕಾಮದೊಳಗೆ ಹೂತಿದೇ ಪ್ರೇಮಾ
ಅದಕ್ಕಾವ ನೇಮಾ - ಗೀಮಾ
ಅದು ಬಾಳೋ ಸೀಮಾ ನಿತ್ಯಾನಂದ ಧಾಮಾ.

ನೋಡಬೇಕು ದೃಷ್ಟಿ ಹರಿದು
ಕೇಳಬೇಕು ಹಂಗು ತೊರೆದು
ಬಾಳ ಬೇಕು, ಆಳ ತೆರೆದೂ । ಅದೇ ಹಿರಿದು.

ಯಾರ ಆಳೂ ಅಲ್ಲ ಬಾಳು
ತಾಳೋ ಸೂಲೀ ರೂಪ ತಾಳು
ಹೊಸಾ ಹೊಲದ ಕಾಳು ಕಾಳು।
ಗುರು ಕೂಲಿ ಕೂಳು.'

ಕಟ್ಟಾವ ಬ್ಯಾರೇ ಮುಟ್ಟಾವ ಬ್ಯಾರೇ
ನಾಽನಾರೆ ನೀಽನಾರೆ
ಅಮೃತ ಧಾರೇಽ । ಧಾರವಾಡದಾಕಿ
ಇಲ್ಲಾ ಬ್ಯಾರೇ।।

ಚಿತ್ರಾ-ಶ್ರವಣಾ-ತಾರೆ
ಮೃಗ ಶಿರಾ, ಮಘಾ ತೆರೇ.

---

ಆಕರ: ದ.ರಾ. ಬೇಂದ್ರೆ, ಮತ್ತೆ ಶ್ರಾವಣಾ ಬಂತು, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೩, ಪು - ३೭. ಈ ಕವನ ರಚಿಸಿದ ದಿನ: ೧೪-೮-೬೬.

ಕವಿಪತ್ನಿ ಶ್ರೀಮತಿ ಲಕ್ಷ್ಮೀಬಾಯಿಯವರು ಮರಣ ಹೊಂದಿದ್ದು: ೧೭-೮-೬೬

# ಶ್ರೀ ಗುರುವರೇಣ್ಯ

ಬೇಂದ್ರೆಯವರು ಶ್ರಾವಣ ಮಾಸದಲ್ಲಿ ಹೆಚ್ಚು ಚಿಂತನಶೀಲರಾಗುತ್ತ, ಪ್ರಕೃತಿಯು ನವಸೃಷ್ಟಿಯಲ್ಲಿ ತಲ್ಲೀನಗೊಂಡಂತೆ ಅಂತರ್ ದೃಷ್ಟಿಯಿಂದ ನವಶೋಧಕ್ಕೆ ತೊಡಗಿದ್ದಾರೆ. ಅವರು ತನ್ನ ಎಲ್ಲ ಸಾಧನೆಗೆ ಗುರುವೇ ಕಾರಣ ಎಂದು ತಮ್ಮ ಬಾಲ್ಯದಿಂದ ಗುರು ಪರಂಪರೆಗೆ ವಂದಿಸುತ್ತ ಅವರ ಶ್ರೀರಕ್ಷೆಯಲ್ಲಿ ಬೆಳೆದಿದ್ದಾರೆ. ಅವರು ತನ್ನ ಅಜ್ಜಿ ಗೋದುಬಾಯಿಯವರು ನಂಬಿ ನಡೆದ ಗುರು ಚಿದಂಬರದೀಕ್ಷಿತರು, ತನ್ನ ತಂದೆ ರಾಮಚಂದ್ರ ಬೇಂದ್ರೆಯವರು ಜಪದೀಕ್ಷೆ ಪಡೆದ ಗುರು ಗೋಂದವಲೇಕರ ಮಹಾರಾಜರುಗಳಿಂದ ಬಾಲ್ಯದಲ್ಲಿ ಪ್ರಭಾವಿತರಾಗಿದ್ದು ಆ ಗುರುಗಳ ಆಶೀರ್ವಾದದ ಕರುಣೆಗೆ ಒಳಗಾಗಿದ್ದಾರೆ.[1] ಅವರು ಬೆಳೆದಂತೆ ಸಾಹಿತ್ಯದ ಅಂತರ್ಯದ ತಿಳಿವಿಗೆ ಕಾರಣರಾದ ಆಯ್‌ರಿಶ್ ಕವಿ ಜೋರ್ಜ್‌ರಸೆಲ್ (ಎ.ಈ.), ಜಿಬ್ರಾನ್, ಅರವಿಂದ, ರವೀಂದ್ರನಾಥ ಟಾಗೂರ್ ಅವರುಗಳನ್ನು 'ಗುರು-ಚತುರ್ಮುಖ'ರೆಂದು ಕರೆದು ಆರಾಧಿಸಿದ್ದಾರೆ.[2] ಅವರು ತಮ್ಮ ಜೀವನದಲ್ಲಿ ಗುಳವಣಿ ಮಹಾರಾಜರು, ಪ್ರಭಾಕರ ಮಹಾರಾಜರು, ಫಲಟಣದ ಡಾ. ಗೋವಿಂದ ಉಪಳೇಕರ ಮಹಾರಾಜರು, ಸಾಯಿಬಾಬ ಮುಂತಾದವರನ್ನು ನಂಬಿ ನಡೆದಿದ್ದಾರೆ. ಹೀಗೆ ಭಾರತೀಯ ಗುರು ಪರಂಪರೆಯಲ್ಲಿ ವಿಶ್ವಾಸವಿಟ್ಟು ತಮ್ಮ ಜೀವನ ಪಥ ಸಾಗಿಸಿದ ಬೇಂದ್ರೆಯವರು ತಮ್ಮ ಪತ್ನಿ ಲಕ್ಷ್ಮೀಬಾಯಿಯ ಆರೋಗ್ಯ ಕುಸಿದಾಗ ಮುಂಬೈ ಹತ್ತಿರದ ವಜ್ರೇಶ್ವರಿಯ ನಿತ್ಯಾನಂದ

---

1. ದ.ರಾ. ಬೇಂದ್ರೆ., 'ಆತ್ಮಕಥನ', ಜಿ.ಬಿ. ಜೋಶಿ., ಕೆ.ಡಿ.ಕುರ್ತಕೋಟಿ (ಸಂ.)., ಪುಟಬಂಗಾರ (ಸಂಪುಟ-ಐದು) ಶ್ರಾವಣ ಪ್ರತಿಭೆ., ಮನೋಹರ ಗ್ರಂಥಮಾಲೆ, ಧಾರವಾಡ, ೧೯೮೭, ಪು - ೪೧೪.
2. ದ.ರಾ.ಬೇಂದ್ರೆ., ಸಾಹಿತ್ಯದ ವಿರಾಟ್ ಸ್ವರೂಪ, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪, ಪು. ೮೯ ರಿಂದ ೧೨೮.

ಮಹಾರಾಜರೊಂದಿಗೆ ಹೆಚ್ಚು ಸಂಪರ್ಕ ಬೆಳೆಸಿಕೊಂಡಿದ್ದರು.[3] ಆಸ್ಪತ್ರೆಯಲ್ಲಿ ತಮ್ಮ ಪತ್ನಿಯ ಶುಶ್ರೂಷೆಯನ್ನು ಮಾಡುತ್ತ ಈ ನಶ್ವರ ಬದುಕಿನ ಬಗ್ಗೆ ಆಲೋಚಿಸುತ್ತ ಅವರು 'ಶ್ರೀ ಗುರುವರೇಣ್ಯ' ಎಂಬ ಗುರುವಿಗೆ ಶರಣಾದ ಕವನವನ್ನು ರಚಿಸಿದ್ದಾರೆ.

ಬೇಂದ್ರೆಯವರಿಗೆ ಶ್ರಾವಣ ಮಾಸದಲ್ಲಿ ಗುರು ಪರಂಪರೆಯಿಂದ ಬಂದ ಎಲ್ಲವನ್ನೂ ಕೇಳುತ್ತ, ತಮ್ಮ ಜೀವನದ ನೋವು ನಲಿವನ್ನು ನೆನೆಯುತ್ತ, ಅದರ ಮೆಲುಕು ಹಾಕುವಿಕೆಯಲ್ಲಿ ತನ್ನ ತಾನರಿಯಲು ಪ್ರಯತ್ನಿಸುವ ಸತ್ಯದ ಶೋಧವಿದೆ. ಗುರುವರೇಣ್ಯ ಅಂದರೆ ಶ್ರೇಷ್ಠವಾದ ಗುರು. ಅವನೇ ನಮಗೆ ಆಶ್ರಯವನ್ನು ನೀಡುವವನು, ರಕ್ಷಿಸುವವನು. ಆದಕಾರಣ ಮತ್ತೊಮ್ಮೆ ಶ್ರಾವಣ ಬಂದಿದೆ, ಗುರುವನ್ನು ನಾವು ಧ್ಯಾನಿಸೋಣ ಎಂದಿದ್ದಾರೆ.

ಶ್ರೀ ಗುರುವರೇಣ್ಯ । ನೀನೆ ಶರಣ್ಯ
ಮತ್ತೊಮ್ಮೆ ಬಂತೂ ಶ್ರಾವಣಾ
ಮಾಡಬೇಕು ನಾಽವೂ ಶ್ರವಣಾ.

ಒಬ್ಬ ವ್ಯಕ್ತಿಗೆ ಅನೇಕ ಗುರುಗಳಾಗಲು ಸಾಧ್ಯ. ಆ ಪರಂಪರೆಯ ಉಲ್ಲೇಖವನ್ನು ಮೇಲೆ ವಿವರಿಸಲಾಗಿದೆ. ಪಾರಮಾರ್ಥಿಕ ಗುರುಮಾರ್ಗ ಬೇರೆ. ಬೇಂದ್ರೆ ಒಪ್ಪುವುದು ಸಾಂಸಾರಿಕ ಗುರುಮಾರ್ಗ. ಸಂಸಾರವನ್ನು ಪವಿತ್ರಭಾವದಿಂದ ನಡೆಸಿಕೊಂಡು ಹೋಗಲು ಯಾವ ಗುರು ಮಾರ್ಗದರ್ಶಕನಾಗುವನೋ ಅವನು ಬೇಂದ್ರೆಯವರ ದೃಷ್ಟಿಯಲ್ಲಿ ಗುರುವರೇಣ್ಯ. ಬೇಂದ್ರೆಯವರು ಒಪ್ಪುವ ಪರಿಭಾಷೆಯಲ್ಲಿ ಗುರು ಎಂದರೆ ಅರಿವು, ಘನ ಮತ್ತು ಪ್ರತಿಭೆ. ಆದುದರಿಂದ ಬೇಂದ್ರೆಯವರು ಸಂಪೂರ್ಣ ಕವನದಲ್ಲಿ ಸಂಸಾರಿಕನು ಬೆಳೆಸಿಕೊಳ್ಳಬೇಕಾದ ಶ್ರೇಷ್ಠವಾದ ಅರಿವನ್ನು

---

3. ವಾಮನ ಬೇಂದ್ರೆ, 'ಬೇಂದ್ರೆಯವರ ಜೀವನ ರಹಸ್ಯ', ದ.ರಾ. ಬೇಂದ್ರೆ, ಮತ್ತೆ ಶ್ರಾವಣಾ ಬಂತು, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೩, ಪುಟ - ೫೪.

ಪ್ರತಿಪಾದಿಸಿದ್ದಾರೆ. ಅದರ ವಿವರ ಕವನದ ಪ್ರತಿ ನುಡಿಯಲ್ಲಿ ಬೆಳೆಯುತ್ತ ಹೋದ ಬಗೆ ವೈಶಿಷ್ಟ್ಯಪೂರ್ಣವಾಗಿದೆ. ಅದರ ಶ್ರವಣ, ಮನನ, ಚಿಂತನ ಮಾಡಬೇಕಾದದ್ದು ಪ್ರಸ್ತುತ.

**ಕಾಮದೊಳಗೆ ಹೂತಿದೆ ಪ್ರೇಮಾ**

ಈ ಜಗತ್ತಿನ ಜೀವಜಾಲದಲ್ಲಿ ಕಾಮವಿದೆ. ಕಾಮದಲ್ಲಿಯೇ ಪ್ರೇಮ ಹುದುಗಿ, ಮೊಳಕೆಯೊಡೆದು ಹೂಬಿಟ್ಟಿದೆ. ಅದಕ್ಕೆ ನಿಯಮವೆಂಬುವುದು ಯಾವುದೂ ಇಲ್ಲ. ಕಾಮ ಎಂಬುವುದು ಆಸೆಯ, ಲೈಂಗಿಕತೆಯ ಮಿತಿಯಲ್ಲಿದ್ದರೂ ಪ್ರೇಮ ಅದನ್ನೆಲ್ಲಾ ಉಲ್ಲಂಘಿಸುತ್ತದೆ. ಅದು ಬಾಳುವ ಪ್ರದೇಶಕ್ಕೆ ಸಂಬಂಧಿಸಿದುದಾಗಿ ಅದೇ ನಿತ್ಯಸಂತೋಷದ, ಸದಾ ಆನಂದ ತರುವ ನೆಲೆಯಾಗುತ್ತದೆ. ಅದೇ 'ನಿತ್ಯಾನಂದ ಧಾಮ' ಎಂದು ಬೇಂದ್ರೆ ನುಡಿದಿದ್ದಾರೆ. **ಅವರು ನಿಯಮ ಗಿಯಮ ಎಂಬ ಪದಕ್ಕೆ 'ನೇಮ ಗೀಮ' ಎಂಬ ಆಡುನುಡಿಯನ್ನು ಬಳಸಿ ಅದು ಪ್ರೇಮದಲ್ಲಿ ಜಾಡಿಸಿ ಹೋಗುವುದನ್ನು ಧ್ವನಿಸಿದ್ದಾರೆ.**

ಕಾಮದೊಳಗೆ ಹೂತಿದೆ ಪ್ರೇಮಾ
ಅದಕ್ಕಾವ ನೇಮಾ-ಗೀಮಾ
ಅದು ಬಾಳೋ ಸೀಮಾ ನಿತ್ಯಾನಂದ ಧಾಮಾ.

ಬೇಂದ್ರೆಯವರು ಕನ್ನಡ ಕಾವ್ಯದಲ್ಲಿ ನೀಡಿರುವ ಪ್ರೇಮತತ್ವ ಜೀವ ಪೋಷಕವಾದ, ಆಹ್ಲಾದಮಯವಾದ 'ಬೆಳಕಿಗಿಂತ ಬೆಳ್ಳಗೆ ಇತ್ತ । ಗಾಳಿಗಿಂತ ತೆಳ್ಳಗೆ ಇತ್ತ' ಎಂಬ ಸತ್ಯಸ್ಪರ್ಶದ ಬೆಳಕು ಗಾಳಿಯಂತಹ ಸಾರ್ವಕಾಲಿಕ ಮೌಲಿಕ ತತ್ವವಾಗಿದೆ. ಅದು ಪ್ರಕೃತಿಯಲ್ಲಿ ಅತಿ ಸಹಜವಾಗಿದ್ದು ವಿಶೇಷವಾಗಿ ಹೆಣ್ಣು ಗಂಡನ್ನು ಸೆಳೆಯುತ್ತಿದೆ. ಆದರೆ ಅದರ ಪೂರ್ಣ ಪ್ರಯೋಜನಕ್ಕೆ ಭಾರತೀಯ ಕೌಟುಂಬಿಕ ಮಿತಿಯ ಪತಿ ಪತ್ನಿ ಭಾವದ ಎಲ್ಲೆ ಬೇಕು ಎಂಬುದು ಬೇಂದ್ರೆಯವರ ಸ್ಪಷ್ಟನಿಲುವಾಗಿದೆ. ಅದ್ದರಿಂದ ವ್ಯಷ್ಟಿಯ ಪ್ರಗತಿ, ಆರೋಗ್ಯ, ವಿಲಾಸ, ವಿಕಾಸವಿದೆ. ಮುಕ್ತಕಾಮದ ಫಲ ಏಡ್ಸ್‌ನಲ್ಲಿ ಪರ್ಯವಸಾನವಾಗಿ

ಮಾನವನ ಸರ್ವನಾಶವಾಗುತ್ತದೆ. ಅದನ್ನು ಅರಿತ ಬೇಂದ್ರೆಯಂತಹ ಕಾವ್ಯರ್ಷಿಗಳು ತಮ್ಮ ಪತ್ನಿಯನ್ನು ಸಖಿ, ಗೆಳತಿಯೆಂದು ಸಂಬೋಧಿಸಿದ್ದಾರೆ. ದಾಂಪತ್ಯದಲ್ಲಿ ಪಲ್ಲವಿಸಿದ 'ಸಖೀಗೀತ' ಕಾವ್ಯವನ್ನು ನೀಡಿದ್ದಾರೆ. ವಿವಾಹೋತ್ತರ ಪ್ರೇಮ ಸುರಕ್ಷಿತ ಎಂಬುದನ್ನು ಸಮರ್ಥವಾಗಿ ತಿಳಿಸಿದ್ದಾರೆ. ಅವರು ಪ್ರತಿ ಗಂಡಿಗೆ ಹೆಣ್ಣಿನ ಪ್ರಿಯೆಯ ಆಕಾಂಕ್ಷೆ ತುಂಬಾ ಸಹಜವಾಗಿದೆ ಎಂದು ಹೇಳುತ್ತ, ಅದರ ಅನುಭವವನ್ನು ಅದರ ಔನ್ನತ್ಯದ ನೆಲೆ ಅರಿತು ಆನಂದಿಸಬೇಕು ಎಂದಿದ್ದಾರೆ. **ಸಖ ಸಖಿಯರು ಸ್ಫೂರ್ತಿಯ ಸೆಲೆಯಾಗಿ ಸಮಭಾವದಲ್ಲಿ ಬಾಳಬೇಕು ಎಂಬ ಬೇಂದ್ರೆಯವರ ನುಡಿಯಲ್ಲಿ ಸ್ತ್ರೀ ಪುರುಷ ಸಮಾನತೆಯ ತತ್ವವಿದೆ.**

ಎಂದಿನಿಂದಲೋ ಏನೋ ಒಳಗೊಂದು ಸಖಜೀವ
'ಸಖಿ!ಬಾಽರೆ ಬಾ!' ಎಂದು ಕೂಗುತಿದೆ.

* * *

ಅನ್ನಕೆ ಬಾಳಾಗಿ ಕಾಮಕೆ ಹೋಳಾಗಿ
ಮಾನಕೆ ಆಳಾಗಿ ಉಸಿರೆಳೆದುದು
ಬಾಳಲ್ಲ ಬದುಕಲ್ಲ ; ಜೀವ ಜೀವಕೆ ಉ-
ದ್ದೀಪನವಾದುದೆ ಜೀವನವು.

ಅದು ಇದೆ ಎದೆಯಲ್ಲಿ, ಬೆಳಕಿನ ಬದಿಯಲ್ಲಿ
ರಸಗಂಗಾನದಿಯಲ್ಲಿ ಅದರುಗಮ
ಹೆಸರದಕೆ ಪ್ರೀತಿಯು, ಹಿಗ್ಗಿನ ರೀತಿಯು
ಆತ್ಮದ ನೀತಿಯು ಮಧು ಸಂಗಮ.[4]

ಪತಿ ಪತ್ನಿಯರ ಪ್ರೇಮದಾನಂದದಲ್ಲಿ ಸೌಂದರ್ಯ ಎಂದರೆ ಏನು ಅದರ

4 ದ.ರಾ. ಬೇಂದ್ರೆ., 'ಸಖೀಗೀತ', ಶ್ರೀಮಾತಾ ಪ್ರಕಾಶನ, ಧಾರವಾಡ, ೧೯೬೦, ಪುಟ - ೩೨.

ಅನುಭವ ಮತ್ತು ಅನುಭಾವ ಎಂತಹದು ಎಂಬುದಕ್ಕೆ ಬೇಂದ್ರೆ ನೀಡಿರುವ ಸೌಂದರ್ಯ ಮೀಮಾಂಸೆ ಕಾವ್ಯಭಾಷೆಯಲ್ಲಿ ಅಪರೂಪವಾಗಿದೆ. ಸುಂದರ ಎಂಬುವುದು ಬರಿ ಬಾಹ್ಯ ಸೌಂದರ್ಯವಲ್ಲ. ಅದು ಆಂತರಿಕವಾದ ನಿಜ ಪ್ರೇಮದ, ಸೌಹಾರ್ದದ ಸಮ ಕೊಡುಕೊಳುವ, ಆರ್ದ್ರಭಾವದ, ಜೀವ ಜೀವಕ್ಕೆ ಸ್ಪಂದಿಸುವ, ಒಬ್ಬರು ಇನ್ನೊಬ್ಬರಿಂದ ಬೇರೆಯಾಗದ; ನೋವು ನಲಿವಿನಲ್ಲಿ ಒಂದಾದ, ಆತುಕೊಂಡ ಆಸರೆಯ ಸೌಂದರ್ಯ. ಅದು ಹೊರಗಿನ ಬಣ್ಣ ಹಾಗೂ ಆಕಾರವಲ್ಲ, ಒಳಗಿನ ಹೊಳಹು ಮತ್ತು ಅರಿವು ಎಂದಿದ್ದಾರೆ.

ಸೌಂದರ್ಯವೆಂಬುದು ಕಣ್ಣಿನ ತುತ್ತಲ್ಲ
ಕಣ್ಣಿಗು ಕಣ್ಣಾಗಿ ಒಳಗಿಹುದು
ರೂಪ-ಲಾವಣ್ಯಕೆ ಅಳೆಯಲು ಬಾರದು
ಅವುಗಳೆ ಇದರೊಂದು ಕಣವಿಹವು[5]

ಇದು ನಮ್ಮೆಲ್ಲರ ಜೀವನದಲ್ಲಿರುವುದು. ನಮ್ಮ ಬದುಕಿಗೆ ಆಸರೆಯಾದುದು. ಇದು ಸತ್ಯ. ಬದುಕು ಎಂದರೆ ಚಿನ್ನಿಕೋಲು ಆಟವಲ್ಲ. ಯೌವನದ ಹಾಗೂ ಹಣದ ಸೊಕ್ಕಿನಿಂದ ತನ್ನ ಮೂಗಿನ ನೇರಕ್ಕೆ ನುಡಿಯುತ್ತ ಇಡೀ ಜನಾಂಗವನ್ನು ದಿಕ್ಕುಗೆಡಿಸುವ ಧಾರ್ಷ್ಟ್ಯವಲ್ಲ. ನಮ್ಮ ನಮ್ಮ ಮಿತಿಗಳ, ನಮ್ಮ ಹಿಡಿಗೆ ಸಿಕ್ಕಷ್ಟರಲ್ಲಿ ನಮ್ಮ ಜೀವನವನ್ನು ರೂಪಿಸಿಕೊಳ್ಳುತ್ತ ಇನ್ನೊಬ್ಬರ ಹಿಡಿಗೆ ಆಸೆ ಪಡದೆ ಸಹಬಾಳ್ವೆ ಸಾಗಿಸುವಂತಹದು. ಇದಕ್ಕೆ ಜನರ ಮನಸ್ಸನ್ನು ರೂಪಿಸಬೇಕಾಗುತ್ತದೆ. ಹಿರಿದಾದ ಚಿಂತನೆಯ ಸತ್ಯವನ್ನು ಅರುಹಬೇಕಾಗುತ್ತದೆ. ಅದನ್ನು ಶ್ರೇಷ್ಠಕವಿಗಳು ತಮ್ಮ ಕಾವ್ಯ, ಸಾಹಿತ್ಯದಲ್ಲಿ ನೀಡಿದ್ದಾರೆ. ಅದು ದಿಢೀರನೆ ಆಗುವಂತಹ ಫಾಸ್ಟ್ ಫುಡ್ ಅಲ್ಲ. ಅದು ಬಿತ್ತಿ ಬೆಳೆಯಬೇಕಾದ ಬೆಳೆ. ಅದಕ್ಕೆ ಬೇಕಾದ ಬೆಳಕು, ನೀರು, ಗಾಳಿ ಕಾವ್ಯದಲ್ಲಿದೆ. ಪ್ರೇಮವು ಚಿಗುರಬೇಕು, ಕಾಮದ ಕಾವಿನಲ್ಲಿ ದಹಿಸಿ ಹೋಗಬಾರದು; ಕಾಮ ಅತಿಯಾಗಿ

---

5. ಅದೇ, ಪುಟ - ೨೦.

ಅದರ ಕಾವಿನಲ್ಲಿ ದೇವ ದಾನವ ಮಾನವರೆಲ್ಲ ಬೂದಿಯಾಗಿ ಹೋದರು; ವಿಪರೀತ ಓದಿರುವೆ, ಮಹಾತಿಳುವಳಿಕೆಯನ್ನು ಹೊಂದಿರುವೆ ಎಂಬ ಬೀಗುವಿಕೆ ಪ್ರಯೋಜನವಿಲ್ಲ. ಅದು ಊದುಗೊಳವೆಯಂತೆ ಎಂದು ಬೇಂದ್ರೆಯವರು ಉಪಮಾನದಲ್ಲಿ ಬಣ್ಣಿಸಿದ್ದಾರೆ. ಅರ್ಥಮಾಡಿಕೊಳ್ಳದೆ ಒಂದೇ ಸಮ ಓದುವ ಓದಿಗೆ ಮನೆಯ ಹಿರಿಯರು 'ಏನು ಊದುತ್ತೀಯೋ' ಎಂದು ಛೇಡಿಸುತ್ತಾರೆ. ಅವರ ಆ ನುಡಿಯಲ್ಲಿ ಓದು ಮನನವಾಗಬೇಕು ಎಂಬ ವ್ಯಂಗ್ಯಾರ್ಥವಿದೆ. ಓದು ಜೀವನಕ್ಕೆ ಪೂರಕವಾಗಬೇಕು, ಪೋಷಕವಾಗಬೇಕು, ಇಲ್ಲದಿದ್ದರೆ ಅದು ವ್ಯರ್ಥ.

ಊದುಗೊಳವೆಯಲ್ಲಿ ಒಲೆ ಹೊತ್ತಿಸಲು ಊದಿದರೆ ಗಾಳಿ ಒಲೆಯ ಕೆಂಡವನ್ನು ಕಾವುಗೊಳಿಸುತ್ತದೆ. ಒಲೆ ಹೊತ್ತಿದ ನಂತರ ಅದನ್ನು ಪಕ್ಕಕ್ಕಿಡುವರು. ಊದುಗೊಳವೆ ಊದಿದ ಗಾಳಿಯನ್ನಾಗಲಿ; ಕೆಂಡದ ಕಾವನ್ನಾಗಲಿ ಅನುಭವಿಸುವುದಿಲ್ಲ. ಹೀಗೆ ಮಾನವನ ಬಾಳು ಕಾಮದಲ್ಲಿ ವ್ಯರ್ಥ ವಾಗಬಾರದು. ಅದು ನಾದವನ್ನು ಹೊಮ್ಮಿಸುವ ಕೊಳಲಾಗಬೇಕು. ತನ್ನನ್ನು ಹಿಡಿದ ಕೈ ಮೃದುವಾಗಿ ತಟ್ಟಿ ತನ್ನ ಸ್ವರದ ಜೊತೆಗೆ ಒಂದಾಗಿಸಿಕೊಳ್ಳುವಂತೆ ಇರಬೇಕು. ಮೈಯಲ್ಲಿಯ ಪುಳಕಗೊಳಿಸುವ ರಂಧ್ರದಲ್ಲಿ ವಾದಕನ ಮನಸ್ಸು ಕೈಯಾಗಿ ಆಡಿಸಿ; ಅವನ ಕೊರಳಾಗಿ ಅವನ ಮನಸ್ಸಿನ ಭಾವದ ದನಿಯಾಗಬೇಕು. ಕೊಳಲು ವಾದಕ ಮತ್ತು ಕೊಳಲು ಮೇಳೈಸಿದ ಅವಿನಾಭಾವದಲ್ಲಿ ಒಂದಾದ ಮಧುರತೆ ಗಂಧರ್ವನಾದವಾಗುತ್ತದೆ. ಹೀಗೆ ಸಖಸಖಿಯರ ಪ್ರೇಮದ ಪಲ್ಲವವಾಗಬೇಕು, ಕಾಮದ ಕಾವಿಗೆ ಕಾರಣವಾಗುವ ಊದುಗೊಳವೆಯಾಗದೆ ಅದು ಕೊಳಲಿನ ದನಿಯಾಗಿ 'ಸನಿ' ಸನಿಹ, ಹತ್ತಿರ ಸಮೀಪಿಸಿ ಮೈಮನಸ್ಸನ್ನು ತುಂಬಿಕೊಳ್ಳಬೇಕು ಎಂದಿದ್ದಾರೆ. 'ಸನಿ'[x] ಪದವನ್ನು ಧ್ವನ್ಯಾರ್ಥದಲ್ಲಿ ಬಳಸುತ್ತ ಬೇಂದ್ರೆಯವರು ಆ ಬಗೆಯ ಕೊಳಲಾಗುವ ಭಾಗ್ಯವನ್ನು ತನಗೆ ತನ್ನ ಗುರು ನೀಡಲಿ ಎಂದು ಪ್ರಾರ್ಥಿಸಿದ್ದಾರೆ.

---

x. ಸನಿ = A request, A respectful entreaty (addressed to a guru)

ಪ್ರೇಮಾನಃ ಪಲ್ಲವಿಸಃದ ಕಾಮದ ಕಾವಿನ್ಯಾಗ
ದೇವ-ದಾನವ-ಮಾನವರೆಲ್ಲಾ ಬೂದಿ

ಎಷ್ಟು ಓದಿ, ಏನು ಓದಿ, ಊದುಗೊಳವೀ ಗಾಳೀ ಬಾಳು
ಕೊಳಲೀನ ದನಿ ಬರಲಿ ಸನಿ.[6]

ಹೀಗೆ ಬರಿ ಬಿದಿರಿನ, ಕಾಮದ ಕೊಳವೆಯಾಗದೆ, ಗಾಳಿ ಬಾಳಾಗದೆ; ಪ್ರೇಮದ ಮುರಲಿಯಾದಾಗ ಪ್ರೇಮ ಪ್ರಸವವಾಗುತ್ತದೆ. ಅದೇ ಜಗದ ಜನರ ಕಲ್ಯಾಣ ದೀಪ್ತಿ ಎಂದು ಬೇಂದ್ರೆ ನುಡಿದಿದ್ದಾರೆ. 'ಪ್ರೇಮ ಪ್ರಸವ ಇರದಲ್ಲಿ ಬದುಕೇ'? ಬಾಳುವುದೆ ಸತ್ಯ ಬೀಜ?'[7] ಎಂದು ಪ್ರಶ್ನಿಸಿ ಪ್ರೇಮ ಮತ್ತು ಸತ್ಯವನ್ನು ಒಂದೆಂದು ಸಾರಿದ್ದಾರೆ.

**ಬಾಳಬೇಕು ಆಳ ತೆರೆದೂ**

ಬೇಂದ್ರೆಯವರು ಈ ಕವನದ ಮೂರನೆಯ ಚರಣದಲ್ಲಿ ಜೀವನವನ್ನು ರೂಪಿಸಿಕೊಳ್ಳಬೇಕಾದ ದೃಷ್ಟಿಯನ್ನು ಆಲೋಚಿಸುತ್ತ ಗುರುವನ್ನು ನೆನೆದು ಈ ರೀತಿ ಧ್ಯಾನಿಸಿದ್ದಾರೆ:

'ನೋಡಬೇಕು ದೃಷ್ಟಿಹರಿದು
ಕೇಳಬೇಕು ಹಂಗು ತೊರೆದು
ಬಾಳಬೇಕು ಆಳ ತೆರೆದೂ । ಅದೇ ಹಿರಿದು'

'ಕಾಲಕೆಳಗಿನ ನೋಟ ಬಿಡು' ಎಂಬ ಗಾದೆ ಮಾತಿದೆ. ನಾನು, ನನ್ನ ಹೆಂಡತಿ ಮಕ್ಕಳು ಎಂಬ ಮಿತಿಯಾದ ನೋಟಕ್ಕೆ ಒಳಗಾದವನಿಗೆ ವಿಶಾಲದೃಷ್ಟಿ ಸಾಧ್ಯವಿಲ್ಲ. ಬೆಟ್ಟದ ಮೇಲೆ ನಿಂತವನಿಗೆ ಕಾಣುವ ವೈಶಾಲ್ಯ ಅಟ್ಟದ ಮೇಲಿರುವವನಿಗೆ ಕಾಣುವುದಿಲ್ಲ. ಹಾಗಾಗಿ ಎತ್ತರದ ನಿಲುವಿಗೆ ಏರಿ

6. ದ.ರಾ. ಬೇಂದ್ರೆ, 'ಪರಾಕಿ', ಸಮಾಜ ಪುಸ್ತಕಾಲಯ, ಧಾರವಾಡ, ೧೯೬೨, ಪುಟ - ೭.
7. ಅದೇ, ಪುಟ - ೧೦.
8. ದ.ರಾ. ಬೇಂದ್ರೆ, 'ಮಾತೆಲ್ಲ ಜ್ಯೋತಿ', ಮಣಿಪಾಲ ಪ್ರಿಂಟರ್ಸ್ ಮತ್ತು ಪಬ್ಲಿಷರ್ಸ್ (ಲಿ.) ಮಣಿಪಾಲ, ೧೯೭೨, ಪುಟ - ೭.

ದೃಷ್ಟಿಯನ್ನು ಹರಿಯ ಬಿಡಬೇಕು. 'ಗಂಗೆ ಹರಿದಷ್ಟೂ ತಿಳಿಯುತ್ತ ತಿಳಿಯುತ್ತಾ ಹೋಗುತ್ತದೆ! ತಿಳಿಯಾಗುತ್ತದೆ! ಎಷ್ಟು ತಿಳಿಯಾಗುತ್ತದೆ ಎಂದರೆ, ತಿಳಿ ಹೋಗಿಸುವಂಥ, ಕಲಡುಮಾಡುವಂಥ ಕ್ರಿಮಿಗಳು ಅಲ್ಲಿ ಬದುಕಲಾರವು'.[8] ಹರಿವ ನೀರು ದೋಷ ಕಲ್ಮಷರಹಿತವಾದ ಹಾಗೆ ವಿಶಾಲದೃಷ್ಟಿ ಚಲನಶೀಲತೆಯನ್ನು ಪಡೆಯುತ್ತ.ಶುದ್ಧವಾಗುತ್ತದೆ. ಬೇಂದ್ರೆಯವರು ಸ್ಪಷ್ಟ ಅರಿವಿಗೆ - ದೃಷ್ಟಿ ಮತ್ತು ಶ್ರವಣ ಶಕ್ತಿ ಚೆನ್ನಾಗಿರಬೇಕು ಎಂದಿದ್ದಾರೆ.

'ಕಿವಿಯೆ ಕವಿ', 'ನನ್ನ ಕಣ್ಣೇ ಕಿವಿಯು, ಕವಿಯು ನಾನು' ಎಂಬುದು ಅವರ ದೃಷ್ಟಿ ಹಾಗೂ ಶ್ರವಣ ಚೇತನದಲ್ಲಿರುವ ಕಾವ್ಯ ಪ್ರತಿಭಾ ಸೂಚಕ ನುಡಿಗಳಾಗಿವೆ. ಅವರು - ಯಾವುದೇ ಹಂಗಿಗೆ, ದಾಕ್ಷಿಣ್ಯಕ್ಕೆ ಆಸೆಗೆ ಒಳಗಾಗದೆ ಮುಕ್ತವಾಗಿ ಎಲ್ಲವನ್ನೂ ಕೇಳಬೇಕು; ಅದು ಕೇಳಬೇಕು,ಇದು ಕೇಳಬಾರದು ಎಂಬ ಮಾನಸಿಕ ದೌರ್ಬಲ್ಯಕ್ಕೆ ಒಳಗಾಗದೆ; ಯಾವುದೇ ಬಂಧನದ ನಿಲುವಿಗೆ ಸಿಗದ ಮುಕ್ತಭಾವದಿಂದ ಎಲ್ಲವನ್ನೂ ಕೇಳಿ ಒಳಿತನ್ನು ಸ್ವೀಕರಿಸಬೇಕು - ಎಂದಿದ್ದಾರೆ.

'ಬಾಳಬೇಕು ಆಳತೆರೆದೂ' ಎಂಬ ನುಡಿಯಲ್ಲಿ ಯಾವುದೇ ಒಂದು ವಿಷಯವನ್ನು ತಿಳಿದುಕೊಳ್ಳಬೇಕಾದರೆ ಅದರ ಆಳಕ್ಕೆ ಮುಳುಗಬೇಕು ಎಂದು ಒಂದು ಅರ್ಥ ಗೋಚರವಾಗುತ್ತದೆ. ಅದರ ಬಗ್ಗೆ ಇನ್ನೂ ಆಳವಾಗಿ ಯೋಚಿಸಿದರೆ ಬಾಳು ಎಂಬುದು ಬದುಕು ಎಂಬುವುದಕ್ಕಿಂತ ಹೆಚ್ಚು ವ್ಯಾಪಕವಾದ ಅರ್ಥ ಹೊಂದಿದೆ. **'ಆಳತೆರೆದೂ' ಎಂಬ ಪದದ 'ಆಳು'- ವ್ಯಕ್ತಿಯಾಗಿ ಸಮಾಜದಲ್ಲಿ ಅಜ್ಞಾನದಲ್ಲಿರುವ ಇತರ ವ್ಯಕ್ತಿಗಳನ್ನು ಶಿಕ್ಷಿತರನ್ನಾಗಿಸಿ, ಸುಸಂಸ್ಕೃತರನ್ನಾಗಿಸಿ ಅನಾವರಣಗೊಳಿಸಬೇಕು - ಎಂಬ** ಅರ್ಥವನ್ನು ಧ್ವನಿಸುತ್ತದೆ. ಆಗ 'ಬಾಳು' ಎಂಬ ಪದಕ್ಕೆ ಅರ್ಥವಿದೆ. ಅಂತಹ ಬಾಳು - 'ಅದೇ ಹಿರಿದು'. ಆ ಉನ್ನತ ಬಾಳಿನಲ್ಲಿ ಒಟ್ಟು ಸಮಾಜದ ಪ್ರಗತಿಯನ್ನು ಗುರುವಿನ ಆಶೀರ್ವಾದದಿಂದ ಸಾಧಿಸಬೇಕು ಎಂದಿದ್ದಾರೆ.

**ತಾಳೋ ಸೂಲೀರೂಪ ತಾಳು**

'ಯಾರ ಆಳೂ ಅಲ್ಲ ಬಾಳು
ತಾಳೋ ಸೂಲೀರೂಪ ತಾಳು

ಹೊಸಾ ಹೊಲದ ಕಾಳು ಕಾಳು ।

ಗುರು ಕೂಲಿ ಕೂಳು.'

'ಬಾಳು' ಎನ್ನುವುದು ಯಾರ ಆಳೂ ಅಲ್ಲ. ಅದು ಯಾರ ಗುತ್ತಿಗೆಯಲ್ಲೂ, ಅಧೀನದಲ್ಲೂ ಇಲ್ಲ. ಒಡೆಯನ ಹಂಗಿನಲ್ಲಿರದೆ ಮುಕ್ತವಾದುದು ಬಾಳು. ಆ ಬಾಳು ತನ್ನದಾದುದರಿಂದ ಪ್ರತಿ ವ್ಯಕ್ತಿಯೂ ಈಶ್ವರನಂತಾಗಬೇಕು, ಶೂಲಿಯನ್ನು ಹಿಡಿಯಬೇಕು ಎಂದಿದ್ದಾರೆ. ಈಶ್ವರನ ಆಯುಧವಾದ ಶೂಲಿ ಇಲ್ಲಿ ತದ್ಭವರೂಪದ ಸೂಲಿ ಆಗಿದೆ. 'ಸೂಲೀ ರೂಪ ತಾಳು' ಎಂಬ ಪದ ಬೇಸಾಯದ ಕೂರಿಗೆಯ ಅರ್ಥವನ್ನು ತನ್ನಲ್ಲಡಗಿಸಿಕೊಂಡು ವಿಶಾಲಹರಹಿನಲ್ಲಿ ಕನ್ನಡ ಭಾಷೆಯ ಸಾಧ್ಯತೆಯನ್ನು ಕಾವ್ಯದಲ್ಲಿ ಹೊಮ್ಮಿಸಿದೆ. ಬೇಂದ್ರೆಯವರು ದೊಡ್ಡ ಗ್ರಾಮದಂತಿದ್ದ ಧಾರವಾಡದಲ್ಲಿ ಜನಿಸಿ; ಬ್ರಾಹ್ಮಣ ಬಾಲಕನಾಗಿ ಹುಟ್ಟಿದರೂ ಸಾಧಾರಣ ಕುಟುಂಬದ ಯಾವುದೇ ವೈದಿಕ ಆವರಣದ ಕಟ್ಟಿನಿಂದ ಬಿಗಿದ ಹುಡುಗನಾಗಿರದೆ ಬೆಳೆದ ಕಾರಣ - ರೈತ ಮಕ್ಕಳ ಜೊತೆ ಬೇಸಾಯದಲ್ಲಿ ತೊಡಗಿ ಕೂರಿಗೆ ಹೊಡೆದ ಅನುಭವವಿರುವುದರಿಂದ ಈ ರೈತಾಪಿ ಅನುಭವಗಳನ್ನು ಕಾವ್ಯದಲ್ಲಿ ಕೊಡಲು ಸಾಧ್ಯವಾಗಿದೆ ಎಂದು ಹೇಳಬಹುದು. ಕೂರಿಗೆ ಹೊಡೆದ ಎಲ್ಲ ಕನ್ನಡ ರೈತಮಕ್ಕಳಿಗೆ 'ತಾಳು' ಚಿರಪರಿಚಿತ. ಸಾಮಾನ್ಯವಾಗಿ ಮೂರು ತಾಳಿನ ಕೂರಿಗೆ ಇರುತ್ತದೆ. ಕೂರಿಗೆ ಬಟ್ಟಲಿಂದ ಬಿತ್ತಿದ ಕಾಳು 'ತಾಳು'ವಿನಿಂದ ನೆಲಕ್ಕೆ ಬಿತ್ತನೆಯಾಗುತ್ತದೆ. ಹೀಗೆ ವ್ಯಕ್ತಿ ಮೂರು ಮೊನೆಯ ತ್ರಿಶೂಲದಂತೆ - ಸೂಲೀ ರೂಪ ತಳೆದು - ಫಲದಾಯಕವಾಗುವ ವ್ಯಕ್ತಿಯಾಗಬೇಕು ಎಂದು 'ಸೂಲೀ ರೂಪ ತಾಳು' ಎಂಬ ರೂಪಕದಲ್ಲಿ ಚಿತ್ರಿಸಿದ್ದಾರೆ. ಇದೊಂದು ರೈತನ ಕೂರಿಗೆ ಸಾಧನವನ್ನು ರೂಪಕವಾಗಿಸಿರುವ ಹೊಚ್ಚ ಹೊಸ ಕನ್ನಡದ ರೂಪಕ. ಬೇಂದ್ರೆಯವರ ರೂಪಕ ಸೃಷ್ಟಿ ಅನನ್ಯವಾದುದು. ವ್ಯಕ್ತಿ ಸೃಷ್ಟಿಶೀಲನಾಗಬೇಕು ಉತ್ಪಾದನಾ ರೂಪಿ ಯಾಗಬೇಕು. ಒಂದೊಂದು ಕಾಳು ಬಿತ್ತಿ ಭೂಮಿತಾಯಿಯ ಒಡಲಿಂದ ರಾಶಿರಾಶಿ ತೆನೆ ಹೊಮ್ಮಿಸುವ ಕ್ರಿಯಾಶೀಲನಾಗಬೇಕು. ತಾನು ತಿಂದುಂಡು ಇತರರಿಗೂ ನೀಡುವಂತಹವನಾಗಬೇಕು ಎಂಬ ಹಿರಿದಾದ ಜೀವಪರ ನಿಲುವಿನ ಚಿಂತನೆ

ಇದಾಗಿದೆ. ಹೀಗೆ ವ್ಯಕ್ತಿ ಹೊಲದಲ್ಲಿ ಕಾಳು ಕಾಳು ಬಿತ್ತನೆ ಮಾಡಿದಾಗ 'ಕೂಳು'[x] ಅಂದರೆ ಅನ್ನದ ಫಲ ದೊರೆಯುತ್ತದೆ. ಇದು ನಾವು ಮಾಡುವ ಕೂಲಿಗೆ ಗುರುವು ನೀಡುವ ಅನ್ನ. ಇದುವೆ 'ಗುರು ಕೂಲಿ ಕೂಳು'.

## ನಾsನಾರೆ ನೀsನಾರೆ

ಬೇಂದ್ರೆಯವರ ಚಿಂತನೆ ಕಾವ್ಯದಲ್ಲಿ ಹಲವು ಹರಹಿನಲ್ಲಿ ಸಾಗುತ್ತ, ಒಂದೇ ವಿಷಯದ ವಿವಿಧ ಮುಖಗಳನ್ನು ಕಾಣಿಸುತ್ತ ಥಂಗನೆ ಅಧ್ಯಾತ್ಮದ ನೆಲೆಗೆ ನೆಗೆದು ಪ್ರಕಾಶದ ಹೊಂಗಿರಣವನ್ನು ದರ್ಶಿಸುತ್ತದೆ. ತನ್ನ ಪತ್ನಿ ಲಕ್ಷ್ಮೀಬಾಯಿಯು ಅರೆಪ್ರಜ್ಞಾಸ್ಥಿತಿಯಲ್ಲಿ ಹಾಸಿಗೆ ಹಿಡಿದಿರುವಾಗ ಅವರು ಬಾಳಿನ ಅರ್ಥವನ್ನು ಶೋಧಿಸುತ್ತ ಸಾಗಿದ್ದಾರೆ. ತನ್ನ ಬಾಲ್ಯದ ಮುಕ್ತದೃಷ್ಟಿ, ಶ್ರವಣಧ್ಯಾನ, ಕೂರಿಗೆಯ ಅನುಭವದಲ್ಲಿ ವ್ಯಕ್ತಿ ವಿಕಾಸ ಮತ್ತು ಉಳಿವನ್ನು ಚಿತ್ರಿಸಿದ್ದಾರೆ. ಪ್ರೀತಿಯ ಹೆಂಡತಿಯ ಜೀವ ಈಗಲೋ ಆಗಲೋ ತನ್ನಿಂದ ದೂರವಾಗುತ್ತದೆ ಎಂಬ ಸ್ಥಿತಿಯಲ್ಲಿ - ಆಕೆಯನ್ನು ಕುರಿತು ಆಲೋಚಿಸುವಾಗಲೆ ಈ ಬದುಕಿನ ಸತ್ಯವನ್ನು ಶೋಧಿಸುತ್ತ -ಅದರಾಚೆಗಿನ ಪರಮಾರ್ಥದ ಚಿಂತನೆಗೆ ತೊಡಗಿದ್ದಾರೆ.

'ಕಟ್ಯಾವ ಬ್ಯಾರೇ' ಈ ಸ್ತ್ರೀರೂಪಿ ಜೀವಿಯನ್ನು ಸೃಷ್ಟಿಸಿದವನು ಬೇರೆ. ಅಂದರೆ ಅವಳು ಬೇರೆಯವರ ಮನೆಯವಳಾಗಿ ಹುಟ್ಟಿದವಳು. ಅವಳು ವಿವಾಹವಾಗಿ ಸಂಸಾರ ಹೂಡಿದಾಗ ಅವಳನ್ನು 'ಮುಟ್ಟಿ' ನೋಡಿಕೊಂಡವನು ಕವಿ ಅಂಬಿಕಾತನಯದತ್ತ. ಇವನೇ ಬೇರೆ. ಇದು ಜಗದ ರೀತಿ. ಆಗ ಪ್ರಶ್ನೆ ಏಳುತ್ತದೆ -'ನಾsನಾರೆ ನೀsನಾರೆ' ಅಂದರೆ 'ನಾನು ಯಾರು? ನೀನು ಯಾರು?' ಎಂಬ ಪ್ರಶ್ನೆ. ಅದರ ಇನ್ನೊಂದು ಅರ್ಥ ಜನಪದರ ನುಡಿಯಲ್ಲಿ 'ನಾನಾದರೂ ಆಗಲಿ ನೀನಾದರೂ ಆಗಲಿ' ಎಂಬ 'ನಾವು ಒಂದೇ ಬೇರೆ ಬೇರೆ ಅಲ್ಲ' ಎಂಬ

---

x. ಕೂಳು - ಶಬ್ದ ತನ್ನ ನಿಂದಕ ಅರ್ಥವನ್ನು ಬಿಟ್ಟು ಅದರ ಮೂಲಾರ್ಥ ಅನ್ನವನ್ನು ಹೊಂದಿರುವುದು ಸೋಜಿಗವಾಗಿದೆ.

ಕೂಡಿ ಬಾಳಿದ ಸಂಕೇತದ ಭಾವ. ಹೀಗೆ ಅರ್ಥಪೂರ್ಣವಾಗಿ ಸೇರಿದ್ದೇ - "ಏನು ಏನು?" ಎಂಬ ಪ್ರಶ್ನೆಯ ತತ್‌ಕ್ಷಣ ಹೊಮ್ಮುವ "ಜೇನು ಜೇನು" ಎಂಬ ಅನುಭವದ ಅರ್ಥ. ಅದು 'ಅಮೃತಧಾರೆ'. ಹೀಗೆ ಜೀವ ಭಾವ ಒಂದಾದ ದಾಂಪತ್ಯದಲ್ಲಿ ಅವರಿಗೆ ತನ್ನನ್ನು ರೂಪಿಸಿದ ಪತ್ನಿಯು-ಧಾರವಾಡದಾಕಿ ದುರ್ಗಾಮಾತೆಯ ಒಂದು ಅಂಶ ಎಂಬ ಅನುಭವ.

**'ಚಿತ್ರಾ-ಶ್ರವಣ-ತಾರೆ**

'ಚಿತ್ರಾ-ಶ್ರವಣ-ತಾರೆ
ಮೃಗಶಿರಾ-ಮಘಾ ತೆರೇ'

ಚಿತ್ರಾ ಎಂದರೆ ದೃಶ್ಯ. ಶ್ರವಣ ಎಂದರೆ ಕೇಳು. ವ್ಯಕ್ತಿಯು ತನ್ನ ಬಾಳಿನಲ್ಲಿ 'ತಾರೆ'ಯಂತಾಗಲು ದೃಷ್ಟಿ ಹರಿದು ನೋಡಿ ವಿಷಯವನ್ನು ಸ್ಪಷ್ಟಗೊಳಿಸಿಕೊಳ್ಳುತ್ತ, ಅದು ಅವನ ಕಾಣ್ಕೆಯಾಗುವಂತೆ ಚಿಂತನ ಶೀಲನಾಗಬೇಕು. ಅದಕ್ಕೆ ಪೂರಕವಾಗಿ ಹಂಗು ತೊರೆದು ಕೇಳಿ ವಿಷಯದ ಶ್ರವಣಧ್ಯಾನಿಯಾಗಬೇಕು ಎಂದಿದ್ದಾರೆ. ಅಂತಹ ಅರ್ಥಪೂರ್ಣ ಬಾಳು 'ತಾರೆ' ಯಂತಹದು. ಹೀಗೆ ವ್ಯಕ್ತಿ ಎಂಬ ಕಾಳು ದೃಷ್ಟಿ ಹಾಗೂ ಶ್ರವಣದಿಂದ ಪುಷ್ಟಿಗೊಂಡು 'ತಾರೆ'ಯಂತಾಗಿ 'ಮುಕ್ಕು ಚಿಕ್ಕೆಯ ಕಾಳು'[x] ಆದಾಗ ಮೃಗಶಿರಾ, ಮಾಘ ಮಾಸದ ಮಳೆಗಾಲ ತೆರೆದುಕೊಳ್ಳುತ್ತದೆ. ಬೆಳೆ ಸಮೃದ್ಧಿಯಾಗುತ್ತದೆ, ವ್ಯಕ್ತಿಯ ವಿಕಾಸವಾಗುತ್ತದೆ ಎಂಬ ಚಿಂತನೆ ಈ ಕಾವ್ಯದಲ್ಲಿದೆ. ಈ ಕಾವ್ಯದ ನುಡಿಗಳು ಪ್ರತೀಕಗಳಾಗಿ ಓದುಗನ ಅರಿವನ್ನು ಜಾಗೃತಗೊಳಿಸುತ್ತ ಚಿಂತನೆಯ ಪರಿಧಿಯನ್ನು ವಿಸ್ತರಿಸುವ ಚೈತನ್ಯವನ್ನು ಹೊಂದಿವೆ. ಈ ಕಾವ್ಯವು ಗುರುವಿಗೆ ಶರಣಾದ ವ್ಯಕ್ತಿ 'ಮುಕ್ಕು ಚಿಕ್ಕೆಯ ಕಾಳು'[x] ಆಗಿ ಪೂರ್ಣತ್ವವನ್ನು ಪಡೆದಾಗ ಪ್ರಕೃತಿಯು ಅವನಿಗೆ ಪೋಷಕವಾಗಿ ಅವನನ್ನು ಬೆಳೆಸುತ್ತದೆ ಎಂಬ ಸತ್ಯವನ್ನು

x. "ಮುಕ್ಕು ಚಿಕ್ಕೆಯ ಕಾಳು"= ಒಂದು ಹಿಡಿಯಷ್ಟು ನಕ್ಷತ್ರದಂತಹ ಹೊಳಪಿನ ಸತ್ತ್ವಭರಿತ ಕಾಳು.

ಸಾರುತ್ತದೆ. ಜೊತೆಗೆ ಹಾಗೆ ಬೆಳೆದ ವ್ಯಕ್ತಿಯು ಸಮೃದ್ಧಿಯ ಧಾನ್ಯವಾಗುವ, ಜೀವಪೋಷಕ ಶಕ್ತಿಯಾಗುವ 'ಕೂಳು' ಆಗುತ್ತಾನೆ ಎಂಬ ವಿಶ್ವವ್ಯಾಪಿ ಚಿಂತನೆಯನ್ನು, ವ್ಯಕ್ತಿ ಚೇತನದ ಶ್ರೀಮಂತಿಕೆಯನ್ನು ತಿಳಿಸುತ್ತದೆ.

ಗುರುವಿನ ಸ್ಥಾನ ಹಾಗೂ ಮಾನವನ್ನವಲಂಬಿಸಿ ಶ್ರೇಷ್ಠತೆ ಪ್ರಾಪ್ತವಾಗುವುದು ಸಾಮಾನ್ಯ. ಶಿಷ್ಯನಿಗೆ ಗುರುವಿನ ಉಪದೇಶದ ತಿಳುವಳಿಕೆ ಆಗುವುದು ಮುಖ್ಯ ಎಂಬುದು ಬೇಂದ್ರೆಯವರು ಪ್ರತಿಪಾದಿಸಿದ ವಿಶೇಷ. ಪ್ರಜ್ಞಾಪ್ರಕಾಶಕ್ಕೆ ಕಾರಣನಾಗುವಂಥವನೇ ಶ್ರೇಷ್ಠ ಗುರುವಾಗಬಲ್ಲ ಎಂಬ ನಿಲುವು ಬೇಂದ್ರೆಯವರದು. ಆದುದರಿಂದಲೇ ಬೇಂದ್ರೆಯವರು ಈ ಕವನದಲ್ಲಿ ತಮ್ಮ ಯಾವ ಗುರುವಿನದೂ ನಾಮೋಲ್ಲೇಖ ಮಾಡಿಲ್ಲ. ಅವರೆಲ್ಲರ ಬೋಧ ತಮಗೆ ಆಗಿದೆ ಎಂಬ ವಿಷಯವನ್ನು ಗುಪ್ತವಾಗಿಟ್ಟು, ಬೋಧದ ವಿವರಣೆಗೆ ಕವನದ ರೂಪ ಕೊಟ್ಟಿದ್ದಾರೆ. Impersonality ಕೂಡ ಕಾವ್ಯವಾಗುತ್ತದೆ ಎಂಬುದಕ್ಕೆ ಈ ಕವನವೇ ಉದಾಹರಣೆಯಾಗಿದೆ. ಈ ಕವನದ ಸ್ವರೂಪ ನೋಡಿದರೆ ಇದೊಂದು ಸಾಧಾರಣ ಕವನದಂತಿದೆ. ಆದರೆ ಅದರ ಆಂತರ್ಯದ ಸ್ಪಷ್ಟತೆ, ಒಳ್ಳೆತನ ವಿಚಾರದನಂತರ ವಿಶದಗೊಳ್ಳುತ್ತದೆ. ಈ ಕವನ ಅಷ್ಟು ವಿಚಾರಶೂನ್ಯವಾಗಿ ಓದುವುದಲ್ಲ. ಅದು ಆಳವಾದ ವಿಚಾರಮಾಡಿ ತಿಳಿದುಕೊಳ್ಳಬೇಕಾದ ಸತ್ತ್ವವನ್ನು ಹೊಂದಿದೆ.

* * *

# ೯. ಮತ್ತೆ ಬಂತು ಶ್ರಾವಣಾ

ಸಂವತ್ಸರ ಸೂರ್ಯಪಾನ
ಅಭಿಜಿನ್ಮನ ಊರ್ಧ್ವಧ್ಯಾನ
ಧ್ರುವಮಂಡಲ ಭಕ್ತಿಗಾನ
ಸರಿಗಮಪದ ಏಕತಾನ
ಬರುತಲಿಹುದು ಶ್ರಾವಣಾ
ಮತ್ತೆ ಬಂತು ಶ್ರಾವಣಾ.

ದಿನ ದಿನಾ ನವೀನ ಜನನ
ಗಗನ ಗಹನ ಯಂತ್ರ ಘನ
ನ ಮಮ ನಮೋ ಮಂತ್ರ ಮನ
ತನು ತಾನೆನೆ ತಂತ್ರ ತನ
ಬರುತಲಿಹುದು ಶ್ರಾವಣಾ
ಮತ್ತೆ ಬಂತು ಶ್ರಾವಣಾ.

ತನು ಮನ ಘನ ಪ್ರಾಣಿಯಾಗಿ
ಜತೆಗು ನಾಗವೇಣಿಯಾಗಿ
ಪಥದಲಿ ತತ್ ತ್ರಾಣಿಯಾಗಿ
ಬಿನ್ನಾಣದ ಶ್ರೇಣಿಯಾಗಿ
ಬರುತಲಿಹುದು ಶ್ರಾವಣಾ
ಮತ್ತೆ ಬಂತು ಶ್ರಾವಣಾ.

ಖಗ ನಗ ಜಗ ಸಂಮುಖ
ಬಾಚುವ ರವಿ ಕಿರಣ ನಖ
ತಮದ ಬಸಿರೊಳಮರ ಮುಖ

ನಿರಂತರದ ಸಖಿ-ಸಖಿ-ಸುಖ
ಬರುತಲಿಹುದು ಶ್ರಾವಣಾ
ಮತ್ತೆ ಬಂತು ಶ್ರಾವಣಾ.

ರಾಧಾ ಧರ ಸುರಿಯುವಲ್ಲಿ
ಯಮುನಾ ಜಲ ಹರಿಯುವಲ್ಲಿ
ವೃಂದೆಯ ಚಿತೆ ಉರಿಯುವಲ್ಲಿ
ತುಲಸಿಯು ಒಡಮುರಿಯುವಲ್ಲಿ
ಬರುತಲಿಹುದು ಶ್ರಾವಣಾ
ಮತ್ತೆ ಬಂತು ಶ್ರಾವಣಾ.

ಸಖೀ ಸ್ಮರಣ ಮುಕುರದಲ್ಲಿ
ಮಂಗಲ ಮುಖ ದೂರದಲ್ಲಿ
ಆ ಮಿಲಿಂದ ತೀರದಲ್ಲಿ
ಮಧುರಸ್ಮಿತ ಪೂರದಲ್ಲಿ
ಬರುತಲಿಹುದು ಶ್ರಾವಣಾ
ಮತ್ತೆ ಬಂತು ಶ್ರಾವಣಾ.

ಬ್ರಹ್ಮರಂಧ್ರ ಗೀತಾಗಮ
ಬೆನ್ ಬಿದಿರಿಗೆ ಧ್ವನಿ ಸಂಗಮ
ಶೇಷ ಶ್ವಾಸ ಸಮ ಘಮಘಮ
ಜೀವ ಭಾವ ಹೃದಯಂಗಮ
ಬರುತಲಿಹುದು ಶ್ರಾವಣಾ
ಮತ್ತೆ ಬಂತು ಶ್ರಾವಣಾ.

---

ಆಕರ: ದ.ರಾ. ಬೇಂದ್ರೆ., ಮತ್ತೆ ಶ್ರಾವಣಾ ಬಂತು, ಸಮಾಜ ಪುಸ್ತಕಾಲಯ, ಧಾರವಾಡ ೧೯೭೩, ಪು. ೪೯-೫೦.

# ಮತ್ತೆ ಬಂತು ಶ್ರಾವಣಾ

'ಮತ್ತೆ ಶ್ರಾವಣಾ ಬಂತು' ಕವನ ಸಂಕಲನ ಪ್ರಮಾದಿ ಶ್ರಾವಣ ಮಾಸ ೧೯೭೩ ರಲ್ಲಿ ಪ್ರಕಟವಾಗಿದೆ. ಆ ಸಂಗ್ರಹಕ್ಕೆ ಮುನ್ನುಡಿಯನ್ನು ಬರೆಯುತ್ತ ದ.ರಾ.ಬೇಂದ್ರೆಯವರು 'ಶ್ರಾವಣ ನವೋನವ ಸುಖ ದುಃಖ ಸಂಗಮ......, ಬಾಲ್ಯದ ಎಲ್ಲ ನೆನಪುಗಳು ಇಲ್ಲಿ ಬಂದಿಲ್ಲ. ಎಷ್ಟು ಬರೆದರೆ ಮುಗಿದೀತು? ಕನ್ನಡಿಯಲ್ಲಿ ನೋಡಿದಾಗ ಎಲ್ಲರಿಗೂ ತಮ್ಮ ತಮ್ಮ ಮುಖವೆ ಕಾಣುತ್ತದೆ.' ಎಂದು ನುಡಿದಿದ್ದಾರೆ. ಈ ಕವನ ಸಂಕಲನದ ಭಾಗ-೧ 'ಶ್ರಾವಣ ಬಂತು' ಬಾಲ್ಯಕಾಂಡವಾಗಿದ್ದು, ಅಲ್ಲಿ ೧೯೧೯ರವರೆಗಿನ 'ಸ್ಮೃತಿ-ಚಲನ-ವಲನ-ಚಿತ್ರಮಾಲೆ' ಇದೆ. ಭಾಗ-೨ 'ಮತ್ತೆ ಬಂತು ಶ್ರಾವಣಾ' ಅವರ ಪತ್ನಿ ಲಕ್ಷ್ಮೀಬಾಯಿಯವರು ಕಾಯಿಲೆ ಬಿದ್ದು ಆಸ್ಪತ್ರೆಯಲ್ಲಿದ್ದಾಗ; ಅವರು ತೀರಿಹೋದ ದಿನ ೧೭-೮-೧೯೬೬ ರ ಮೊದಲು ಮತ್ತು ಅನಂತರ ತಮ್ಮ ಸಖಿಸಖಿ ಭಾವದ ತೀವ್ರ ಕಾವಿನಲ್ಲಿ ಬರೆದವು. ಬಾಲ್ಯ ಮತ್ತು ಮುಪ್ಪಿನ ಗಾಢ ಅನುಭವದ ಹಿನ್ನೆಲೆಯಲ್ಲಿ ಜೀವನತತ್ವವನ್ನು ಅರಸುತ್ತ ಸಾಗಿದ ಕವನ 'ಮತ್ತೆ ಬಂತು ಶ್ರಾವಣಾ'. ಅದನ್ನು ರಚಿಸಿದ್ದು ೧೧-೧-೧೯೬೯ ರಲ್ಲಿ.

ಬೇಂದ್ರೆಯವರು 'ಮತ್ತೆ ಬಂತು ಶ್ರಾವಣಾ' ಕಾವ್ಯದಲ್ಲಿ ವ್ಯಕ್ತಿಯ ಶ್ರವಣ ಶಕ್ತಿಯ ಜಾಗೃತಿಯನ್ನು, ಏಕಾಗ್ರಮನಸ್ಸಿನ ಸಾಧನೆಯನ್ನು, ಜೀವನದ ಅರ್ಥ ಆನಂದವನ್ನು ಶ್ರಾವಣಮಾಸದ ರೂಪಕದಲ್ಲಿ ಚಿತ್ರಿಸಿದ್ದಾರೆ. ಶ್ರಾವಣದಲ್ಲಿ ಬೀಜ ಮೊಳಕೆಯೊಡೆದು ಪೂರ್ಣತೆಯತ್ತ ಸಾಗುತ್ತದೆ. ಅದೇ ರೀತಿ ವ್ಯಕ್ತಿಯು ಆ ಮಾಸದಲ್ಲಿ ವರ್ಷದ ನಿರಂತರಧಾರೆಯಂತೆ -'ಶ್ರಾವಣ ಬಂದಾ । ಕಿವಿ ತೆರಿ ಎಂದಾ' - ಎಂಬ ದನಿ ಆಲಿಸಿ ಶ್ರವಣ ಪ್ರತಿಭೆಯನ್ನು ಜಾಗೃತಗೊಳಿಸಿಕೊಂಡು ಪೂರ್ಣತ್ವದತ್ತ ಸಾಗಲು ಸಾಧ್ಯ ಎಂದಿದ್ದಾರೆ.

ಆರು ಸಾಲುಗಳ ಏಳು ನುಡಿಗಳಿರುವ ಆ ಕಾವ್ಯದಲ್ಲಿ 'ಬರುತಲಿಹುದು ಶ್ರಾವಣಾ । ಮತ್ತೆ ಬಂತು ಶ್ರಾವಣಾ।' ನುಡಿ ಅನುರಣನಗೊಳ್ಳುತ್ತ - ಬೆಳಕು,

ಜ್ಞಾನ, ಸತ್ಯವು ಶ್ರವಣ ಪ್ರತಿಭೆಯಿಂದ ಸಾಗಿ ಬರುತ್ತಿರುವುದನ್ನು; ಅದು ಮರ ಮರಳಿ ಬರುವುದನ್ನು ಸೂಚಿಸಿದ್ದಾರೆ. ಪ್ರತಿ ಅನುರಣನ ನುಡಿಗೆ ಮೊದಲು ಶ್ರಾವಣ ಮಾಸದಲ್ಲಿ ಕವಿಗೆ ಉಂಟಾದ ವಿವಿಧ ಅನುಭವವೂ, ಶ್ರಾವಣದ ವೈಶಿಷ್ಟ್ಯವೂ ರೂಪಕಾತ್ಮಕವಾಗಿ ವರ್ಣಿತವಾಗಿದೆ.

ಶ್ರಾವಣ ಜೀವಸಂಜೀವಿನಿಯ ಮಾಸ. ಇಡೀ ಜಗತ್ತಿಗೆ ಮಳೆಯನ್ನು ನೀಡಿ, ಹಸಿರು ಹೊಮ್ಮಿಸಿ ಜೀವಜಂತುಗಳು ಬದುಕಿ ಬಾಳುವಂತೆ ಮಾಡುವ ಮಾಸ. ಅದು ಬಾನು ಭುವಿಯ ನೇಹದ ನೇಯ್ಗೆಯ; ಒಂದು ಇನ್ನೊಂದನ್ನು ಬಿಡದೆ ಸೆಳೆಯುವ; ಧ್ಯಾನಶೀಲವಾದ, ಧ್ರುವ ಭಕ್ತಿಯ ಸುಮಧುರ ಗಾನದಂತಹ ಬಂಧ. ಆದಕಾರಣ ಕವಿಯು ವ್ಯಕ್ತಿಯನ್ನು ಪ್ರಕೃತಿಯ ಆ ಸಂಮೋಹಕ ಐಕ್ಯಭಾವದ ಚಿಂತನೆಯ ಕೇಂದ್ರಕ್ಕೆ ಎಳೆದೊಯ್ಯುತ್ತ; ಅದನ್ನು ಸಾಧಿಸುವ ಶಕ್ತಿ ಅವನಲ್ಲಿರುವುದನ್ನು ಹೇಳುತ್ತ; ಅವನ ಅಂತಃಶಕ್ತಿಯನ್ನು ಜಾಗೃತಗೊಳಿಸಿ ಆ ಮೂಲಕ ಅವನ ಹಾಗೂ ಸಮಾಜದ ಒಳಿತನ್ನು ಆಶಿಸಿದ್ದಾರೆ. ವ್ಯಕ್ತಿ ಬೆಳಕಿಗೆ ಆಕರ್ಷಿತನಾಗಿ ಸೂರ್ಯಪಾನದಂತೆ ಮುಖ ಮಾಡದಿದ್ದರೆ, ಸೂರ್ಯತೇಜದ ದಿವ್ಯ ಪ್ರಖರತೆಯ ಅಭಿಜಿನ್ ಮುಹೂರ್ತದಲ್ಲಿ ಆ ಬೆಳಕನ್ನು ಕುರಿತು ಮೇಲ್ಮುಖದ ಉನ್ನತ ಆಲೋಚನೆಗೆ ಊರ್ಧ್ವಧ್ಯಾನ ಶೀಲನಾಗದಿದ್ದರೆ; ಆ ಬೆಳಕಿನ ಅಂದರೆ ಸತ್ಯದ ಶೋಧಕ್ಕೆ ಧ್ರುವನಂತೆ ತಪಸ್ವಿಯಾಗಿ ಭಕ್ತಿಶೀಲನಾಗದಿದ್ದರೆ; ಆ ದಿಸೆಯಲ್ಲಿ ಅವನ ದೇಹ ಮತ್ತು ಮನಸ್ಸು ಸಂಗೀತದ ಸುಸ್ವರದಂತೆ ಮಿಡಿಯದಿದ್ದರೆ; ಆ ಬೆಳಕು ಮತ್ತು ಸತ್ಯವನ್ನು ತಿಳಿಯಲಾಗುವುದಿಲ್ಲ. ಆದ ಕಾರಣ ಅದರ ಸಾಧ್ಯತೆಗಾಗಿ, ಆ ಎಲ್ಲ ಗುಣವೂ ಅವನಲ್ಲಿ ಉಂಟಾಗುವಂತೆ ಮಾಡಲು ಶ್ರಾವಣ ಮಾಸವಿದೆ. ಅದು ಅವನನ್ನು ಊರ್ಧ್ವಗಾಮಿಯಾಗುವಂತೆ ಮಾಡುತ್ತದೆ. ಹಾಗೆ ಮಾಡಲು ಅದು ಮತ್ತೆ ಮತ್ತೆ ಬರುತ್ತಿದೆ. ಬಂದು ಅವನಲ್ಲಿ ಆ ಚಿಂತನೆಯನ್ನು ಶ್ರವಣಪ್ರತಿಭೆಯ ಮೂಲಕ ನೀಡಿ ಅವನನ್ನು ಆಲೋಚನೆಯ ಏಕತಾನಕ್ಕೆ ಒಳಗಾಗಿಸುತ್ತಿದೆ.

* * *

ಇಡೀ ಪ್ರಕೃತಿಯನ್ನು ಚೈತನ್ಯಶೀಲವಾಗಿಸಿ 'ಇದು ಎಂಥ ಹಸುರಿನ ಕಂಪ। ತಿಳಿಯದ ತಂಪ' ಎನಿಸುವ ಶ್ರಾವಣವನ್ನು ಕಂಡ ಕವಿ ಅದನ್ನು ರೂಪಿಸಿದ ಗಗನದಲ್ಲಿ ನಾವು ತಿಳಿಯಲಾಗದ ಒಂದು ಗಹನ ಘನಯಂತ್ರವಿದ್ದು ; ಅದು ಪ್ರತಿದಿನದ ಹೊಸ ಸೃಷ್ಟಿಗೆ ಕಾರಣವಾಗಿರಬಹುದೇ ಎಂದು ಊಹಿಸಿದ್ದಾರೆ. ಯಂತ್ರ ಸದಾ ಚಟುವಟಿಕೆಯಿಂದಿರುವ ಸಾಧನ. ಅದರ ರೂಪಕವನ್ನು ನೀಡುತ್ತ ಬೇಂದ್ರೆಯವರು ಮನಸ್ಸು ಮಂತ್ರವನ್ನು ಜಪಿಸುವ ಅಂದರೆ ಚಿಂತನ ಶೀಲವಾಗುವ ಕ್ರಿಯೆಯಿಂದಿದೆ; ಅದಕ್ಕೆ ತಕ್ಕಂತೆ ಈ ಶರೀರ ತಾಂತ್ರಿಕ ಗುಣದಿಂದ ನಡೆಯುತ್ತ ಚಲನಶೀಲವಾಗಿದೆ. ಈ ತಿಳಿವನ್ನು ನೀಡುವಂತೆ ಶ್ರಾವಣ ಮತ್ತೆ ಬಂದಿದೆ ಎಂದಿದ್ದಾರೆ.

* * *

ಪ್ರಕೃತಿಯಲ್ಲಿ ಚೈತನ್ಯಶೀಲವಾದ ವಿಶಿಷ್ಟ ಶರೀರ ಮತ್ತು ಮನಸ್ಸಿನಿಂದ ಕೂಡಿದ ಪ್ರಾಣಿಯಾಗಿ ರೂಪುಗೊಂಡ ಮಾನವ ತನ್ನ ಆಕಾರದಂತೆ ಘನವಾದ ಅಂದರೆ ಯಾವುದೇ ಕೊರತೆಯಿಲ್ಲದೆ ಸೃಷ್ಟಿಯಾದ ಶಕ್ತಿಶಾಲಿ. ಈ ಮಾನವನು ಸಾಧಾರಣ ಪ್ರಾಣಿಯಲ್ಲ. ಇವನ ಶರೀರದಲ್ಲಿಯೇ ನಾಗವೇಣಿಯಿದೆ. ಅಂದರೆ ಅಧ್ಯಾತ್ಮ ಭಾಷೆಯಲ್ಲಿ ಕರೆಯುವ ನಾಗಸರ್ಪದಂತಿರುವ ಕುಂಡಲಿನೀ ಶಕ್ತಿ ಇದೆ. ಅದನ್ನು ಕುರಿತು ಬಿ. ಪುಟ್ಟಸ್ವಾಮಯ್ಯನವರು ನೀಡಿರುವ ವಿವರ ಹೀಗಿದೆ: 'ವೇದಸಾಹಿತ್ಯದಲ್ಲಿ ಎಲ್ಲಿಯೂ 'ಕುಂಡಲಿನೀ' ಶಬ್ದ ದೊರಕುವುದಿಲ್ಲ ವಾದರೂ, ದ್ವಾದಶೋಪನಿಷತ್ತುಗಳಲ್ಲಿ ಪ್ರಾಚೀನವಲ್ಲದ ಕೆಲವು ಉಪನಿಷತ್ತುಗಳಲ್ಲಿ ಕುಂಡಲಿನೀಯೋಗದ ಉಲ್ಲೇಖ ಹೇರಳವಾಗಿ ದೊರಕುತ್ತದೆ. ಬ್ರಹ್ಮಾಂಡದಲ್ಲಿ ಕುಂಡಲಿ ರೂಪದಿಂದ ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣಳಾದ ದೇವಿಯೇ ಮಾನವನ ಸೂಕ್ಷ್ಮ ದೇಹದ ಮೂಲಾಧಾರ ಚಕ್ರದಲ್ಲಿ ಕುಂಡಲಿನಿ ಶಕ್ತಿಯಾಗಿ ಸರ್ಪದಂತೆ ಮೂರುಸುತ್ತು ಸುತ್ತಿಕೊಂಡು ಸುಪ್ತಸ್ಥಿತಿಯಲ್ಲಿ ಸೂಕ್ಷ್ಮರೂಪದಿಂದ ಇರುವಳು. ಯೋಗಸಾಧನೆಯಿಂದ

ಎಚ್ಚರಿಸಲ್ಪಟ್ಟಾಗ ಈ ಶಕ್ತಿಯು ಕ್ರಮವಾಗಿ ಸ್ವಾದಿಷ್ಠಾನ, ಮಣಿಪುರ, ಅನಾಹತ, ವಿಶುದ್ಧಿ, ಆಜ್ಞಾಚಕ್ರಗಳನ್ನು; ಬ್ರಹ್ಮ, ವಿಷ್ಣು, ರುದ್ರ ಗ್ರಂಥಿಗಳನ್ನು ಭೇದಿಸಿಕೊಂಡು ಶಿರಸ್ಸಿನಲ್ಲಿರುವ ಸಹಸ್ರಾರ ಚಕ್ರದಲ್ಲಿ ಶಿವನನ್ನು ಕೂಡಿ, ಕರ್ಣಿಕಾರೂಪದಿಂದ ಅಲ್ಲಿರುವ ಚಂದ್ರಮಂಡಲವನ್ನು ಕಡಿದು ಅಮೃತವನ್ನು ಸುರಿಸುವಳು. ಇದನ್ನೇ ಆದಿಶಂಕರರು 'ಮಹೀಂ ಮೂಲಾಧಾರೇ' ಎಂದು ಪ್ರಾರಂಭವಾಗುವ ಸೌಂದರ್ಯಲಹರಿಯ ಪದ್ಯದಲ್ಲಿ ಹೀಗೆ ಹೇಳಿದ್ದಾರೆ: "ಎಲೈ ದೇವಿಯೇ, ಮೂಲಾಧಾರದಲ್ಲಿರುವ ಪೃಥ್ವೀತತ್ವವನ್ನೂ, ಮಣಿಪೂರದಲ್ಲಿ ಜಲತತ್ವವನ್ನೂ, ಸ್ವಾದಿಷ್ಠಾನದಲ್ಲಿ ಅಗ್ನಿ ತತ್ವವನ್ನೂ, ಕಂಠದಲ್ಲಿರುವ ವಿಶುದ್ಧಿ ಚಕ್ರದಲ್ಲಿ ಆಕಾಶತತ್ವವನ್ನೂ, ಹುಬ್ಬುಗಳ ನಡುವೆ ಇರುವ ಆಜ್ಞಾಚಕ್ರದಲ್ಲಿ ಮನಃತತ್ವವನ್ನೂ ಭೇದಿಸಿ ಸಹಸ್ರಾರ ಪದ್ಮದಲ್ಲಿ ರಹಸ್ಯವಾಗಿ ಪತಿಯನ್ನು ಸೇರಿ ವಿಹರಿಸುವೆ."[1]

ಅಂತಹ ಕುಂಡಲಿನೀಯನ್ನು ಹಠಯೋಗದಿಂದ ಸಾಧಿಸಿದವನ ಶಿರದಲ್ಲಿರುವ ಸಹಸ್ರಕಮಲದ ಬೆಳಕಿನಲ್ಲಿ ಕೋಟಿ ಸೂರ್ಯಪ್ರಕಾಶ ಲಭ್ಯವಾಗುತ್ತದೆ. ಅದು ಸಾವಿಲ್ಲದ ಸಮಾಧಿ ಸ್ಥಿತಿ. ಅದೇ ಪೂರ್ಣತ್ವದ ಪರಮ ಜ್ಞಾನ ಸಾಧನೆ ಎಂದು ಯೋಗಿಗಳು ಹೇಳುವರು.

ತನುಮನ ಘನ ಪ್ರಾಣಿಯಾಗಿ
ಜತೆಗು ನಾಗವೇಣಿಯಾಗಿ
ಪಥದಲಿ ತತ್ ತ್ರಾಣಿಯಾಗಿ
ಬಿನ್ನಾಣದ ಶ್ರೇಣಿಯಾಗಿ
ಬರುತಲಿಹುದು ಶ್ರಾವಣಾ
ಮತ್ತೆ ಬಂತು ಶ್ರಾವಣಾ.

---

1. ಬಿ. ಪುಟ್ಟಸ್ವಾಮಯ್ಯ, 'ಶ್ರೀ ಲಲಿತಾ ಸಹಸ್ರ ಸಾಂಗತ್ಯ', ಶಾರದಾ ಪ್ರಕಟನಾಲಯ, ಬೆಂಗಳೂರು, ೧೯೭೬, ಪು. ೨೩೩, ೨೩೪.

ಹಾಗೆ ಯೋಗದ ಸಾಧನಾ ಮಾರ್ಗದಲ್ಲಿ ಸಾಗುವಾಗ ಆ 'ತತ್' ಎಂಬ ಪರಬ್ರಹ್ಮವನ್ನು ಸೇರಲು ಬೇಕಾಗುವ ಸಾಧನವೇ ಬೆನ್ನು ಹುರಿಯಲ್ಲಿರುವ ತ್ರಾಣ. ಅದು ಬಿರುಬಿಸಿಲಿನಲ್ಲಿ ಹೊಲ ಉಳುವ ರೈತನು ತನ್ನ ಕೃಷಿಯ ಗೇಯ್ಮೆ ಪೂರ್ಣಗೊಳಿಸಲು, ತನ್ನ ಸಾಧನಾ ಮಾರ್ಗದಲ್ಲಿ ಸಾಗಲು - ದಣಿವಾದಾಗ ಬಾಯಾರಿಕೆಯನ್ನು ಆರಿಸಿಕೊಳ್ಳುತ್ತ ದುಡಿಯಲು - ಬೆನ್ನಿಗೆ ಆನಿಸಿಕೊಂಡ ತತ್ರಾಣಿಯಲ್ಲಿ ಸಂಗ್ರಹಿಸಿಟ್ಟಿರುವ ತ್ರಾಣದಾಯಕ ನೀರಿನಂತೆ. ಶರೀರದ **ಬೆನ್ನುಹುರಿ ಸಾಧನಾಮಾರ್ಗದ ತತ್ರಾಣಿ. ಅಲ್ಲಿಯೂ ದ್ರವದ ಚಲನೆ, ತತ್ರಾಣಿಯಲ್ಲಿಯೂ ದಾಹದಾರಿಕೆಯ ನೀರಿನ ಸಂಗ್ರಹಣೆ. ಹೀಗೆ ಬೇಂದ್ರೆಯವರು ರೈತನ ಉಳುಮೆಯ ಸಾಧನೆಯನ್ನು ಜ್ಞಾನಿಯ ಜ್ಞಾನಸಾಧನೆಯನ್ನು ಏಕತ್ರಗೊಳಿಸಿ ತತ್ರಾಣಿ (ತತ್+ತ್ರಾಣಿ)ಯ ರೂಪಕವನ್ನು ಸಮರ್ಥವಾಗಿ ಬಳಸಿದ್ದಾರೆ. ಬೇಂದ್ರೆಯವರು ಪದದೊಡನೆ ಆಟವಾಡಿ ವ್ಯಂಗ್ಯಾರ್ಥದ ಆನಂದ ಪಡೆವ ರೀತಿಗೆ ಇದೊಂದು ಉದಾಹರಣೆ.**

ಅಧ್ಯಾತ್ಮ ಪಥವೆಂಬುದು ವೈಜ್ಞಾನಿಕ ರೀತಿಯಲ್ಲಿ ವ್ಯವಸ್ಥಿತವಾಗಿ ಹಂತಹಂತವಾಗಿ ಅರಿತು ಸಾಗಬೇಕಾದುದು. ಅದು 'ಬಿನ್ನಾಣದ ಶ್ರೇಣಿ'. ಶ್ರಾವಣ ಎಂದರೆ ಬೆಳವಣಿಗೆ, ವೃದ್ಧಿ, ಸಮೃದ್ಧಿ ಪ್ರಗತಿ. ಶ್ರಾವಣದಲ್ಲಿಯ ನಿಸರ್ಗದ ಅಭಿವೃದ್ಧಿಯಂತೆ ವ್ಯಕ್ತಿಯಲ್ಲಿಯ ಜ್ಞಾನ ಅಭಿವೃದ್ಧಿಯಾಗಬೇಕು. ಅದನ್ನು ನೀಡಲು ಶ್ರಾವಣ ಮತ್ತೆ ಬಂತು ಎಂದಿದ್ದಾರೆ.

ಈ ಜಗತ್ತಿನ ಸೃಷ್ಟಿ ಕ್ರಿಯೆಯಲ್ಲಿ ಒಂದು ಇನ್ನೊಂದಕ್ಕೆ ಆಕರ್ಷಿತವಾಗಿ ಆನಂದ ಆಹ್ಲಾದವನ್ನು ಅನುಭವಿಸಲು `ನಾನೀನ ನುಡಿ ನುಂಗಿ ತಾನೀನ ತಾನೆತಾ। ತಾನಾಗಿ ತನನನನ ಬಂಧಾಂಗ' ಎಂಬ ರೀತಿ ಒಂದಾಗಬೇಕು. ಹಾಗೆ ಒಂದಾಗುವ ಗುಣ ಈ ಪ್ರಕೃತಿಯ ಜೀವರಾಶಿಯಲ್ಲಿದೆ. ಈ ಜಗತ್ತಿನ ಪಕ್ಷಿ ಮತ್ತು ಮರ ಒಂದಕ್ಕೊಂದು ಪೋಷಕವಾಗಿದೆ. ಈ ಎಲ್ಲ ಜಡ ಚೇತನವನ್ನು ರವಿ ತನ್ನ ಕಿರಣದಿಂದ ಬಾಚಿ, ನೇವರಿಸಿ ಅಂದಗೊಳಿಸುತ್ತಿದ್ದಾನೆ. ಸೌಂದರ್ಯವೇ ಬೆಳಕು, ಕೆದರಿದ ಕೂದಲು ಅಶುಚಿಯ, ಅಜ್ಞಾನದ, ಮೌಢ್ಯದ, ಅನಾಗರಿಕತೆ,

ಅಸಂಸ್ಕೃತಿಯ ಲಕ್ಷಣ; ಅದು ಕತ್ತಲು. ಸೂರ್ಯನ ಕಿರಣನಖ ಅದನ್ನು ಬಾಚುತ್ತದೆ. ಅಲ್ಲಿ ಕತ್ತಲೆ ಹರಿದು ಬೆಳಕಾಗುತ್ತದೆ. ಕತ್ತಲಿನ ಒಡಲಿನಲ್ಲಿಯೇ ಬೆಳಕಿನ ಅಮರ ಮುಖವಿದೆ. ಅಂತಹ ಶಾಶ್ವತ ಆನಂದ ಸಖ ಸಖಿ ಭಾವದ ಪತಿ ಪತ್ನಿಯ ಗೆಣೆತನದಲ್ಲಿದೆ. ಅಲ್ಲಿ ಸುಖವಿದೆ.

ಬಾನು ಬೆಳಕು ಹೊಡಿದಲ್ಲೆ
ಕಡಲಿನಲ್ಲಿ ಮೂಡಿದಲ್ಲೆ
ನಲ್ಲ ನಲ್ಲೆ ಕೂಡಿದಲ್ಲೆ
ಹಿಗ್ಗಿಗುಂಟೆ ಮೇರೆ ಎಲ್ಲೆ?

ಹೀಗೆ ವಿಶ್ವಜಾಲದ ಗಂಡು ಹೆಣ್ಣಿನ ಸಖ್ಯಭಾವದ ಅಮರ ಮುಖವನ್ನು ಕಂಡ ಕವಿಗೆ ತನ್ನ ವೈಯಕ್ತಿಕ ದಾಂಪತ್ಯದ ಆನಂದ ನೆನಪಾಗಿ ವಿಶ್ವ ವಿಶಾಲ ಪ್ರಕೃತಿಯ ಒಂದು ಭಾಗ ತಾನು ಎನಿಸುತ್ತದೆ.

'ರಸಾ ಇದ್ದರ ಭಾವಾ
ಇರದಿದ್ದರ ಅಭಾವಾ'

ಎಂಬಂತೆ ಮಳೆಯ ರಸ ನೆಲಕ್ಕೆ ಸೋಕಿದ ತಕ್ಷಣ ಶ್ರಾವಣ ಮಾಸದಲ್ಲಿ:

'ಹುಡಿಯು ಅರಳಿ ಹೂವು ಆಗೆ
ಹುಳಕೆ ರೆಕ್ಕೆ ಒಡೆದವು
ಮುಸುಕು ಹರಿದು ಪಕ್ಕ ತೆರೆದು
ಚಿಟ್ಟೆ ಮುಕ್ತಿ ಪಡೆದವು.'

* * *

ಹಾಳು ಬೀಳು ಪಡುವು ಬಂಜೆ
ಹೊಕ್ಕ ಲೊಕ್ಕ ಲೆಲ್ಲವೂ

ವ್ಯಾಪ್ತ ವಾಯ್ತು ಹೂವ ಹೂವ
ರಾಸ ಲೀಲೆಗೆಲ್ಲವೂ.

ಎಂದು ನಿಸರ್ಗ ಜೀವಂತಿಕೆಯಿಂದ ಬೀಗುತ್ತದೆ. ಶ್ರಾವಣದಲ್ಲಿ ಹುಡಿ ಮಣ್ಣಿನ ಕಣಕಣವೂ ಜೀವಪಡೆದು ಹೂವಾಗಿ, ಹುಳುವಾಗಿ, ಹಾರಿ ನಲಿದು ಗೆಳೆತನದಿಂದ ರಾಸಲೀಲೆಯಲ್ಲಿ ನಲಿಯುವುದೊಂದು ವಿಶೇಷ. ಹೀಗಿರುವಾಗ ಅದೇ ಮಣ್ಣಿನಿಂದ ಹುಟ್ಟಿದ ಘನ ಪ್ರಾಣಿಯಾದ ಮಾನವನ ಗಂಡು ಹೆಣ್ಣಿನ ಸಖ್ಯ ಭಾವದ ಅಮರಮುಖ ಕಾಣಿಸಲು ಶ್ರಾವಣ ಮತ್ತೆ ಬಂತು ಎಂದು ಬಣ್ಣಿಸಿದ್ದಾರೆ.

* * *

ಬೇಂದ್ರೆಯವರು ದಾಂಪತ್ಯದ ಪಾವಿತ್ರ್ಯತೆಯನ್ನು ಕಾಪಾಡಿಕೊಂಡ ಪೌರಾಣಿಕ ಸ್ತ್ರೀ ಚೇತನಗಳನ್ನು ಮುಂದಿನ ನುಡಿಯಲ್ಲಿ ನೆನೆಯುತ್ತ, ಆ ಕಾರಣವೇ ಈ ನೆಲದಲ್ಲಿ ಮಳೆ ಸುರಿಯುತ್ತಿದೆ ಎಂದು ಹಾಡಿದ್ದಾರೆ. ಸೃಷ್ಟಿಯ ಹೂವು ಹೂವಿನಲ್ಲೂ ರಾಸಲೀಲೆಯನ್ನು ಕಂಡ ಕವಿ ಮಾನವರ ದಾಂಪತ್ಯದ ವಿವಿಧ ರೂಪ ವೈಭವವನ್ನು ನಮ್ಮ ನಾಡಿನ ಪೌರಾಣಿಕ ಕೃಷ್ಣನ ರಾಸಲೀಲೆಯಲ್ಲಿ ಬಣ್ಣಿಸಿದ್ದಾರೆ. ಕೃಷ್ಣರಾಧೆಯ ದಾಂಪತ್ಯವು ಅವರ ರಾಸಲೀಲೆಗೆ ಸಾಕ್ಷಿಯಾದ ಯಮುನಾ ಜಲದಂತಿತ್ತು ಎಂದು ಹೇಳುತ್ತ ಬೇಂದ್ರೆಯವರು ಸಖ ಸಖಿಯ ಪ್ರೇಮದ ನಿರಂತರತೆಯನ್ನು ಸಾರಿದ್ದಾರೆ.

ಗಂಡು ಹೆಣ್ಣಿನ ಸ್ನೇಹದ ಇನ್ನೊಂದು ಮುಖದಲ್ಲಿ ಪೌರಾಣಿಕ ವೃಂದೆಯ ಪಾವಿತ್ರ್ಯವನ್ನು ಕೆಡಿಸಿದ ವಿಷ್ಣುವು ಅವಳಿಂದ ಶಾಪ ಪಡೆದು ರಾಮನ ಅವತಾರದಲ್ಲಿ ಸೀತೆಯ ವಿಯೋಗ ವ್ಯಥೆ ಅನುಭವಿಸುವನು.[1] ತುಲಸಿಯ ಪತಿ ಶಂಖಚೂಡನನ್ನು ಸಂಹರಿಸಿದ ವಿಷ್ಣುವು ಶಂಖಚೂಡನ ಆಕಾರದಿಂದ

1. ಯಜ್ಞ ನಾರಾಯಣ ಉಡುಪ, ಪುರಾಣ ಭಾರತಕೋಶ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ೧೯೯೭, ಪು - ೫೯೪.

ಅವಳ ಸಮೀಪ ಬರಲು ಆಕೆ ಗಿಡವಾಗುವಳು.[2] ಇವೆರಡೂ ಸ್ತ್ರೀ ಶಕ್ತಿಯ, ಸ್ತ್ರೀ ಪಾತಿವ್ರತ್ಯದ ಕತೆಗಳು. ಅವು ಸ್ತ್ರೀ ಮಹತ್ವದ, ಪುರುಷಮಿತಿಯ ಸಂಕೇತಗಳು. ಸ್ತ್ರೀ ಪಾವಿತ್ರ್ಯ ಪೋಷಣೆ ಮಾಡಬೇಕಾದ ವಿಚಾರವಾಗಿ, ದಾಂಪತ್ಯದ ಶುದ್ಧತೆಯನ್ನು ಕಾಪಾಡಬೇಕಾದ ವಿಷಯುವಾಗಿ ಅವು ಪ್ರಮುಖವಾಗಿ ಬೇಂದ್ರೆಯವರು ಆ ಪಾವಿತ್ರ್ಯದ ಪೌರಾಣಿಕ ಘಟನೆಯನ್ನು ದಾಂಪತ್ಯದ ಸಂದರ್ಭದಲ್ಲಿ ಶ್ರಾವಣಮಾಸದಲ್ಲಿ ನೆನೆಯಬೇಕು ಎಂದು ಹಾಡಿದ್ದಾರೆ.

'ತುಲಸಿಯು ಒಡಮುರಿಯುವಲ್ಲಿ' ಎಂಬುದು ಇನ್ನೊಂದು ನೆಲೆಯಲ್ಲಿ ಆ ಪವಿತ್ರ ಸಸ್ಯ ಹುಟ್ಟಿದ ಪೌರಾಣಿಕ ಹಿನ್ನೆಲೆಯ ಕಥೆಯನ್ನು ಹೇಳುತ್ತದೆ. 'ಸಮುದ್ರ ಮಥನ ಕಾಲದಲ್ಲಿ ಅಮೃತ ಕಲಶವು ಹುಟ್ಟಿ ಬರಲು ವಿಷ್ಣುವು ಅದನ್ನು ಹಿಡಿದುಕೊಂಡಾಗ ಅವನ ಕಣ್ಣುಗಳಿಂದ ಆನಂದ ಬಾಷ್ಪವು ಉದುರಿ ಈ ಕಲಶದಲ್ಲಿ ಬೀಳಲು ಅದರಿಂದ ಒಂದು ಸಣ್ಣ ಗಿಡ ಹುಟ್ಟಿತು. ಇದೇ ತುಲಸಿ. ತುಲನೆಯಿಲ್ಲದ ಈ ಗಿಡವನ್ನು ಲಕ್ಷ್ಮಿಯೊಂದಿಗೆ ಶ್ರೀ ವಿಷ್ಣುವು ವಿವಾಹವಾದನು.[3] ಹೀಗೆ ಪವಿತ್ರ ಸಸ್ಯದ ಉಗಮ ದೇವರ ಸೃಷ್ಟಿ ಎಂಬ ಸೂಚನೆಯನ್ನು ನೀಡುತ್ತ, ಶ್ರಾವಣ ಮಾಸದ ಪಾವಿತ್ರ್ಯವನ್ನು ಬೇಂದ್ರೆ ಸಾರಿದ್ದಾರೆ.

* * *

ಕವಿ ಬೇಂದ್ರೆಯವರಿಗೆ ದಾಂಪತ್ಯದ ಅಮರ ಮುಖ ನೆನಪಾದಾಗ ದಿವಂಗತ ಸಖಿ ಲಕ್ಷ್ಮೀಬಾಯಿಯವರ ನೆನಪಾಗುತ್ತದೆ. ಆ ಸ್ಮರಣೆಯ ಕನ್ನಡಿಯಲ್ಲಿ ಅವರಿಗೆ ಕಾಣುವುದು ಆ ದಾಂಪತ್ಯದ ಫಲವಾದ ಮಧುರ ಮಗಳು ಮಂಗಲೆಯ ಮುಖ. ಆ ಮಗಳು ಹತ್ತಿರದಲ್ಲಿಲ್ಲ. ಅವಳು ದೂರದಲ್ಲಿ ತನ್ನ ಮಗ ಮಿಲಿಂದ ಮತ್ತು ಮಗಳು ಸ್ಮಿತಳ ಆನಂದದ ಪೂರದಲ್ಲಿದ್ದಾಳೆ. ಅವಳ ಆನಂದವೇ

2. ಅದೇ, ಪೃ - ೨೫೩.

3. ಅದೇ.

ತಂದೆಯ ಆನಂದ. ಹೀಗೆ ಬೆಳವಣಿಗೆಯ ಸದಾ ಹಸಿರಿನ ಸಂಕೇತವಾಗಿ ಸಂತೋಷವನ್ನು ತರುತ್ತ ಶ್ರಾವಣಾ ಮತ್ತೆ ಬಂತು ಎಂಬುದು ಈ ಕಾವ್ಯದ ಮಿಡಿತ.

ಸಖೀ ಸ್ಮರಣ ಮುಕುರದಲ್ಲಿ
ಮಂಗಲ ಮುಖ ದೂರದಲ್ಲಿ
ಆ ಮಿಲಿಂದ ತೀರದಲ್ಲಿ
ಮಂದ ಸ್ಮಿತ ಪೂರದಲ್ಲಿ.

* * *

ಶ್ರಾವಣದ ಜೀವಸೃಷ್ಟಿಯ, ಪೋಷಣೆಯ, ಆಹ್ಲಾದದ ಗುಣವನ್ನು ಹೇಳುತ್ತ ಬೇಂದ್ರೆಯವರು ನಮ್ಮ ಭಾರತೀಯ ಚಿಂತನೆಯ ಅಧ್ಯಾತ್ಮ ನೆಲೆಯ ಪ್ರಕಾಶವನ್ನು ಶ್ರಾವಣ ತನಗೆ ನೀಡಿತು ಎಂದು ಸಾರಿದ್ದಾರೆ.

ಬ್ರಹ್ಮರಂಧ್ರ ಗೀತಾಗಮ
ಬೆನ್ ಬಿದಿರಿಗೆ ಧ್ವನಿ ಸಂಗಮ
ಶೇಷಶ್ವಾಸ ಸಮ ಘುಮಘುಮ
ಜೀವ ಭಾವ ಹೃದಯಂಗಮ
ಬರುತಲಿಹುದು ಶ್ರಾವಣಾ
ಮತ್ತೆ ಬಂತು ಶ್ರಾವಣಾ.

ಶಿರದಲ್ಲಿರುವ ಸಹಸ್ರದಲವೇ ಬ್ರಹ್ಮರಂಧ್ರ. ಅಲ್ಲಿಂದಲೇ ಈ ಶರೀರಕ್ಕೆ ಪ್ರಾಣ ಪ್ರವೇಶ. ಅಲ್ಲಿಯೇ ಅಧ್ಯಾತ್ಮದ ಧ್ವನಿ ಕೇಳಿಸುವುದು. ಅದೇ ಯೋಗ ಸಾಧನೆ. ಅದನ್ನು ಸಾಧಿಸುವಂತೆ ಈ ಶರೀರ ರಚನೆಯಾಗಿದೆ. ಆ ಬ್ರಹ್ಮ ರಂಧ್ರ ಗೀತೆಯನ್ನು ನುಡಿಸುವಂತೆ ಈ ಬೆನ್ನುಹುರಿ ಬಿದಿರಾಗಿದೆ. ಬೆನ್ನು ಮೂಳೆಯಲ್ಲಿ ಇಪ್ಪತ್ತೆರಡು ಕೊಂಡಿಗಳಿವೆ. ಸಂಗೀತದಲ್ಲಿ ಇಪ್ಪತ್ತೆರಡು ಶ್ರುತಿಗಳು ಇವೆ. ಈ ಶರೀರದಲ್ಲಿಯೇ ಕಾವ್ಯ ಶುರುವಾಗುತ್ತದೆ. ಕಾವ್ಯ

ಎಲ್ಲಿಯೋ ಹೊರಗಿನಿಂದ ಬಂದು ಸೇರುವುದಿಲ್ಲ. ಅದು ಶರೀರದಲ್ಲಿಯೇ ಅತಿ ಸಹಜವಾಗಿ ಶ್ರುತಿಯಂತೆ ಹೊಮ್ಮುವಂತಹದು. ಹಾಗಾಗಿ ಕವಿ ನುಡಿದಿದ್ದಾರೆ: 'ನಾದವಿದು ಯಾವುದೋ ಅಗಾಧ ತಳದಿಂ ಬಂತು। ಉದೋದಿದೋ ಶ್ರಾವಣ.'

'ಶೇಷ'ವೆಂದರೆ ಕುಂಡಲಿನೀ ಶಕ್ತಿಯ ಸರ್ಪ. ಅದು ಮೂಲಾಧಾರದಲ್ಲಿರುವುದು. ಮೂಲಾಧಾರದ ಶೇಷ ನಮ್ಮ ಉಸಿರಾಟಕ್ಕೆ ತಿಳಿಯಬೇಕು. ಹಾಗೆ ತಿಳಿದು ಸರ್ಪಶಕ್ತಿ ಜಾಗೃತವಾದರೆ ಚಂದನದ ವಾಸನೆ ಬರುತ್ತದೆ.ಎಂದು ಹೇಳುತ್ತಾರೆ. ಹಾಗೆ ಜಾಗೃತಗೊಂಡ ಚಿತ್ ಶಕ್ತಿಯಿಂದ ಯೋಗಿಯ ತನು ಮನ ಘನವಾಗುತ್ತದೆ. ಆಗ ಜೀವ ಭಾವಕ್ಕೆ ಸರಿ ಹೊಂದಾಣಿಕೆಯಾಗಿ ಹೃದಯಂಗಮವಾಗುತ್ತದೆ. ಆಹ್ಲಾದದ ರಸೋತ್ಪತ್ತಿಯಾಗುತ್ತದೆ. ಹೀಗೆ ಹೃದಯಂಗಮವಾದ ಅನುಭವವನ್ನು ನೀಡುವ ಶ್ರಾವಣ ಮತ್ತೆ ಬಂತು ಎಂದು ಕವಿಯು ಹಾಡಿ; ಶ್ರಾವಣದಲ್ಲಿ ಕಾವ್ಯ ರೂಪುಗೊಳ್ಳುವ ಹಸಿರಾಗಿ ಹೊಮ್ಮಿ ಸಹೃದಯರ ಹೃದಯ ಪ್ರವೇಶಿಸುವ ಸಹಜ ಶಕ್ತಿಯನ್ನು ಬಣ್ಣಿಸಿದ್ದಾರೆ. ಇದು ಜೀವಲೋಕದ, ಮನುಕುಲದ ಗಾಥೆಯಾಗಿ, ವ್ಯಕ್ತಿ ಅದರ ಒಂದು ಭಾಗವಾಗಿ ತಲ್ಲೀನಗೊಳ್ಳುವ ಶ್ರಾವಣದ ಧ್ಯಾನವಾಗಿದೆ.

* * *

## ೧೦. ಪರಾಕಿ

ನೀ ಬೈರಾಗಿ ಇರಬಹುದು ಬಾಕೀ
ನಿನ್ನ ಮಠದಾಗ ನಾನೂ ಇರಾಕಿ ||ಪಲ್ಲ||

ಅದು ಬ್ಯಾಡ ಇದು ಬ್ಯಾಡ ಅನ್ನು
ನಿನಗೆಲ್ಲಿ ಹತ್ತಿತೀ ತೊನ್ನು?
ಚವರಾ ಬೀಸಾಕಿ, ಹಾಕಾಕಿ ಕಣ್ಣು
ನಾ ಹೊಗಳಾಕಿ–ನಿನ್ನ ಪರಾಕಿ ||೧||

ಅಡವೀ ಸೇರು, ಗುಡ್ಡಾ ಏರು ಜ್ವಾಕೀ
ಗವೀ ಹೊಗು, ಸುರಂಗವ ನೂಕಿ
ಕಾಕುಪೋಕರ ಸಂಗತಿ ಸೋಕೀ
ನೀ ಎಲ್ಲೆ ಇರು, ಅಲ್ಲೇ ಬರಾಕಿ ||೨||

ಯಾರು ಏನೂ ಅಂದರು ಅನ್ನಲಿ
ತಿನ್ನುವರು ಚೆಳ್ಳಹಣ್ಣು ತಿನ್ನಲಿ
ಜನದಾಗ ಇಲ್ಲ ನನ್ನ ಚುನ್ನಲಿ
ತಾ ಬಂದಗಿಂದ ಹರಲೀ ಹೊರಾಕಿ ||೩||

ಬಯಲಂಗಡೀಗೆ ಕದಾಗಿದಾ ಯಾಕ?
ನನಗ ಗೊತ್ತೈತಿ ನಿನ್ನ ಗಾಂಜಾ ಷೋಕ
ನೀ ತೂಗಾಡ್ತಿ ಆನಿ ಹಾಂಗ ಝೋಕ !
ಓ ಬಲ್ಲೆ - ನೀ ನನ್ನ ಗಿರಾಕಿ. ||೪||

ಆಕರ: ದ.ರಾ. ಬೇಂದ್ರೆ, ಪರಾಕಿ, ಡಾ|| ವಾಮನ ಬೇಂದ್ರೆ, (ಸಂ.) ಸಮಾಜ ಪುಸ್ತಕಾಲಯ, ಧಾರವಾಡ ೧೯೮೨, ಪು. ೧.

# ಪರಾಕಿ

ಬೇಂದ್ರೆಯವರು ಅಧ್ಯಾತ್ಮ ಸಾಧಕರಾಗಿ ಬೈರಾಗಿಯ ಭಾವದಲ್ಲಿದ್ದಾಗ ಅವರನ್ನು ಪರಾಕಿಯಾದ ಮೋಕ್ಷಕನ್ಯೆ 'ನಿನ್ನ ಜೊತೆ ನಾನು ಇರುವಾಕೆ' ಎಂದು ನೆಲೆಗೊಂಡ ಕವನ 'ಪರಾಕಿ'. ಪರಾಕಿಯು ಬೈರಾಗಿಯ ಮಹತ್ತನ್ನು ಅರಿತು ಅವನಿಗೆ ಪರಾಕು ಹಾಕುತ್ತ, ಪ್ರಶಂಸೆ ಮಾಡುತ್ತ ಅವನ ಜೊತೆಗೆ ಇರುವ ಹಂಬಲದವಳು. ನನಗೆ–ನೀನು ವಿರಾಗಿಯಾಗಿರುವುದು ಪ್ರತ್ಯೇಕ ವಿಷಯವಾಗಿ; ನಾನಂತೂ ನಿನ್ನ ಮಠದಲ್ಲಿ ಇರುವವಳು ಎಂದು ಆಕೆ ಹೇಳುತ್ತಾಳೆ. ಬೈರಾಗಿಯಾದವನು ಏನೂ ಬೇಡ ಎಂದು ಪ್ರತ್ಯೇಕವಾಗಿರುವ ರೀತಿಯನ್ನು ಬೇಂದ್ರೆಯವರು 'ನಿನಗೆಲ್ಲಿ ಹೊತ್ತಿತೀ ತೊನ್ನು' ಎಂದು ತೊನ್ನು ಆವರಿಸಿ ದೇಹವೆಲ್ಲಾ ವ್ಯಾಪಿಸುವಂತಾಗಿರುವ ವಿರಾಗಿತನವನ್ನು ಧ್ವನಿ ಪೂರ್ಣವಾಗಿ ಚಿತ್ರಿಸಿದ್ದಾರೆ. ಆದರೆ ಪರಾಕಿ ಅವನಿಗೆ ತಾನು ಅನ್ಯಳಲ್ಲ ಎಂಬ ಭಾವದಲ್ಲಿ ನುಡಿಯುತ್ತಾಳೆ:

'ಚವರಾ ಬೀಸಾಕಿ, ಹಾಕಾಕಿ ಕಣ್ಣು,
ನಾ ಹೊಗಳಾಕಿ - ನಿನ್ನ ಪರಾಕಿ.,

ಆ ವಿರಕ್ತ ಅಡವಿ ಸೇರಲಿ, ಗುಡ್ಡವೇರಲಿ, ಗವಿಸುರಂಗ ಹೊಕ್ಕರು, ನೀಚ ಅಲೆಮಾರಿಗಳ ಸಂಗದಲ್ಲಿದ್ದರೂ ತಾನು ಅಲ್ಲಿಗೆ ಬರುವವಳು. ಮೋಸ ಹೋಗುವವರು ಮೋಸ ಹೋಗಲಿ; 'ತಿನ್ನುವರು ಚಳ್ಳೆಹಣ್ಣು ತಿನ್ನಲಿ' ; ನಾನಂತೂ ಮೋಸ ಹೋಗಿಲ್ಲ . ಜನದ ಬಗ್ಗೆ ನನ್ನ ಟೀಕೆ ಇಲ್ಲ; ಹಾಗೂ ಅವರೇನಾದರೂ ಅಪವಾದದ ನುಡಿ ಆಡಿದರೆ ಅದನ್ನು ಸಹಿಸುವೆ:' ತಾಬಂದಗಿಂದ ಹರಲೀ ಹೊರಾಕಿ'. 'ಯಾರು ಏನು ಅಂದರು ಅನ್ನಲಿ' ನನಗೆ ನಿನ್ನ ವ್ಯಕ್ತಿತ್ವ ಗೊತ್ತಿರುವುದರಿಂದ ನಾನು ನಿನ್ನ ಜೊತೆ ಇರುವವಳು- ಎಂದು ಪರಾಕಿ ನುಡಿಯುತ್ತಾಳೆ.

ಈ ಬಗೆಯಲ್ಲಿ ಬೈರಾಗಿಯ ಜೊತೆ ಮುಕ್ತವಾಗಿ ಒಂದಾದ ಆಕೆಯ ನೇಹವನು ಬೇಂದ್ರೆಯವರು 'ಬಯಲಂಗಡಿಗೆ ಕದಾ ಗಿದಾ ಯಾಕ?' ಎಂಬ ರೂಪಕದಿಂದ ಬಣ್ಣಿಸಿ ಜ್ಞಾನಕನ್ಯೆ ಅವನ ಜೊತೆ ಒಂದಾದ ಭಾವವನ್ನು ಕಾವ್ಯವಾಗಿಸಿದ್ದಾರೆ. ಅವನು ತನ್ನದೇ ಪರಬ್ರಹ್ಮದ ಗುಂಗಿನಲ್ಲಿರಲು - ಗಾಂಜಾಷೋಕಿಗೆ ಒಳಗಾಗಿದ್ದು ತನಗೆ ಗೊತ್ತಿದೆ ಎಂದು; ಆ ಷೋಕು, ಸುಖಭೋಗದಲ್ಲಿ 'ನೀ ತೂಗಾಡ್ತಿ ಆನಿಹಾಂಗ ಝೋಕ'; ನಿನ್ನದು ಆನೆಯ ವ್ಯಕ್ತಿತ್ವ ಎಂಬುದು ನನಗೆ ಗೊತ್ತು. ನಾನು ನಿನ್ನಂತಹವನಿಗೆ ಕಾಯುತ್ತಿರುವವಳು 'ನೀ ನನ್ನ ಗಿರಾಕಿ' ಎಂದು ಜ್ಞಾನಕನ್ಯೆ ನುಡಿಯುತ್ತಾಳೆ. ಇಲ್ಲಿ – ನನ್ನ ಸಂಗ ಇಲ್ಲದೆ ಮೋಕ್ಷವನ್ನು ಪಡೆಯಲಾರೆ, ಅದಕ್ಕಾಗಿ ನಾನು ನಿನ್ನ ಜೊತೆಗಿರುವೆ ಎಂಬ ಭಾವವಿದೆ. ಬೇಂದ್ರೆಯವರು ಯೋಗಸಾಧನೆಯಲ್ಲಿ ತನ್ನ ಜೊತೆಗೆ ಎಡೆಬಿಡದೆ ಇದ್ದ 'ಜ್ಞಾನಕನ್ಯೆ'ಯನ್ನು ಕುರಿತು ಬರೆದ ಒಂದು ಅಪರೂಪದ ಕವನ ಇದು.

* * *

## ೧೧. ಮಾತೃ ವಂದನ

ಜೈ ಭೂಮಾತೇ, ಜೈ ಭಾರತ ಮಾತೇ
ಆಮಾತೇ ಈಮಾತೇ
ಸಕಲ ಧೈರ್ಯದಾತೇ ॥ಪಲ್ಲ॥

ಭೂಮಂಡಲ ಏಕರಾಷ್ಟ್ರ
ಸರ್ವ ವರ್ಣ ಮಾನವಾ
ಕೃತಯುಗದಾ ಪರ್ವದಲ್ಲಿ
ಕಲಿತನೋ ನವೋನವಾ ॥೧॥

ನಿನ್ನ ಕ್ಷೇತ್ರ ತಾ ಪವಿತ್ರ
ನೀನು ಸೂತ್ರ ನಡೆಸು
ಆ ಸ್ವಧರ್ಮ ಭಾವಕರ್ಮ
ಪ್ರೀತಿಯಿಂದ ಹಿಡಿಸು. ॥೨॥

ಕೂಡಿ ನಡೆ, ಕೂಡಿ ನುಡಿ
ಮೂಡಿಸು ನೀ ನಮ್ಮಲಿ
ಅದೇ ಸ್ವಂತ ಅದೇ ಪಂಥ
ಅದೇ ಬಾಳಿನಾ ಬೆಲಿ. ॥೩॥

ಆಕರ: ದ.ರಾ. ಬೇಂದ್ರೆ., ಪರಾಕಿ, ಡಾ॥ ವಾಮನಬೇಂದ್ರೆ, (ಸಂ.) ಸಮಾಜ ಪುಸ್ತಕಾಲಯ, ಧಾರವಾಡ, ೧೯೮೨, ಪು. ೨೩

# ಮಾತೃವಂದನ

ಬೇಂದ್ರೆಯವರು 'ಮಾತೃವಂದನ' ಕವನದಲ್ಲಿ ಭೂಮಾತೆ ಮತ್ತು ಭಾರತ ಮಾತೆಯರಿಗೆ ನಮಿಸುತ್ತ ವಿಶ್ವತೋ ವಿಶಾಲ ಚಿಂತನೆಯನ್ನು ನೀಡಿದ್ದಾರೆ. 'ಭಾರತ'ವು ಇಡೀ ವಿಶ್ವದ ಭೂಮಿಯ ಒಂದು ಭಾಗವಾದುದರಿಂದ ಮೊದಲು 'ಜೈ ಭೂಮಾತೆ' ಎಂದು ಹಾಡಿದ್ದಾರೆ. ಈ ಮಾತೆಯರೇ ಸಕಲ ಮಾನವರಿಗೆ ಧೈರ್ಯ, ಸಾಹಸ, ಚೈತನ್ಯ ನೀಡುವವರಾದುದರಿಂದ `ಆ ಮಾತೇ ಈ ಮಾತೇ। ಸಕಲ ಧೈರ್ಯದಾತೆ' ಎಂದು ಘೋಷಿಸಿದ್ದಾರೆ.

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ವರ್ಣಗಳ ವಿಂಗಡಣೆಯೇ ಭಾರತದಲ್ಲಿ ಶೋಷಣೆಗೆ ಕಾರಣವಾಗಿದೆ. ವಿಷ್ಣುವಿನ ಉತ್ತಮಾಂಗದಲ್ಲಿ ಬ್ರಾಹ್ಮಣರು, ಪಾದದಲ್ಲಿ ಶೂದ್ರರು ಜನಿಸಿದರು ಎಂಬ ಕಲ್ಪನೆ ಇದೆ. ಅಲ್ಲಿ ಉತ್ತಮಾಂಗದಲ್ಲಿ ಹುಟ್ಟಿದವರು ಮೇಲು; ಪಾದದಲ್ಲಿ ಹುಟ್ಟಿದವರು ಕೀಳು ಎಂಬ ತರತಮ ಭಾವನೆ ಇದೆ. ಶೂದ್ರರು ಕೇವಲ ಮೇಲ್ವರ್ಗದವರ ಸೇವೆಗೆ ಅರ್ಹರು; ವಿದ್ಯೆಗೆ ಅರ್ಹರಲ್ಲ ಎಂಬ ಭಾವನೆ ನಮ್ಮ ವರ್ಣ ಅಂದರೆ ಜಾತಿಯ ವ್ಯವಸ್ಥೆಯಲ್ಲಿದೆ. ಮನುಷ್ಯನ ಬಣ್ಣದ, ವರ್ಣ ದ್ವೇಷದ ದಳ್ಳುರಿಯಿಂದ ನೀಗ್ರೋಗಳು ಇನ್ನೂ ಮಾನವರಂತೆ ಬದುಕಲು ಬಿಳಿಯರ ವಿರುದ್ಧ ಹೋರಾಡುತ್ತಲೇ ಇದ್ದಾರೆ. ಹೀಗಿರಬೇಕಾದರೆ ವರ್ಣ ವ್ಯವಸ್ಥೆಯನ್ನು ಖಂಡಿಸಿ 'ಸರ್ವವರ್ಣ ಮಾನವಾ' ಎಂದು ಬೇಂದ್ರೆಯವರು ಸಾರಿ ಸಮಾನತೆಯ ಸಮದರ್ಶನದ ನಿಲುವನ್ನು ಪ್ರತಿಪಾದಿಸಿದ್ದಾರೆ.

ಕೃತಯುಗದಲ್ಲಿ ಮನುಷ್ಯ ಮನುಷ್ಯರ ಮಧ್ಯೆ ಉತ್ತಮ, ಅಧಮ; ಮೇಲು, ಕೀಳು; ಶ್ರೇಷ್ಠ, ಕನಿಷ್ಠ ಎಂಬ ಭೇದ ಭಾವವಿರಲಿಲ್ಲ. ಆಗ ಇಡೀ ಮಾನವ ಕುಲ ಒಂದು ಎಂಬ ಭಾವವಿತ್ತು. ಅಂತಹದೆ ನೂತನ ಭಾವ ಈಗ ಮೂಡಲಿ ಎಂದು ಕವಿಯು ಆಶಿಸಿದ್ದಾರೆ.

ಬೇಂದ್ರೆಯವರು ಈ ಕಾವ್ಯದಲ್ಲಿ ವಾಸ್ತವಿಕ ಹಾಗೂ ವೈಜ್ಞಾನಿಕನೆಲೆಯಲ್ಲಿ ಭೂಮಿ ತಾಯಿ ಮತ್ತು ಮಾನವರ ಸಂಬಂಧವನ್ನು ವಿಶ್ಲೇಷಿಸಿದ್ದಾರೆ. ಈ ಭೂಮಿಯ ಮೇಲಿರುವ ಎಲ್ಲ ಚರಾಚರ ವಸ್ತುಗಳು ಅವಳ ಸೂತ್ರದ ಗೊಂಬೆಗಳು. ಅವಳು ಸೂತ್ರ ಹಿಡಿದು ಆಡಿಸುವವಳು. ಅವಳ ಸೂತ್ರದ ಎಳೆಯ ಏರುಪೇರಿನಲ್ಲಿ ಇಡೀ ಜೀವಕೋಟಿ ತಲ್ಲಣಿಸಿ ಹೋಗುತ್ತದೆ. ಅದನ್ನು ಅರಿತ ವಿವೇಕಶಾಲಿ ಮಾನವ ತನ್ನ ಕ್ಷುಲ್ಲಕ ಸಂಕುಚಿತ ಭಾವವನ್ನು ಬಿಟ್ಟು 'ಭೂಮಂಡಲ ಏಕರಾಷ್ಟ್ರ', 'ಸರ್ವವರ್ಣಮಾನವ' ಎಂಬುದನ್ನು ಸ್ವಧರ್ಮದಂತೆ ಪಾಲಿಸಬೇಕು. ಆಗ ಮಾತ್ರ ಅವನ ಉಳಿವು. ಹೀಗಾಗಿ ಅವನಿಗೆ 'ಆ ಸ್ವಧರ್ಮ ಭಾವ ಕರ್ಮ' ವನ್ನು ಪ್ರೀತಿಯಿಂದ ಮನನವಾಗುವಂತೆ ಮಾಡು ಎಂದು ಪ್ರಕೃತಿ ಮಾತೆಯಾದ ಭೂಮಿತಾಯಿಯನ್ನು ಪ್ರಾರ್ಥಿಸಿದ್ದಾರೆ.

'ಕೂಡಿ ನಡೆ, ಕೂಡಿ ನುಡಿ' ಎಂಬುದು ಬೇಂದ್ರೆಯವರು ನೀಡಿದ ವಿಶ್ವ ಸಂದೇಶವಾಗಿದೆ. ಆ ಸಂದೇಶದಂತೆ ನಡೆಯುವ ಮನಸ್ಸನ್ನು ಜನರಲ್ಲಿ ಮೂಡಿಸು ಎಂದು ಭೂಮಾತೆ ಭಾರತಮಾತೆಯರಲ್ಲಿ ಅವರು ಪ್ರಾರ್ಥಿಸಿದ್ದಾರೆ. ಜನರ ಸೃಷ್ಟಿಗೆ ಕಾರಣಳಾದ ಭೂತಾಯಿಯನ್ನು ಹೀಗೆ ಬೇಡಿಕೊಳ್ಳುವುದರಲ್ಲಿ- ಮನುಷ್ಯರಲ್ಲಿ ಉತ್ತಮ ಪ್ರಕೃತಿ ರೂಪುಗೊಳ್ಳಲು ಪ್ರಕೃತಿಯೇ ಆಶೀರ್ವದಿಸಬೇಕೆಂಬ - ಕವಿಯ ಆಶಯ ಅತಿ ಸಹಜ ಮತ್ತು ಅರ್ಥ ಪೂರ್ಣವಾಗಿದೆ. ವಿಶ್ವದ ಶಾಂತಿ ಮತ್ತು ಉಳಿವಿಗೆ `ಕೂಡಿ ನಡೆ, ಕೂಡಿ ನುಡಿ' ಎಂಬುದೇ ಸ್ವಂತ ಅಂದರೆ ಅಸಲಿಯಾದ ಚಿಂತನೆ; ಅದೇ ಜಗತ್ತಿನ ಪಂಥ ಅಂದರೆ ಧರ್ಮ; ಅದೇ ಈ ಜಗದ ಎಲ್ಲ ಜನರ ಬಾಳಿನ ಬೆಲೆ.

* * *

## ೧೨. ನಾಳಿನ ಕನಸು

ನಾಳಿನಾ ನಾಳಿನಾ
ಕನಸನು ಕಾಣುವುದೆನ್ನ ಮನಾ ||ಪಲ್ಲ||

ದೂರದ ದೂರದ ನದೀ ತೀರದಾ
ಗಾಳುಮಾತುಗಳಾ ಗಾಳಿ ಸೇರದಾ
ಬಾಳುಕೆಡಿಸುವರ ಸಂಗತಿ ಮೀರಿದಾ
ಹಸುಹಕ್ಕಿಯ ಸಹವಾಸದೆ ಮಾಸದೆ
ನಳಿನಳಿಸುವುದಾ ಪುಣ್ಯವನಾ ||ನಾಳಿನಾ||

ಗುಡಿಸಲವನ್ನೆ ಗುಡಿಯನುವಂತೆ
ಬದುಕುವರೆಲ್ಲಾ ದೀನ ಜನಾ.
ಚಿಂತೆಯ ಬಿಟ್ಟು ಎದೆಗೆದೆ ಕೊಟ್ಟು
ಕಳೆಯುವೆನಲ್ಲಿಯೇ ನನ್ನ ದಿನಾ ||ನಾಳಿನಾ||

ಆಕರ: ದ.ರಾ. ಬೇಂದ್ರೆ, ಪರಾಕಿ ಡಾ|| ವಾಮನ ಬೇಂದ್ರೆ (ಸಂ.), ಸಮಾಜ ಪುಸ್ತಕಾಲಯ, ಧಾರವಾಡ, ೧೯೮೨, ಪು. ೨೪.

# ನಾಳಿನ ಕನಸು

ಬೇಂದ್ರೆಯವರು ಸಾಧಾರಣ ಕುಟುಂಬದಲ್ಲಿ ಜನಿಸಿ ಬಡತನದ ಬೇಗೆಯಲ್ಲಿ ಬೆಂದು 'ಹಸಿದವ ಬಲ್ಲ ಹಸಿವೆಯ ಶೂಲಿ' ಎಂಬ ತಮ್ಮ ಅನುಭವವನ್ನು ಕಾವ್ಯವಾಗಿಸಿ; 'ಕುರುಡುಕಾಂಚಾಣ ಕುಣಿಯುತಲಿತ್ತು। ಕಾಲಿಗೆ ಬಿದ್ದವರ ತುಳಿಯುತಲಿತ್ತೋ' ಎಂದು ಹಣದ ಅಟ್ಟಹಾಸದ ಕಾಲ್ತುಳಿತದಲ್ಲಿ ನಲುಗಿದ ನೋವನ್ನು ಇಡೀ ಲೋಕದ ದೀನದಲಿತರ, ಅಸಹಾಯಕರಾದ ಬಡಬಗ್ಗರ ನುಡಿಯಾಗಿಸಿದ್ದಾರೆ. ಅವರು ವರಕವಿಯಾಗಿ ವಿಕಾಸಗೊಂಡಂತೆ ಕಂಡ 'ನಾಳಿನಾ ಕನಸು' – ಶಾಂತ ನಿರ್ಮಲ ಶುದ್ಧ ದೀನ ಜನರೊಡನೆ ತಮ್ಮ ಜೀವಿತದ ಉಳಿದ ಕಾಲವನ್ನು ಕಳೆಯುವುದಾಗಿದೆ. ಆ ಆಶಯದಲ್ಲಿ ನಮ್ಮ ಭಾರತ ಹಾಗೂ ವಿಶ್ವ ಇರಬೇಕಾದ ರೀತಿಯ ಸುಂದರ ಕನಸಿದೆ.

'ದೂರದ ದೂರದ ನದೀ ತೀರದಾ
ಗಾಳು ಮಾತುಗಳ ಗಾಳಿ ಸೇರದಾ
ಬಾಳು ಕೆಡಿಸುವರ ಸಂಗತಿ ಮೀರಿದಾ
ಹಸು ಹಕ್ಕಿಯು ಸಹವಾಸದೆ ಮಾಸದೆ
ನಳಿನಳಿಸುವುದಾ ಪುಣ್ಯವನಾ.'

ಅವರು ಕನಸುವ ಪುಣ್ಯವನ ಎಲ್ಲ ಸಂಕುಚಿತ ವಲಯವನ್ನು ಬಿಟ್ಟು; ವಿಶ್ವ ವಿಶಾಲ ದೃಷ್ಟಿಯನ್ನು, ತಂಪು ಫಲವತ್ತತೆಯನ್ನು ಹೊಂದಿದ - 'ದೂರದ ದೂರದ ನದೀ ತೀರ.' ಕ್ಷುಲ್ಲಕವಾದ, ಒರಟಾದ ವ್ಯರ್ಥ 'ಗಾಳು ಮಾತು'ಗಳ ಗಾಳಿ ಸುಳಿಯದ ತಾಣ. ಇನ್ನೊಬ್ಬರ ಬಾಳನ್ನು ಹಾಳು ಮಾಡುವವರ ಸ್ನೇಹವೆನ್ನು ಮಾಡದ ನೇಹಿಗರ ನೆಲೆ. ಹಸುಹಕ್ಕಿಯ ಸಹವಾಸದಲ್ಲಿ ಮಾಸದೆ, ಅಶುದ್ಧವಾಗದೆ ನಳಿನಳಿಸುವ ಪವಿತ್ರ ತೋಟ.

ಬೇಂದ್ರೆಯವರು 'ಹಸುಮಗ' ದ ಸಾದೃಶ್ಯದ ಮೇಲೆ 'ಹಸುಹಕ್ಕಿ' ಟಂಕಿಸಿದ್ದಾರೆ. ಹಸುಹಕ್ಕಿ ಹಾಗೂ ಹಸುಗೂಸಿನ ಸಹವಾಸವೆಂದರೆ:

'ಕೂಸು ಇದ್ದ ಮನೆಗೆ ಬೀಸಣಿಗೆಯಾತಕ
ಕೂಸು ಕಂದಯ್ಯ ಒಳ ಹೊರಗ ಆಡಿದರ
ಬೀಸಣಿಗೆ ಗಾಳಿ ಸುಳಿದಾವೊ'.

ಎಂಬಂತಹ ಸುಮಧುರ ಭಾವದ್ದು. ಒಂದು ಎಳೆಯ ಜೀವವಿದ್ದರೆ ಅಲ್ಲಿ ಸಂತೋಷ, ಹಿಗ್ಗು, ಲವಲವಿಕೆ, ಜೀವಂತಿಕೆ ಇರುತ್ತದೆ. ಅದರ ಚಲನವಲನ ಮಾತುಕತೆಯಿಂದ ತಂಗಾಳಿ ಬೀಸಿದಂತಾಗುತ್ತದೆ. ಮಕ್ಕಳು ದೇವರಿಗೆ ಸಮಾನ. ಅವರ ಹೃದಯದಲ್ಲಿ ಕಲ್ಮಷವಿರುವುದಿಲ್ಲ. ಮಗುವಿನ ನಿರ್ಮಲ ಹೃದಯವೇ ದೇವರ ವಾಸ. ಅಂತಹ ಹಸುಮಗುವಿನ, ಹಸು ಹಕ್ಕಿಯ ಸಹವಾಸವಿರುವಾಗ ಮನಸ್ಸು ಮಾಸುವುದಿಲ್ಲ.

ಬೇಂದ್ರೆಯವರು ತಮ್ಮ ಮನಸ್ಸಿನ ಇಚ್ಛೆಯಂತೆ ನಾಳಿನ ಕನಸನ್ನು:

'ಗುಡಿಸಲವನ್ನೆ ಗುಡಿಯನುವಂತೆ
ಬದುಕುವರೆಲ್ಲಾ ದೀನ ಜನಾ.
ಚಿಂತೆಯ ಬಿಟ್ಟು ಎದೆಗೆದೆ ಕೊಟ್ಟು
ಕಳೆಯುವೆನಲ್ಲಿಯೆ ನನ್ನ ದಿನಾ.'

ಎಂದು ಕಂಡಿರುವಲ್ಲಿ ದೀನಜನರ ಕುಟುಂಬದ ನೆಲೆಯಾದ ಗುಡಿಸಲಿನ ಪಾವಿತ್ರ್ಯ, ಶುದ್ಧ ಜೀವನ ಶೈಲಿ ಕಣ್ಣಿಗೆ ಕಟ್ಟುತ್ತದೆ. ಮಹಲಿನಲ್ಲಿ ವಾಸಿಸುವ ಶ್ರೀಮಂತರ ದ್ವೇಷ, ಅಸೂಯೆ ತುಂಬಿದ ಮನೆಯನ್ನು ವೈಭವದ ತಾಣವಾಗಿಸಿಕೊಂಡು ಜೀವಿಸುವ ಕಿರಿಕಿರಿಯ ಬಾಳು ಇವರದಲ್ಲ. 'ಗುಡಿ'ಯ ಶಾಂತ ರೀತಿ ಸಿರಿವಂತರಿಗಿಲ್ಲ ಎಂಬ ವ್ಯಂಗ್ಯಾರ್ಥವಿದೆ. ಅಂತಹ ಗುಡಿಸಲಿನಲ್ಲಿ ವಾಸಿಸುವ ದೀನರ ಜೊತೆ ನನ್ನ ಜೀವಮಾನದ ಉಳಿದ ದಿನಗಳನ್ನು ಅವರ ಎದೆಗೆ ಎದೆ ಕೊಟ್ಟು, ಕಳೆಯುತ್ತೇನೆ. ಅವರ ಉದ್ಧಾರ, ಜಾಗೃತಿ, ಏಳ್ಗೆಗೆ ನನ್ನ ಕಾಲವನ್ನು ವ್ಯಯಿಸುತ್ತೇನೆ. ಅವರೊಡನೆ ಪ್ರೀತಿಯಿಂದ ಒಂದಾಗುತ್ತೇನೆ ಎಂದಿದ್ದಾರೆ. ಈ ಕವನದಲ್ಲಿ ಬೇಂದ್ರೆಯವರು ದೀನದಲಿತರ ಪರವಾದ ನಿಲುವನ್ನು ಹೊಂದಿ ಅವರನ್ನು ಏಳ್ಗೆಯತ್ತ ಕೊಂಡೊಯ್ಯುವ ಪರಿಸರ ನಿರ್ಮಾಣ ಮಾಡಬೇಕೆಂಬ ಮನದಾಸೆಯನ್ನು ವ್ಯಕ್ತ ಪಡಿಸಿದ್ದಾರೆ.

* * *

## ೧೩. ಸರ್ವಮಂಗಲೆ

ಎಲ್ಲಿದ್ದ ಅವಿನೀತ ದುರ್ವಿನೀತನು ಎಲ್ಲಿ?
ಕಾವೇರಿ ಇನ್ನುನೂ ಲೋಪಾಮುದ್ರೆಗೆ ಬುಲ್ಲಿ.

ಇಲ್ಲಿಹನು ಮಕರಂದ ಆ ಮಿಲಿಂದನು ಇಲ್ಲಿ
ಆ ನಳವು ಬಂದಿತ್ತು ದಮಯಂತಿ ಕೈ ಥಲ್ಲಿ.

ಅಸ್ಮಿತೆಯ ವಿಸ್ಮಿತತೆ ಆ ಪ್ರಭಾಕರನಲ್ಲಿ
ಸರ್ವಮಂಗಳೆ ಹಸಿರು ಹನ್ನೆರಡು ತಿಂಗಳ ಬಳ್ಳಿ.

---

ಆಕರ: ದ.ರಾ. ಬೇಂದ್ರೆ, ಕಾವ್ಯ ವೈಖರಿ, - ಡಾ।। ವಾಮನ ಬೇಂದ್ರೆ (ಸಂ.), ಸಮಾಜ ಪುಸ್ತಕಾಲಯ, ಧಾರವಾಡ ೧೯೮೨, ಪು. ೨೯.

# ಸರ್ವಮಂಗಲೆ

ಬೇಂದ್ರೆಯವರು ಈ ಕವನವನ್ನು ಬರೆದುದು ತಾ.೧೦-೭-೮೧. ಅವರು ತೀರಿಹೋದುದು ತಾ.೨೬-೧೦-೮೧. ಈ ಕಾರಣದಿಂದ ಅವರು ಕಾಯಿಲೆ ಬಿದ್ದಾಗ ತನ್ನ ಮಗಳು ಮಂಗಲಳನ್ನು ನೆನೆದು ಆಕೆಯನ್ನು ನೋಡಬೇಕೆಂಬ ಮನಸ್ಸಿನಿಂದ ಬರೆದ ಕವನ ಇದಾಗಿದೆ. ಬೇಂದ್ರೆಯವರು ಮಗಳನ್ನು ಔರಂಗಾಬಾದಿಗೆ ನೀಡಿದ್ದಾರೆ. ಅದು ವಿದರ್ಭದಲ್ಲಿದೆ. ಆಕೆಯ ಇಬ್ಬರು ಗಂಡು ಮಕ್ಕಳ ಹೆಸರು **ಮಕರಂದ, ಮಿಲಿಂದ.** ಆಕೆಯ ಪತಿ **ಪ್ರಭಾಕರ.** ಅವರನ್ನೆಲ್ಲ ನೆನೆದು ಬರೆದ ಕವನ ಇದಾಗಿದೆ. ಬೇಂದ್ರೆಯವರು ಕಾವೇರಿ ನಾಡಿನವರು. ಆದರೆ ಮಗಳನ್ನು ವಿವಾಹವಾಗಿ ನೀಡಿರುವುದು ವಿದರ್ಭಕ್ಕೆ. ಲೋಪಾಮುದ್ರೆ ವಿದರ್ಭ ರಾಜನ ಮಗಳು ಹಾಗೂ ಅಗಸ್ತ್ಯ ಮುನಿಯ ಹೆಂಡತಿ. ಈ ಎಲ್ಲ ವಾಸ್ತವ ಮತ್ತು ಪುರಾಣಗಳ ಹಿನ್ನೆಲೆಯಿಂದ ಈ ಕವನವನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ.


ಕವಿಯು ತನ್ನ ಮಗಳು ಮಂಗಲಳನ್ನು ಸರ್ವಮಂಗಲೆ ಎಂದು ಕರೆದಿರುವ ಕವನದ ಶೀರ್ಷಿಕೆಯಲ್ಲಿಯೇ ಅವಳಿಗೆ ಒಳ್ಳೆಯದಾಗಲಿ; ಆಕೆ ಸದಾ ಮಂಗಲೆಯಾಗಿ, ಮುತ್ತೈದೆಯಾಗಿ ಇರಲಿ ಎಂಬ ಮಂಗಳ ಆಶೀರ್ವಾದವಿದೆ. ಅವರಿಗೆ ಕಾಯಿಲೆ ಹೆಚ್ಚಾಗಿ ತಾನು ಉಳಿಯುವೆನೋ ಇಲ್ಲವೋ ಎಂಬ ಮನಸ್ಸಿನ ತಳಮಳ ಜಾಸ್ತಿಯಾದಾಗ ಮಗಳನ್ನು ನೆನೆದಿದ್ದಾರೆ. ಆಕೆಯನ್ನು ಕರ್ನಾಟಕದಲ್ಲಿಯೆ ಎಲ್ಲಾದರೂ ವಿವಾಹ ಮಾಡಿಕೊಟ್ಟಿದ್ದರೆ ಚೆನ್ನಾಗಿತ್ತು. ದೂರದ ಊರಿಗೆ ಕೊಟ್ಟು ತನ್ನ ಕೊನೆಗಳಿಗೆಯಲ್ಲಿ ಅವಳನ್ನು ನೋಡಲಾಗಲಿಲ್ಲವಲ್ಲ ಎಂಬ ವ್ಯಥೆ ಕಾಡಿದೆ. ಯಾವ ದುಷ್ಟಶಕ್ತಿಗಳ ಕಾರಣವಾಗಿ ತಾನು ತನ್ನ ಮಗಳನ್ನು ಕಾವೇರಿಯ ನಾಡಿನಿಂದ ಲೋಪಾಮುದ್ರೆಯ ದೂರದ ಊರಿಗೆ (ಬುಲ್ಲಿ = to become extensive) ಸಂಬಂಧ ವಿಸ್ತರಿಸಿ ನೀಡಿದೆನಲ್ಲ ಎಂಬ ನೋವು ಮೊದಲ ಚರಣದಲ್ಲಿದೆ.

ದಮಯಂತಿಯಂತಹ ತನ್ನ ಮಗಳಿಗೆ ನಳನಂತಹ ಸಂಬಂಧ ಕೂಡಿ ಬಂತು,

ವಿವಾಹ ಮಾಡಿದೆ. ಈಗ ಆಕೆಗೆ ಮಕರಂದ, ಮಿಲಿಂದ ಎಂಬ ಎರಡು ಗಂಡು ಮಕ್ಕಳು ಹಾಗೂ ಸ್ಮಿತಾ ಎಂಬ ಹೆಣ್ಣು ಮಗಳಿದ್ದಾಳೆ. ಅವಳ ಜೀವನಕ್ಕೆ ಅರ್ಥ ಬಂದಿರುವುದರಿಂದ ತನ್ನ ಮೊಮ್ಮಕ್ಕಳು ಇಲ್ಲೇ ಇದ್ದಾರೆ ಎಂದು ಭಾವಿಸಬೇಕು ಎಂದು ಸಮಾಧಾನಪಟ್ಟ ಮನಸ್ಸಿನಭಾವ ಎರಡನೆಯ ಚರಣದಲ್ಲಿದೆ.

ತನ್ನ ಅಳಿಯ ಪ್ರಭಾಕರನಲ್ಲಿ ಆಶ್ಚರ್ಯಗೊಳಿಸುವ ರೀತಿಯ ತಿಳುವಳಿಕೆ ಇದೆ. ಅವನು ಅರ್ಥಪೂರ್ಣವಾಗಿ ಬದುಕುತ್ತಿದ್ದಾನೆ. ಆದಕಾರಣ ತನ್ನ ಕರುಳ ಬಳ್ಳಿಯಾದ ಮಗಳು ಸದಾ ಸಂತಸದಿಂದಿದ್ದಾಳೆ. ಅದು 'ಹಸಿರು ಹನ್ನೆರಡು ತಿಂಗಳ ಬಳ್ಳಿ' ಎಂಬ ತೃಪ್ತಿಯ ಶಾಂತ ಚಿತ್ತ ಭಾವ ಮೂರನೆಯ ಚರಣದಲ್ಲಿದೆ. ಇದೊಂದು ಬೇಂದ್ರೆಯವರ ತೀವ್ರ ಭಾವಲಹರಿಯ ತುಂಟತನ ಬೆರೆತ ಆತ್ಮೀಯ ಭಾವದ ಅಪರೂಪ ಕವನ.

* * *



ಪದರು ಪದರುಗಳಲ್ಲಿ ಅನೇಕಾರ್ಥ, ಅನೇಕ ಪ್ರತಿಮೆಗಳಿಂದ ಇಡಿಕಿರಿದಿರುವ 'ನಾಕುತಂತಿ' ಪದ್ಯದ ಪ್ರವೇಶಕ್ಕೆ ನೀವು ಅಗತ್ಯವಾದ ಬಹು ಒಳ್ಳೆಯ ವ್ಯಾಖ್ಯಾನ ಕೊಟ್ಟಿದ್ದೀರಿ. ಇದಕ್ಕೆ ಸಂದಿರುವ ನಿಮ್ಮ ಚಿಂತನೆ, ಶ್ರಮಗಳು ಈ ಬರವಣಿಗೆಯಲ್ಲಿ ಸ್ಪಷ್ಟವಾಗಿ ಕಾಣುತ್ತವೆ.

ಕೆ.ವಿ. ಸುಬ್ಬಣ್ಣ

'ನಾಕುತಂತಿ'ಯನ್ನು ನೀವು ಆಳವಾಗಿ ಅಭ್ಯಸಿಸಿ ಬರೆದಿದ್ದೀರಿ. ಅಭಿನಂದನೆಗಳು. ನಾನೂ ಆ ಕೃತಿಯ ಬಗೆಗೆ ಬರೆದಿದ್ದೇನೆ, ಆದರೆ ನಿಮ್ಮಷ್ಟು ಆಳಕ್ಕಿಳಿಯದೆ.

ಪ್ರೊ|| ಸಿ. ಪಿ. ಕೃಷ್ಣಕುಮಾರ್

ಬೇಂದ್ರೆಯವರ 'ನಾಕುತಂತಿ' ಕವನದಲ್ಲಿ ಅಕ್ಷರಗಳ ದೊಂಬರಾಟವಿದೆಯೆಂದು, ಅದರ ಅರ್ಥವನ್ನು ತಿಳಿಯದೆ ಗಳುಹುತ್ತಿದ್ದ ವಿದ್ವಾಂಸರ ಬಾಯಿ ಮುಚ್ಚಿಸಿದ್ದೀರಿ. ಪ್ರತಿಯೊಂದು ಸಾಲಿನ ಅರ್ಥವನ್ನು ಸಮರ್ಥವಾಗಿ ವ್ಯಾಖ್ಯಾನಿಸಿದ್ದೀರಿ. ಈಗ ಬೇಂದ್ರೆಯವರು ಬದುಕಿದ್ದಿದ್ದರೆ ನಿಮ್ಮ ವ್ಯಾಖ್ಯಾನವನ್ನು ಓದಿ ಸಂತೋಷದಿಂದ ನಿಮ್ಮ ಬೆನ್ನು ತಟ್ಟುತ್ತಿದ್ದರೆಂದು ನನಗೆ ಅನ್ನಿಸುತ್ತಿದೆ.

ಪ್ರೊ|| ಹೆಚ್.ಎಸ್. ಹರಿಶಂಕರ್

ಡಾ|| ಜಿ.ಕೃಷ್ಣಪ್ಪನವರು 'ಹೂತಿದ ಹುಣಸಿ'ಯ ಮೂಲಕ ಬೇಂದ್ರೆ ಕವಿತೆಗಳ ಅಧ್ಯಯನದ ಕ್ಷೇತ್ರದಲ್ಲಿ ಹೊಸದೊಂದು ಅಧ್ಯಾಯವನ್ನೇ ತೆರೆದಿದ್ದಾರೆಂದರೆ ಅದು ಅತಿಶಯೋಕ್ತಿಯಲ್ಲ. ಈ ಕೃತಿಯ ಮೂಲಕ ಕೃಷ್ಣಪ್ಪನವರು ಬೇಂದ್ರೆಯವರ ಭಾವಗೀತ ಸಾಗರದ ಆಳಕ್ಕಾಳಕ್ಕೆ ಇಳಿದು ಹೋಗಿ, ಮುತ್ತು ರತ್ನಗಳನ್ನು ಎತ್ತಿ ತಂದು, ಅದನ್ನು ಆ ಕಾವ್ಯಸಾಗರದ ದಡದಲ್ಲಿಯೇ ಕುಳಿತಿದ್ದವರಿಗೆ ಉದಾರವಾಗಿ ಹಂಚಿಬಿಟ್ಟಿದ್ದಾರೆ.

ಪ್ರೊ|| ಕೆ. ಅನಂತರಾಮು

ಡಾ|| ಜಿ.ಕೃಷ್ಣಪ್ಪನವರ 'ನಾಕುತಂತಿ' ಪ್ರಬಂಧ ಎಷ್ಟು ಬೇಕೋ ಅಷ್ಟನ್ನು ಮಾತ್ರ ಹೇಳುತ್ತದೆ. ಅನಗತ್ಯ ಹಿಂಜುವಿಕೆ, ಪುನರಾವರ್ತನೆ ಇಲ್ಲಿಲ್ಲ. ಇದೊಂದು ಕೆನೆಯಂತಹ ಬರವಣಿಗೆ. ಈ ಪುಟ್ಟ ಲೇಖನದ ಹಿಂದೆ ಸಾಕಷ್ಟು ಅಧ್ಯಯನ, ಚರ್ಚೆ, ಚಿಂತನೆ, ತಾಳ್ಮೆಗಳಿವೆ.

ಡಾ|| ಎಸ್. ಪಿ. ಪದ್ಮಪ್ರಸಾದ್

Good Touch 512626/517919